ಪಂಚಮ

ಸಂಪುಟ : 8 ಮಾರ್ಚಿ 1984 ಬೆಲೆ 1–00 ಸಂಚಿಕೆ : 4–5

ವೇಶ್ಯಾ ಬದುಕಿನ ಆರು ನೋವಿನ ಮುಖಗಳು

ಹಿಂದಿಯಿಂದ

ಅನುವಾದ : ತಿಪ್ಪೇಸ್ವಾಮಿ



ಸಂಬಂಧ

ಸಾಲ್ಕನೆಯ ಸಾರಿ ಗರ್ಭಪಾತ ಮಾಡಿಸಿಕೊಳ್ಳಲು ಬಂದ ತನ್ನ ಬಾಲ್ಯದ ಗೆಳತಿ ಉಮಾಳನ್ನು ಕುರಿತು ಡಾ॥ ಶೀಲಾ ಕೇಳಿದಳು–ಮೂರು ಸಾರಿ ನಿನ್ನ ಗರ್ಭಪಾತ ಮಾಡಿಸಿದ್ದೇನೆ. ನೀನು ಪ್ರತಿ ಸಾರಿ ಬಂದಾಗಲೂ ಕಾರಣ ಕೇಳಿದೆ. ಆದರೆ ನೀನು ಮಾತ್ರ ಅವಿವಾಹಿತಳಾಗಿದ್ದರೂ ಮತ್ತೆ ಮತ್ತೆ ಗರ್ಭವತಿಯಾಗುತ್ತಿರುವುದಕ್ಕೆ ಕಾರಣ ಹೇಳಲಿಲ್ಲ. ಈ ಸಾರಿ ನೀನು ಕಾರಣ ಹೇಳಲೇಬೇಕು....ಹೇಳದಿದ್ದರೆ ಈ ಸಾರಿ ನಿನ್ನ ಗರ್ಭಪಾತಕ್ಕೆ ನಾನು ಸಹಾಯ ಮಾಡುವುದಿಲ್ಲ.

ಉಮಾ ಒಂದು ಕ್ಷಣ ಮೌನವಾಗಿದ್ದಳು.... ಆಮೇಲೆ ನುಡಿದಳು–ಮೊದಲ ಸಾರಿ ನಾನು ಗರ್ಭವತಿಯಾದದ್ದು ನನ್ನ ತಂದೆಯ ಮುರಿದ ಕಾಲನ್ನು ಸರಿಮಾಡಿಸುವುದಕ್ಕೆ... ಎರಡನೆಯ ಸಾರಿ ಗರ್ಭವತಿಯಾದದ್ದು ನನ್ನ ತಾಯಿಗೆ ಟಿ. ಬಿ. ಆದದ್ದರಿಂದ....ಮೂರನೆಯ ಸಾರಿ ಗರ್ಭವತಿಯಾದದ್ದು ನನ್ನ ತಮ್ಮನನ್ನು ಓದಿಸುವುದಕ್ಕೆ....ಈ ಸಾರಿ ಗರ್ಭವತಿಯಾಗುತ್ತಿರುವುದು ನನ್ನ ತಂಗಿಯ ಮದುವೆಗಾಗಿ !'

'ನೀನು ಹೇಳುತ್ತಿರುವುದಕ್ಕೂ ನೀನು ಗರ್ಭವತಿಯಾಗುತ್ತಿರುವುದಕ್ಕೂ ಏನು ಸಂಬಂಧ ?' ಶೀಲಾ ಪ್ರಶ್ನಿಸಿದಳು.

'ಸಂಬಂಧ ಇದೆ. ಈ ಎಲ್ಲದರ ಸಂಬಂಧವಿರೋದು ಹಣದೊಂದಿಗೆ. ಹಣ ಬರುವುದರ ಸಂಬಂಧ ನನ್ನ ಖಾಯಂ ಆಗಿರದ ನೌಕರಿಯೊಂದಿಗೆ. ನನ್ನ ನೌಕರಿಯ ಸಂಬಂಧ ನನ್ನ ಬಾಸ್ ನೊಂದಿಗಿದೆ. ನನ್ನ ಬಾಸ್‌ನ ಸಂಬಂಧ ನಾನು ಮತ್ತೆ ಮತ್ತೆ ಗರ್ಭ ಧರಿಸುತ್ತೇನಲ್ಲ ಅದರೊಂದಿಗಿದೆ.

ನೌಕರಿಯನ್ನು ಹುಡುಕಿಕೊಂಡು

ಮೊದಲ ದಿನ ಅವಳು ನೌಕರಿಯನ್ನು ಹುಡುಕಿಕೊಂಡು ಹೊರಟಾಗ ತೀರಾ ಸಾಧಾರಣವಾದ ಬಿಳಿ ಸೀರೆಯನ್ನು ಉಟ್ಟಿದ್ದಳು. ಎರಡು ವಾರಗಳ ನಂತರ ಅವಳಲ್ಲಿ ಕೊಂಚ ಪರಿವರ್ತನೆ ಆಯಿತು. ಈಗ ಅವಳು ಮೊದಲಿಗಿಂತಲೂ ಬೆಲೆ ಬಾಳುವ, ಆಕರ್ಷಕ ಉಡುಪುಗಳನ್ನು ಉಡತೊಡಗಿದಳು. ನೌಕರಿಯನ್ನು ಹುಡುಕಿಕೊಂಡು ಹೋಗುವ ಸಮಯದಲ್ಲೂ ಅನಿಯಮಿತ ಕಂಡು ಬಂತು. ಒಮ್ಮೆ ಬೆಳಗಿನಲ್ಲಿ, ಒಮ್ಮೆ ಮಧ್ಯಾಹ್ನದಲ್ಲಿ, ಒಮ್ಮೆ ಸಂಜೆಗೆ, ಹೀಗೆ ಹೊತ್ತು ಗೊತ್ತಿರಲಿಲ್ಲ. ಒಂದು ತಿಂಗಳು ಕಳೆಯುವುದರಲ್ಲಿ ಅವಳು ಪೂರಾ ಬದಲಾಗಿದ್ದಳು. ಅವಳ ಉಡುಪು ಅತ್ಯಾಧುನಿಕವಾಗಿತ್ತು. ಈಗ ಅವಳಲ್ಲಿ ಮುಂಚಿನ ಸರಳತೆ, ಗಂಭೀರತೆಯಾಗಲಿ ಇರಲಿಲ್ಲ. ಅವುಗಳ ಬದಲು ಚಂಚಲತೆ, ವಾಚಾಳಿತನ ಬಂದಿದ್ದವು. ಅವಳ ಬಳಿ ಈಗ ಸುಖ-ಸೌಲಭ್ಯದ ಎಲ್ಲ ವಸ್ತುಗಳೂ ಇದ್ದುವು– ಇರಲು ಸುಂದರವಾದ ಫ್ಲ್ಯಾಟ್, ನೌಕರರು ಇತ್ಯಾದಿ... ಆದರೆ ಈಗಲೂ ಪ್ರತಿದಿನ ರಾತ್ರಿ ಗಾಢವಾದ ನಂತರ ಆಕೆ ನೌಕರಿ ಹುಡುಕಿ ಹೊರಗೆ ಹೋಗಿ ಬೆಳಗ್ಗೆ ಕೋಳಿ ಕೂಗುವ ಹೊತ್ತಿನಲ್ಲಿ ಸಾಕಾಗಿ ದಣಿದು ಮನೆಗೆ ಬರುತ್ತಾಳೆ.

ಅಭ್ಯಾಸ

ಗಂಡ ಹೆಂಡತಿಗೆ ಬಗೆಬಗೆಯ ಕಷ್ಟಗಳನ್ನು ಕೊಟ್ಟ, ಹೊಡೆದ, ಬಡಿದ, ಏನೆಲ್ಲ ಮಾಡಿದ. ಆದರೆ ಗಂಡ ಇದ್ದೂ ಪರಪುರುಷರ ಬಳಿಗೆ ಹೋಗುವ ಅಭ್ಯಾಸವನ್ನು ಮಾತ್ರ ಹೆಂಡತಿ ಬಿಡಲಿಲ್ಲ. ಕೊನೆಗೆ ವಿವಶನಾಗಿ ಗಂಡ ಹೆಂಡತಿಗೆ ಹೀಗೇಕೆ ಮಾಡ್ತಾ ಇದ್ದೀ ಬಿಟ್ಟುಬಿಡು ಇದನ್ನು ಅಂತ ಹೇಳಿದಾಗ ಹೆಂಡತಿ ಹೇಳಿದಳು–'ನೀವು ಒಂದು ತಿಂಗಳು ಭಿಕ್ಷೆ ಬೇಡಲು ಹೋಗಿ. ಒಂದು ತಿಂಗಳ ನಂತರ ಅದನ್ನು ಬಿಟ್ಟು ಬಂದದ್ದೇ ಆದರೆ ನಾನು ನನ್ನ ಈ ಕೆಟ್ಟ ಅಭ್ಯಾಸವನ್ನು ಬಿಟ್ಟುಬಿಡುತ್ತೇನೆ'

ಗಂಡ ಹಾಗೆಯೇ ಮಾಡಿದ. ಗಂಡ ಹಿಂತಿರುಗಿ ಬಂದ ನಂತರ ಹೆಂಡತಿ ಒಳ್ಳೆ ಅಡಿಗೆ ಮಾಡಿ ಬಡಿಸಿದಳು. ಆದರೂ ಗಂಡ ಅಕ್ಕ–ಪಕ್ಕದವರಿಂದ ಏನಾದರೂ ಬೇಡಿ ತಿನ್ನುತ್ತಿದ್ದ. ಆಗ ಹೆಂಡತಿ ಕೇಳಿದಳು–ನಾನು ನಿಮಗೆ ಇಷ್ಟು ಒಳ್ಳೆಯ ಅಡಿಗೆ ಮಾಡಿ ಹಾಕ್ತೀನಿ. ಇಷ್ಟಾದರೂ ನೀವು ಅಕ್ಕ-ಪಕ್ಕದ ಮನೆಯವರ ತಂಗಳಿಗಾಗಿ ಏಕೆ ಕೈ ಒಡ್ಡುತ್ತೀರಿ ?

ಗಂಡ ಹೇಳಿದ–'ಏನಂತ ಹೇಳಲಿ ? ಒಂದು ತಿಂಗಳ ಕಾಲ ಭಿಕ್ಷೆ ಬೇಡಿ ಅಭ್ಯಾಸವಾಗಿಬಿಟ್ಟಿದೆ. ಎಲ್ಲಿ ಏನು ಸಿಗುತ್ತಿತ್ತೋ ಅದನ್ನು ತಿನ್ನುತ್ತಿದ್ದೆ. ಆ ಅಭ್ಯಾಸ ಬಿಟ್ಟುಬಿಡೋಣ ಅಂದರೆ ಆಗುತ್ತಿಲ್ಲ,

ಹೆಂಡತಿ ಉತ್ತರಿಸಿದಳು–'ನಿಮ್ಮ ಒಂದು ತಿಂಗಳ ಅಭ್ಯಾಸವನ್ನು ಬಿಡಲಿಕ್ಕೆ ನಿಮಗಾಗುತ್ತಿಲ್ಲ ಅಂದ ಮೇಲೆ ಎಷ್ಟೋ ವರ್ಷಗಳಿಂದ ಬಂದಿರುವ ನನ್ನ ಅಭ್ಯಾಸವನ್ನು ನಾನು ಹೇಗೆ ಬಿಡಲಿ ?

(ಕೊನೆಯ ಪುಟಕ್ಕೆ)

ಮಂಗಳೂರಲ್ಲೊಂದು ಸಾಮೂಹಿಕ ಅತ್ಯಾಚಾರ ಕೊಲೆ

...ಭಾವನೆಯಿಂದ ಕುರುಡಾದ ಸವರ್ಣೀ... ದಲಿತರನ್ನು ಕೊಲ್ಲಲು ತೀರ ಸಣ್ಣ ಕಾರಣ ...ಸಾಕು. ಕುರುಚಲು ಗಿಡಗಳನ್ನು ಚಿವುಟಿ ...ಡುವಂತೆ ಅತೀ ಸುಲಭವಾಗಿ ಕೊಂದುಬಿಡು...ತ್ತಾರೆ, ಕೋರ್ಟುಗಳ ಪೋಲೀಸರ 'ಬಿಗಿ' ಬಲ್ಲ ಇವರು ಪ್ರಾಣಿಗಳಷ್ಟೇ ...ಲೀಸಾಗಿ ದಲಿತರನ್ನು ಕೊಂದು ನಿರಾತಂಕವಾಗಿ ಉಸಿರಾಡುತ್ತಾರೆ. ಈಚೆಗೆ ಇಂಥದೇ ಒಂದು ಕೊಲೆ ನಡೆದಿದೆ.

ಮಂಗಳೂರು ತಾಲ್ಲೂಕು, ಕಾವೂರು ಗ್ರಾಮದ ಮುಲ್ಲಕಾಡು ದಲಿತ ಕಾಲನಿಯ ಶ್ರೀ ಗಣಪತಿಯವರ ಮಗಳು ಸುಮಾರು ೨೨ ವರ್ಷದ ಕುಮಾರಿ ಸುಮಿತ್ರಳನ್ನು ಭೂಮಾಲಿಕ ಹಾಗೂ ಗೂಂಡಾಗಳು ಸೇರಿ ಸಾಮೂಹಿಕವಾಗಿ ಅತ್ಯಾಚಾರಗೈದು ಕೊಲೆ ಮಾಡಿರುತ್ತಾರೆ. ಸದ್ರಿ ಕಾಲನಿಯ ತಬುರನವರ ಮಗ ಭಾಸ್ಕರ, ಮಗಳು ಸೇಸಮ್ಮ, ವಿಮಲ, ಇವರನ್ನೊಗೊಂಡು ಸುಮಿತ್ರಳು ದಿ॥ ಶಂಕರ್ ಮಾಣಾಯಿ ಮಗ ದೇವರಾಜ್ ಮಾಣಾಯಿ (ಶಂಕರ್ ಇಂಡಸ್ಟ್ರೀಸ್‌ನ ಮಾಲಿಕ) ಎಂಬ ಸವರ್ಣೀಯ ಭೂಮಾಲೀಕನ ಮನೆಗೆ ಕೂಲಿನಾಲಿಗೆ ಹೋಗುತ್ತಿದ್ದಳು. ತನ್ನ ಕೆಲಸ ಮುಗಿಸಿ ಕೂಲಿ ಪಡೆದುಕೊಂಡು ಸಂಜೆ ಮನೆಗೆ ಬರುತ್ತಿದ್ದಳು. 21-1-1984 ರಂದು ಸಂಜೆ ಮನೆಗೆ ಬಂದು ರಾತ್ರಿ ವೇಳೆ ಮನೆಯ ಪಕ್ಕದ ಅಂಗಡಿಗೆ ಹೋದವಳು ಮರಳಿ ಮನೆಗೆ ಬಾರದುದನ್ನು ಕಂಡ ಆಕೆಯ ತಂದೆ, ಮಾವ ಹಾಗೂ ಸಂಬಂಧಿಕರು ಗಾಬರಿಗೊಂಡು ಸುಮಾರು ರಾತ್ರಿವರೆಗೆ ಹುಡುಕಿದರೂ ಸುಳಿವು ದೊರಕಲಿಲ್ಲ. ದಿನಾಂಕ : 22-1-1984 ಭಾನುವಾರದಂದು ಸುಮಿತ್ರಳ ಮಾವ ಚಾರಪ್ಪ ಇವರು ಕಂಕನಾಡಿ ಆರಕ್ಷಕ ಠಾಣೆಗೆ ದೂರು ಅರ್ಜಿಯೊಂದನ್ನು ಸಲ್ಲಿಸಲು ಹೋದಾಗ ಠಾಣೆಯಲ್ಲಿದ್ದ ಇನ್‌ಸ್ಪೆಕ್ಟರ್ ಮುದ್ದುಮಹದೇವಯ್ಯ ದೂರು ಅರ್ಜಿಯನ್ನು ಸ್ವೀಕರಿಸಲು ಒಪ್ಪದೆ ೨ಳ ಗಂಟೆ ತನಕ ಕಾದುನೋಡಿ, ನಾಳೆ ಬನ್ನಿ ಎಂದು ಸದ್ರಿ ಚಾರಪ್ಪ ಮತ್ತು ಇನ್ನಿತರರನ್ನು ಬೈದು ಹಿಂದಕ್ಕೆ ಕಳುಹಿಸಿದ. ಬೇಸರಗೊಂಡು ಅಲ್ಲಿಂದ ಹಿಂತಿರುಗಿದ ಹೆಣ್ಣಿನ ವಾರಸುದಾರರು ತಾವೇ ಶೋಧ ಕಾರ್ಯವನ್ನು ನಡೆಸುತ್ತಾ ಮೃತಳು ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಧಣಿ ಮಾಣಾಯಿಯ ಮನೆಯಲ್ಲಿ ಸುಮಿತ್ರಳ ಇರುವಿನ ಬಗ್ಗೆ ಕೇಳಿದಾಗ, ನಾವು ಕಾಣಲಿಲ್ಲವೆಂಬ ಉತ್ತರ ನೀಡಿದ ಮಾಣಾಯಿಯ ಅಕ್ಕ ವಿಧವೆ ವಿವರ್ಣ ಮುಖದೊಂದಿಗೆ ನಾಲಿಗೆ ಕಚ್ಚಿ ಮನೆಯ ಒಳಗೆ ಹೋದಳು.

ದಿನಾಂಕ 23-1-1984 ಸೋಮವಾರದಂದು ಸುಮಿತ್ರಳ ವಾರಸುದಾರರು ದೂರು ಅರ್ಜಿ ಸಲ್ಲಿಸಿದಾಗ ಪೋಲೀಸರ ನೆರವು ಸಿಕ್ಕಿ ಅಕ್ಕಪಕ್ಕದ ಗ್ರಾಮಗಳ ಸಂಬಂಧೀಕರ ಮನೆಗಳಲ್ಲಿ ಹುಡುಕಿ ಪತ್ತೆಯಾಗದೆ ಮಧ್ಯಾಹ್ನ ಒಂದು ಗಂಟೆ ವೇಳೆಗೆ ಪೋಲೀಸರು ಹಿಂತಿರುಗಿ ಹೋದ ನಂತರ ಸುಮಾರು ಎರಡು ಗಂಟೆ ಹೊತ್ತಿಗೆ ದೇವರಾಜ್ ಮಾಣಾಯಿಯ ಮನೆಯ ಹಿತ್ತಲಿನ ಪಕ್ಕದ ಕೆರೆಯಲ್ಲಿ ಕಾಣೆಯಾದ ಸುಮಿತ್ರಳ ಶವ ಇರುವುದಾಗಿ ಮಾಣಾಯಿಯ ಕೂಲಿ ಭಾಸ್ಕರನ ಮೂಲಕ ತಿಳಿಸಲಾಯಿತು. ಈ ಸುದ್ದಿಯನ್ನು ತಿಳಿದ ಮೃತಳ ವಾರಸುದಾರರು ಕಂಕನಾಡಿ ಪೋಲೀಸ್ ಸರ್ಕಲ್‌ಗೆ ದೂರು ಸಲ್ಲಿಸಲು ಹೋದಾಗ ಸದ್ರಿ ಠಾಣೆಯಲ್ಲಿ ಇವರಿಗಿಂತ ಮೊದಲೇ ಮಾಣಾಯಿ ಹಾಜರಿದ್ದ. ಅವನೊಡಗೂಡಿ ಬಂದ ಪೋಲೀಸ್ ಸಂಬಂಧಿಗಳು ಹಾಗೂ ಸರ್ಕಲ್ ಇನ್‌ಸ್ಪೆಕ್ಟರ್ ನಾಗರಾಜ ಸ್ಥಳಕ್ಕೆ ಬಂದು ದೇವರಾಜ್ ಮಾಣಾಯಿಯ ಮನೆಯಲ್ಲಾಗಲೀ, ನೆರೆಕರೆಯ ಮನೆಯಲ್ಲಾಗಲೀ, ಕೊಲೆಯ ಬಗ್ಗೆ ಯಾವುದೇ ವಿಚಾರಣೆ ನಡೆಸದೆ ಕೆರೆಯಲ್ಲಿದ್ದ ಶವವನ್ನು ಮೇಲಕ್ಕೆ ತೆಗೆಸಿ ವಾರಸುದಾರರಿಗೆ ಬಿಟ್ಟುಕೊಟ್ಟನು. ಸಂಜೆ ಮೃತಳ ವಾರಸದಾರರು ಹೋಗಿ ನೋಡಿದಾಗ ಕೆರೆಯ ಪಕ್ಕದ ವಸತಿ ಕೊಠಡಿಯಲ್ಲಿ ಕೊಲೆಯ ಕುರುಹುಗಳಾದ ಮೃತ ಹೆಣ್ಣಿನ ಕೈ ಬಳೆಯ ತುಂಡಾದ ಚೂರುಗಳು, ಖಾಲಿಯಾದ ಬ್ರಾಂಡಿಯಬಾಟ್ಲಿಗಳು, ಒಂದು, ಅಲ್ಯೂಮಿನಿಯಂ ಲೋಟ, ಕೋಳಿ ಮೊಟ್ಟೆಯ ಆಮ್ಲೆಟ್ ತಿಂಡಿಯ ಚೂರುಗಳು, ಹೆಣ್ಣಿನ ರವಿಕೆಯಲ್ಲಿದ್ದ ಸೇಫ್ಟಿಪಿನ್, ಆಸೀಡ್ ಬಾಟ್ಲಿ, ಸುಮಾರು ಎರಡು ಮಾರಿನಷ್ಟು ಉದ್ದವಿರುವ ಒಂದು ಹುರಿ ಹಗ್ಗ ಮತ್ತು ಚಿಲ್ಲರೆ 75 ರೂಪಾಯಿ, ರಕ್ತದ ಕಲೆಗಳಿದ್ದವು. ಅಲ್ಲದೆ ಕೆರೆಯಲ್ಲಿ ಮೃತಳ ಶವವು ಹಲಗೆಯೊಂದಿಗೆ ತೇಲುತ್ತಿದ್ದನ್ನು ಮೇಲಕ್ಕೆ ತೆಗೆದಾಗ ಹಲಗೆಯು ರಕ್ತ ಮಿಶ್ರಿತವಾದ ಗೋಡೆಯ ಮಣ್ಣಿನಿಂದೊಡಗೂಡಿತ್ತು. ಈ ಹಲಗೆಯ ಜೊತೆಹಲಗೆಯೊಂದು ಸದ್ರಿ ಕೊಠಡಿಯ ಅಟ್ಟದಲ್ಲಿ ಇದ್ದುದನ್ನು ವಾರಸುದಾರರು ನೋಡಿದ್ದರು. ಮೃತ ಹೆಣ್ಣಿನ ಮುಖಕ್ಕೆ ಆಸೀಡ್ ಹಾಕಿದ್ದು ಮಾತ್ರವಲ್ಲದೆ ತುಟಿಯನ್ನು ಹರಿದು ಹಾಕಿದ್ದರು. ಹುಡುಗಿಯನ್ನು ಉಸಿರುಕಟ್ಟಿಸಿ ಸಾಯಿಸಿ ಪಕ್ಕದ ಕೆರೆಗೆ ಎಸೆಯಲಾಗಿತ್ತು. ಕಣ್ಣುಗುಡ್ಡೆಗಳು ಪೂರ್ತಿಯಾಗಿ ಹೊರಗೆ ಬಂದಿದ್ದು ಅತ್ಯಂತ ಅಮಾನುಷ ರೀತಿಯಲ್ಲಿ ಕೊಲೆ ನಡೆದಿತ್ತು.

ಮಾಣಾಯಿಯ ಮನೆಯಲ್ಲಿ ಕೆಲಸಕ್ಕಿದ್ದ ಇನ್ನೋರ್ವ ಸೋಮೇಶ್ವರದವನೆನ್ನಲಾದ (ಈಗ ಸದ್ರಿ ಮಠಾರದಲ್ಲಿಯೇ ವಾಸವಾಗಿದ್ದು ಎರಡು ವರ್ಷಗಳ ಮೊದಲು ಅದೇ ಕೊಠಡಿಯಲ್ಲಿ ಬಿಡಾರ ಹೂಡಿದ್ದ) ಐತಪ್ಪ ಮೂಲ್ಯ ಎಂಬಾತನು 23-1-1984 ರಂದು ಕಂಕನಾಡಿ ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ಹೊಟ್ಟೆ ನೋವಿನ ಕಾರಣ ನೀಡಿ ಒಳರೋಗಿಯಾಗಿ ದಾಖಲಾಗಿರುವನು. ಈತನು ಸಹ ಕೊಲೆಗೈಯಲು ದೇವರಾಜ್ ಮಾಣಾಯಿಗೆ ಸಹಾಯಕನಾಗಿರುವನೆಂದು ಬಲ್ಲ ಮೂಲಗಳಿಂದ ತಿಳಿದುಬರುತ್ತಿದೆ. ಕೊಲೆಯ ಸಂಬಂಧವಾಗಿ ಇನ್ನೂ ಮೂರು ಮಂದಿ ಅಪರಾಧಿಗಳಾದ ದಲಿತ ಭಾಸ್ಕರ, ಸೇಸಮ್ಮ ಮತ್ತು ವಿಮಲಳನ್ನು ಪೋಲೀಸರು ಬಂಧಿಸಿ ಬಳಿಕ ಬಿಡುಗಡೆಗೊಳಿಸಿ ಭಾಸ್ಕರನನ್ನು ಬಂಧನದಲ್ಲಿರಿಸಿಕೊಂಡು ಕಣ್ಣುಮುಚ್ಚಾಲೆಯ ಆಟ ಆಡುತ್ತಿದ್ದರು. ಕೊಲೆಗಾರನನ್ನು ಉಳಿಸಿ ಕೊಲೆಯನ್ನು ಮುಚ್ಚಿಹಾಕಲು ವ್ಯವಸ್ಥಿತ ಸನ್ನಾಹ ನಡೆದಿದೆ.

ಅಪರಾಧಿ ಮಾಣಾಯಿ ಪೋಲೀಸ್ ಅಧಿಕಾರಿಗಳಿಗೆ ತಲಾ ರೂಪಾಯಿ ಹತ್ತು ಸಾವಿರದಂತೆ ಲಂಚ ಕೊಟ್ಟಿರುತ್ತಾನೆಂದು ಇಡೀ ಮುಲ್ಲಕಾಡು ಗ್ರಾಮವೇ ಮಾತಾಡಿಕೊಳ್ಳುತ್ತಿದೆ. ಅಪರಾಧಿಯಾದ ಮಾಣಾಯಿಯು ಇವನಿಗೆ ಸಹಾಯಕವಾಗಿದ್ದ ಐತಪ್ಪ ಮೂಲ್ಯ ಹಾಗೂ ಇನ್ನಿತರ ಗೂಂಡಾಗಳೊಂದಿಗೆ ಸೇರಿ ಅತ್ಯಾಚಾರ ಮಾಡಿ ಕೊಲೆಯಲ್ಲಿ ಶಾಮೀಲಾಗಿದ್ದರೂ ದಲಿತ ಭಾಸ್ಕರನ ದಸ್ತಗಿರಿ ಮತ್ತು ಐತಪ್ಪ ಮೂಲ್ಯನ ಹೊಟ್ಟೆ ನೋವಿನ ನೆವದಿಂದ ಆಸ್ಪತ್ರೆಯಲ್ಲಿ ದಾಖಲಾದಿದ್ದು, ಇವೆಲ್ಲ ಕೇವಲ ಪ್ರಕರಣ ಮರೆತು ಹೋಗುವಂತೆ ಹೂಡಿರುವ ಪೋಲೀಸಿನವರ ನಾಟಕವಾಗಿದೆ.

ಸ್ಥಳೀಯ ದಲಿತ ಸಂಘರ್ಷ ಸಮಿತಿಯು ಈ ಕೊಲೆ ಬಗ್ಗೆ ತನ್ನ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಮೆರವಣಿಗೆ ನಡೆಸಿದೆ. ಜೊತೆಗೆ ಕರ್ನಾಟಕದಾದ್ಯಂತ ಪ್ರತಿಭಟಿಸಬೇಕೆಂದು ಮಿಕ್ಕ ಸಂಘ ಸಂಸ್ಥೆಗಳನ್ನು ಕೇಳಿಕೊಂಡಿದೆ. ಕೊಲೆಗಾರ ದೇವರಾಜ್ ಮಾಣಾಯಿ ಈಗ ತಲೆ ಮರೆಸಿಕೊಂಡಿದ್ದಾನೆ.

● ವರದಿಗಾರ

ಜಾತಿ ಪದ್ಧತಿಯೇ ಮೂಲ, ಶ್ರಮಜೀವಿ ಸಂಸ್ಕೃತಿಯ ಸ್ಥಾಪನೆಯೇ ಬಂಡಾಯದ ಗುರಿ'' ಎಂದು ಪರಾಮರ್ಶಿಸಿ, ನಾಗರಿಕತೆ ಮತ್ತು ಸಂಸ್ಕೃತಿಗೆ ಇರುವ ವ್ಯತ್ಯಾಸವನ್ನು ಚಂಪಾ ಅವರ 'ಟಿಂಗರ ಬುಡ್ಡಣ್ಣ' ನಾಟಕ ಹಾಗೂ ಮಹಾಭಾರತದ 'ಋಷಿ ಮತ್ತು ನಾಯಿ' ಕತೆಯಿಂದ ಉದಾಹರಿಸಿದರು.

ಗೋಷ್ಠಿಯ ಅಧ್ಯಕ್ಷರಾಗಿದ್ದ ಬಿ. ಕೃಷ್ಣಮೂರ್ತಿ ಅವರು 'ಇಂದಿನ ರಾಜಕೀಯ ಒಂದು ವರ್ಗದ ಹಿತಾಶಕ್ತಿಗಾಗಿ ಮಾತ್ರ ಇದೆ. ಇದು ಹೊರ ಹಾಕುವ ಸಂಸ್ಕೃತಿಯೂ ಕೂಡ ಅದೇ ವರ್ಗದ ಹಿತಾಸಕ್ತಿಯನ್ನು ಕಾಯುತ್ತಿದೆ'' ಎಂದು ಪ್ರಚುರಪಡಿಸಿದರು.

ರಾಜಿ ರಂಗಭೂಮಿ ?

ಕೊನೆಯ ವಿಚಾರ ಗೋಷ್ಠಿಯಲ್ಲಿ ''ಪ್ರದರ್ಶಕ ಕಲೆಗಳು ಮತ್ತು ಬಂಡಾಯ'' ಎಂಬ ವಿಷಯವಾಗಿ ಚರ್ಚೆ ನಡೆಯಿತು. ಗೋಷ್ಠಿಯ ಉದ್ಘಾಟನೆ ಮಾಡಿದ ಸಿ. ಜಿ. ಕೃಷ್ಣಸ್ವಾಮಿ ''ಚಂದ್ರಶೇಖರ ಪಾಟೀಲರು ಸಂಪ್ರದಾಯಕ್ಕೆ ವಿರುದ್ಧವಾಗಿ ದೇವರು, ಧರ್ಮದ ಬಗ್ಗೆ ಬಾಗಲಕೋಟೆಯಲ್ಲಿ ಮಾತಾಡಿದಾಗ ರೊಚ್ಚಿಗೆದ್ದ ಜನ ಕಲ್ಲು ತೂರಿದರು. ಆದರೆ ಸಮುದಾಯ ನಾಟಕ ತಂಡದ ಮೂಲಕ ರಾಜ್ಯಾದ್ಯಂತ ಸಾಯಿಬಾಬನ ಬಗ್ಗೆ ಬೀದಿ ನಾಟಕವಾಡಿದಾಗ ಯಾರೂ ವಿರೋಧಿಸಲಿಲ್ಲ. ಇದರಿಂದ ಪ್ರಗತಿಪರ ವಿಚಾರ ಸಾರುವಲ್ಲಿ ಪ್ರದರ್ಶಕ ಕಲೆಗಳ ಮಹತ್ವ ಎಷ್ಟೆಂಬುದು ಗೊತ್ತಾಗುತ್ತದೆ'' ಎಂದರು.

ಆಶಯ ಭಾಷಣ ಮಾಡಿದ ಆರ್. ನಾಗೇಶ್ 'ಮಹಾರಾಷ್ಟ್ರ ಮತ್ತು ಬಂಗಾಲದಂತೆ ಕರ್ನಾಟಕದಲ್ಲಿ ರಂಗ ಭೂಮಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳುವ ಸಾಧ್ಯತೆಯ ಬಗ್ಗೆ ಭಯವನ್ನು ವ್ಯಕ್ತಪಡಿಸಿ, ಪಟ್ಟಣಿಗರು ಜನಪದ ಕಲೆಯನ್ನು ಬೆಳಸಲಾರರು' ಎಂದರು.

'ರಂಗಭೂಮಿ ಮತ್ತು ಬಂಡಾಯ' ಕುರಿತು ಪ್ರಬಂಧ ಮಂಡಿಸಿದ ರಘುನಂದನ 'ರಂಗಭೂಮಿ ಮಾನವೀಯವಾಗಲು ನಿರಂತರದ ಎಚ್ಚರ ಅತ್ಯಗತ್ಯ'' ಎಂದು ರಂಗಭೂಮಿಯ ಬಗ್ಗೆ ಕಳಕಳಿಯುಕ್ತವಾಗಿ ತುಲನೆ ಮಾಡಿದರು.

ಚಂದ್ರಶೇಖರ ಆಲೂರು ಅವರು 'ಸಾಮಾಜಿಕ ಮೌಲ್ಯಗಳು ಮತ್ತು ಚಲನ ಚಿತ್ರ'ದ ಬಗ್ಗೆ ಲೇಖನ ಓದಿದಾಗ 'ನಮ್ಮ ಜನ ಜೀವನಕ್ಕೆ ಸಿನಿಮಾಗಳು ಪ್ರತಿಸ್ಪಂದಿಸಿಲ್ಲ. ಅವು ಕಾಣದ ಗಂಧರ್ವ ಲೋಕಕ್ಕೆ ಕರೆದೊಯ್ದು ಭ್ರಮೆ ಸೃಷ್ಟಿಸುತ್ತದೆ. ಹುಸಿ ಮೌಲ್ಯ ಸಾರುತ್ತಿವೆ ಎಂದು ಹೇಳುವುದರ ಜೊತೆಗೆ ಬಾಲಚಂದರ್ ಅಂತಹ ನಿರ್ದೇಶಕರು ಪರವಾಗಿಲ್ಲ ಎನ್ನುವ ಹಿನ್ನೆಲೆಯಲ್ಲಿ ಇಂದಿನ ಸಿನಿಮಾ ನಿರ್ದೇಶಕರು ಮತ್ತು ನಿರ್ಮಾಪಕರುಗಳನ್ನು ತರಾಟೆಗೆ ತೆಗೆದುಕೊಂಡರು.

ರಂಗಾರೆಡ್ಡಿ ಕೋಡಿರಾಂಪುರ ಅವರು 'ಜನಪದ ಕಲೆಗಳು ಮತ್ತು ಬಂಡಾಯದ ಸಾಧ್ಯತೆ' ಕುರಿತು ಹೇಳುವಾಗ ''ಜನಪದ ಕಲೆಯನ್ನು ಜನಪರ ಕಲೆಯನ್ನಾಗಿ ಪರಿವರ್ತಿಸಬೇಕು--ಜನಪದ ಕಲೆಗಳಲ್ಲಿ ಬಂಡಾಯದ ಸಾಧ್ಯತೆಗಳು ಇಲ್ಲದಿದ್ದರೆ ಕಲೆಯ ನಾಶವಾಗುತ್ತದ' ಎಂದು ಎಚ್ಚರಿಕೆ ನೀಡಿದರು.

ಗೋಷ್ಠಿಯ ಅಧ್ಯಕ್ಷರಾಗಿದ್ದ ಕೆ. ಮರುಳಸಿದ್ದಪ್ಪ ಅವರು 'ಚಲನ ಚಿತ್ರಗಳಲ್ಲಿ ಸಾಂಸ್ಕೃತಿಕ ಅದಃಪತನವಾಗುತ್ತಿದೆ'' ಎಂದು ವಿಷಾದಿಸಿದರು.

ಪ್ರತಿಭಟನಾ ಕುಡಿ

ಕವಿಗೋಷ್ಠಿಯನ್ನು ಉದ್ಘಾಟನೆ ಮಾಡಿದ ಕೆ. ರಾಮಯ್ಯ ಅವರು 'ಬಂಡಾಯ ಸಂಘಟನೆ ದನಿ ಇಲ್ಲದವರಿಗೆ ದನಿ ಕೊಟ್ಟಿತು—ಕಾವ್ಯ ಜನಪರವಾಯಿತು' ಎಂದು ಹೇಳಿ ಜತೆಗೆ ಅವರೂ ಒಂದು ಕವನ ಓದಿದರು. ನಿರ್ವಹಣೆ ಮಾಡಿದ ಅಲ್ಲಮ ಪ್ರಭು ಬೆಟ್ಟದೂರು ಅವರು 'ಕಾವ್ಯ ಪ್ರಥಮವಾಗಿ ಜನಪದದಲ್ಲಿ ಹುಟ್ಟಿ, ಮುಂದೆ ರಾಜಾಶ್ರಯದ ನೆರಳಲ್ಲಿ ಬೆಳೆದು ಇಂದು ಪ್ರತಿಭಟನೆಯ ಕುಡಿ ಬಿಡುತ್ತಿದೆ—ಎಂದು ಹೇಳಿ, 'ಅಡಿಗರಂತಹವರು ಶೋಷಣೆಯನ್ನು ನಿರಾಕರಿಸಿಲ್ಲ' ಎಂಬುದನ್ನು ಖಂಡಿಸಿದರು. ಕವಿಗೋಷ್ಠಿಯಲ್ಲಿ ಚಂಪಾ, ಲಲಿತಾ ನಾಯಕ, ಗವಿಸಿದ್ಧ ಬಳ್ಳಾರಿ, ಶಂಕರಕಟಗಿ, ಮುನಿವೆಂಕಟಪ್ಪ, ಸ. ರಘುನಾಥ್, ಆರ್. ಜಿ. ಹಳ್ಳಿನಾಗರಾಜ್, ಡಿ. ಹೊಸಳ್ಳಿ ಶಿವು ಮುಂತಾದವರು ತಮ್ಮ ಕವಿತೆಗಳನ್ನು ಓದಿದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಚನ್ನಣ್ಣ ವಾಲೀಕಾರರು ''ತರುಣ ಕವಿಗಳು ಕಾವ್ಯ ಪರಂಪರೆಯನ್ನು ಅಭ್ಯಸಿಸಿ ಕಾವ್ಯರಚನೆ ಮಾಡಬೇಕು—ತಮ್ಮ ಕಾವ್ಯವನ್ನು ತಾವೇ ಹೊಗಳಿಕೊಳ್ಳುವ ಪ್ರವೃತ್ತಿಯನ್ನು ಕವಿಗಳು ಬಿಡಬೇಕು'' ಎಂದು ಸಲಹೆ ನೀಡಿದರು. ಅವರೂ ಸಹ ತಮ್ಮ ಕವನ ಓದಿದರು.

ಕವಿಗೋಷ್ಠಿ ಮುಗಿದ ಸಂಜೆ 'ನಳಕವಿಯ ಮಸ್ತಕಾಭಿಷೇಕ' ಎಂಬ ಚಂದ್ರಶೇಖರ ಪಾಟೀಲರ ಬೀದಿ ನಾಟಕವನ್ನು ಬಂಡಾಯ ಕಲಾವಿದರು ಪ್ರದರ್ಶಿದರು. ಧಾರವಾಡ ಕಡೆಯ ಆಡುನುಡಿಯ ಧಾಟಿಯನ್ನು (ಆಕ್ಸೆಂಟ್) ಹಿಡಿಯಲು ಸಾಧ್ಯವಾಗದೇ ನಾಟಕದ ಲಯ ಮೂಢಲಿಲ್ಲ.

ಗಮನ ಸೆಳೆದ ಮೆರವಣಿಗೆ

ರಾಜ್ಯದ ನಾನಾ ಕಡೆಗಳಿಂದ ಬಂದು ಬಂಡಾಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಎಲ್ಲರೂ ನಾಟಕ ಪ್ರದರ್ಶನದ ನಂತರ ಕೋಲಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು 'ಬಂಡವಾಳಶಾಹಿಗೆ ಧಿಕ್ಕಾರ', 'ಜಾತಿಪದ್ಧತಿ ನಿರ್ಮೂಲನವಾಗಲಿ', 'ಅಸಮಾನತೆ ಹಾಳಾಗಲಿ'....ಮುಂತಾದ ಘೋಷಣೆಗಳ ಮೂಲಕ ಜನರ ಗಮನ ಸೆಳೆದರು. ಮೆರವಣಿಗೆ ಗಾಂಧಿ ವೃತ್ತಕ್ಕೆ ಬಂದು ಕೊನೆಗೊಂಡಿತು.

ಗಾಂಧಿ ವೃತ್ತದ ಬಳಿ ಸಮಾರೋಪ ಭಾಷಣ ಮಾಡಿದ ಪ್ರಮುಖ ಬಂಡಾಯ ಸಾಹಿತಿಗಳು, ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಗಾದವರನ್ನು ಮೇಲೆತ್ತಲು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ-ಕ್ಷೇತ್ರಗಳ ಪುನರ್ ಮೌಲೀಕರಣ ಅತ್ಯಗತ್ಯ ಎಂದು ಬಹುತೇಕರು ಅಭಿಪ್ರಾಯ ಪಟ್ಟರು. ಈ ಸಮಾರಂಭಕ್ಕೆ ಬರಗೂರರು ಅಧ್ಯಕ್ಷತೆ ವಹಿಸಿ ''ಬಹಿರಂಗ ಚಟುವಟಿಕೆಗಳಿಂದ ಮಾತ್ರ ಬಂಡಾಯ ಸಂಘಟನೆ ಬದುಕುತ್ತದೆಂದು ಭಾವಿಸಬಾರದು'' ಎಂದು ಬಂಡಾಯದ ಜೀವಂತಿಕೆಯ ಬಗ್ಗೆ ವಿಶ್ಲೇಷಿಸಿದರು.

ಎರಡು ದಿವಸಗಳು ನಡೆದ ರಾಜ್ಯಮಟ್ಟದ ನಾಲ್ಕನೇ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಸಭಿಕರು ಬಹು ಸಂಖ್ಯೆಯಲ್ಲಿ ಬಂದು ಮಂಡಿತವಾದ ಪ್ರಬಂಧಗಳನ್ನು ಅವುಗಳ ಬಗ್ಗೆ ನಡೆದ ಪ್ರಶ್ನೋತ್ತರಗಳನ್ನು ಆಸಕ್ತಿಯಿಂದ ಕೇಳಿದರು. ಒಟ್ಟಾರೆ ಸಾದರಪಡಿಸಿದ ವಿಚಾರಗಳಾಗಲಿ ಅಥವ ನಡೆದ ಚಟುವಟಿಕೆಗಳಾಗಲಿ ತೀಕ್ಷ್ಣವಾಗಿರಲಿಲ್ಲ. ತಾತ್ವಿಕವಾಗಿ ಈಗಾಗಲೇ ಹಲವು ಭಾರಿ ಅಭಿವ್ಯಕ್ತಿಪಡಿಸಿದ ವಿಚಾರಗಳನ್ನು ಮತ್ತೆ ನೆನಸಿಕೊಂಡಂತೆ ಇಡೀ ಸಮ್ಮೇಳನ ಭಾಸವಾಯಿತೆಂದು ಅನೇಕ ಭಾಗಿಗಳ ಅನಿಸಿಕೆಯಾಗಿತ್ತು. ಅಂತೆಯೇ ಸಮ್ಮೇಳನದಲ್ಲಿ ಭಾಗವಹಿಸಿದ್ದ ಜನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕೆಳವರ್ಗದಿಂದ ಸೃಷ್ಟಿಯಾಗಿರುವ ಈ ಬಂಡಾಯ ಸಾಹಿತ್ಯ ಸಮ್ಮೇಳನ ಹಳಿತಪ್ಪಿ ಮೇಲ್ವರ್ಗದ ಪಾಲಾಗಿಬಿಡುತ್ತದೋ ಎಂಬ ಸಂಶಯ ಮೂಡಿತು. ಹಾಗಾಗದಿರಲೆಂದು ಆಶಿಸುತ್ತೇನೆ.

ಪರಿಸುತ್ತಿವೆ. ಅಂದರೆ ನಮ್ಮ ಸರ್ಕಾರಕ್ಕೂ ಆಂಗ್ಲ ಸರ್ಕಾರಕ್ಕೂ ಏನೂ ವ್ಯತ್ಯಾಸವಿಲ್ಲ'' ಎಂದು ಹೇಳಿದರು.

ಬೇಕು ಸಾಂಸ್ಕೃತಿಕ ನಾಯಕರು

ಅಧ್ಯಕ್ಷ ಸ್ಥಾನದಿಂದ ಕಾಳೇಗೌಡ ನಾಗವಾರರು, ವೈಜ್ಞಾನಿಕ ಬುದ್ಧಿ ಮತ್ತು ವೈಚಾರಿಕ ಪ್ರಜ್ಞೆಯನ್ನು ಗಮನದಲ್ಲಿಟ್ಟುಕೊಂಡು ಸಂಸ್ಕೃತಿವಂತರಾಗಬೇಕಾಗಿರುವುದನ್ನು ಒತ್ತಿ ಹೇಳಿದರು. ಹುಟ್ಟು ಕನ್ನಡಿಗರಾದ (ಕೋಲಾರ) ಪೆರಿಯಾರ್ ತಮಿಳುನಾಡಿನ ಸಾಂಸ್ಕೃತಿಕ ನಾಯಕರಾಗಿ ಆ ಜನರಿಗೆ ಸ್ವಾಭಿಮಾನ ತಂದು ಕೊಟ್ಟಿದ್ದರಿಂದ ಅವರನ್ನು ಇಂದಿಗೂ ತಮಿಳರು 'ತಂದೆ ಪೆರಿಯಾರ್' ಎಂದು ಗೌರವಿಸುತ್ತಾರೆ. ಅಂತೆಯೇ ಇವತ್ತಿನ ತಮಿಳುನಾಡಿನ ಮುಖ್ಯಮಂತ್ರಿ ಎಂ. ಜಿ. ರಾಮಚಂದ್ರನ್ ಸಹ ಮೂಲಭೂತವಾಗಿ ಕೇರಳದವರಾದರೂ ಅವರನ್ನು ಅಲ್ಲಿಯ ಜನ ನೆಚ್ಚಿದ್ದಾರೆ. ಕಾರಣ : ತಮಿಳುನಾಡಿನ ಬಗ್ಗೆ ಅಲ್ಲಿನ ಭಾಷೆಯ ಬಗ್ಗೆ ರಾಮಚಂದ್ರನ್‌ಗೆ ಇರುವ ಕಳಕಳಿಯೇ ಹೊರತು ಬೇರೆ ಏನೂ ಅಲ್ಲ. ಅದೇ ರೀತಿ ಕನ್ನಡನಾಡಿನಲ್ಲಿಯೂ ಇತರರು ಸಾಂಸ್ಕೃತಿಕನಾಯಕರಾಗಬೇಕು–ಎಂಬುದನ್ನು ನಾಗವಾರರು ಅಪೇಕ್ಷಿಸಿದರು. ನಮ್ಮ ನಜೀರ್‌ಸಾಬ್ ಮೂಲಭೂತವಾಗಿ ಕರ್ನಾಟಕದವರಲ್ಲ, ಆದರೂ ಇಲ್ಲಿ ಅವರು ತಮಿಳುನಾಡಿನ ಪೆರಿಯಾರ್ ಆಗಲು ಸಾಧ್ಯವಿದೆ. ಆ ದಿಕ್ಕಿನಲ್ಲಿ ಮುಂದುವರಿಯುವುದಾದರೆ ಅವರು ಶಕ್ತರಾಗಬಲ್ಲರು–ಎಂದು ಅಭಿಪ್ರಾಯಪಟ್ಟರು.

ಮೀಸಲಾತಿ ಹಕ್ಕು, ಭಿಕ್ಷೆಯಲ್ಲ

ಕೆ. ನಾರಾಯಣಸ್ವಾಮಿ ಅವರು "ಹಿಂದುಳಿದ ವರ್ಗಗಳು ಮತ್ತು ದಲಿತರ ಹೋರಾಟ'' ಎಂಬ ಗೋಷ್ಠಿಯನ್ನು ಉದ್ಘಾಟಿಸುತ್ತಾ, "ವ್ಯವಸ್ಥೆಯ ವಿರುದ್ಧದ ಹೋರಾಟ ಏಕರೂಪವಾಗಿಲ್ಲ, ಆ ಹೋರಾಟವನ್ನು ಹಿಮ್ಮೆಟ್ಟಿಸುವಂತ ದುರ್‌ವ್ಯವಸ್ಥೆ ನಮ್ಮಲ್ಲಿದೆ. ಮೀಸಲಾತಿ ನಿಲ್ಲಿಸುವ ಪ್ರತಿಗಾಮಿ ಹೋರಾಟ ನಡೆಯುತ್ತಿದೆ'' ಎಂದು ವ್ಯಸನಪಟ್ಟರು.

'ದಲಿತ ಚಳವಳಿ' ಬಗ್ಗೆ ಪ್ರಬಂಧ ಮಂಡಿಸಿದ ಎಲ್. ಹನುಮಂತಯ್ಯ ಅವರು "ಬಹುಸಂಖ್ಯಾತರಿಗೆ ಧರ್ಮ ಮಳುವಾಗಿದೆ... ಅಂಬೇಡ್ಕರರು ದಲಿತರ ಭಾವನಾತ್ಮಕ ಸಮಸ್ಯೆ ಇಟ್ಟುಕೊಂಡು ಹೋರಾಟ ಮಾಡಿದರೇ ಹೊರತು, ಭೂ ಸಮಸೆ ಇಟ್ಟುಕೊಂಡು ಹೋರಾಟ ಮಾಡಲಿಲ್ಲ... ಕಮ್ಯೂನಿಷ್ಟರು ದಲಿತ ಹೋರಾಟವನ್ನು ಗುರುತಿಸಿಕೊಳ್ಳುವಲ್ಲಿ ಸೋತರು.... ಫುಲೆ, ಪೆರಿಯಾರ್, ಲೋಹಿಯಾ ಅಂಬೇಡ್ಕರ್ ದಲಿತ ಹೋರಾಟವನ್ನು ಗಟ್ಟಿಗೊಳಿಸಿದರು'' ಎಂದು ವಿಶ್ಲೇಷಿಸಿದರು.

'ಭಾರತದ ಮೀಸಲಾತಿ' ಕುರಿತು ಚಂದ್ರಶೇಖರ ತಾಳ್ಯ ಹೇಳಿದರು : "ಇಂಡಿಯಾ ಒಂದು ಚರಂಡಿ. ಇಲ್ಲಿ ಮನುಷ್ಯರೇ ಅಪರೂಪ, ಈ ಕಗ್ಗತ್ತಲೆಯ ಗುಹೆಯಲ್ಲಿ ಜನರನ್ನು ಮೌಢ್ಯದಿಂದ ಕಟ್ಟಿ ಹಾಕಲಾಗಿದೆ. ಎಲ್ಲರಲ್ಲೂ ಬಡವರಿರಬಹುದು. ಆದರೆ ಮೇಲ್ಜಾತಿಗಿರುವ ಸಹಾಯ, ಕೆಳಜಾತಿಗಿಲ್ಲ; ಮೇಲ್ವರ್ಗ ಮತ್ತು ಕೆಳವರ್ಗದವರ ಮಾನಸಿಕ ಸ್ಥಿತಿ ಬೇರೆ ಬೇರೆ. ದಲಿತರ ಮಾನಸಿಕ ಅಂತರವನ್ನು ಗುರುತಿಸಬೇಕು. ಮೀಸಲಾತಿ ಇಲ್ಲದಿದ್ದರೆ ಕೆಳಜಾತಿ ಜನ ಮುಂದುವರಿಯಲಾರರು. ಮೀಸಲಾತಿ ಹಕ್ಕು, ಭಿಕ್ಷೆ ಅಲ್ಲ.''

ಅಧ್ಯಕ್ಷತೆ ವಹಿಸಿದ್ದ ಬಿ. ಕೃಷ್ಣಪ್ಪನವರು "ಬಂಡಾಯ ಸಾಹಿತ್ಯ ಹೋರಾಟದ ಗರ್ಭದಲ್ಲಿ ಹುಟ್ಟಬೇಕು. ಎಡಪಂಥೀಯ ಚಳವಳಿ ದಲಿತರನ್ನು ಮುಟ್ಟುತ್ತಿಲ್ಲ. ಕೇರಳದಲ್ಲಿ ಕಮ್ಯೂನಿಷ್ಟರ ಪ್ರಭಾವ ಇದ್ದರೂ 'ಕೇರಳ ಹರಿಜನ ಗಿರಿಜನ ಸಂಘ' ದ ನೇತೃತ್ವದಲ್ಲಿ ದಲಿತರು ದೇವಾಲಯ ಪ್ರವೇಶ ಚಳವಳಿ ಮಾಡಬೇಕಾಯ್ತು.... ದಲಿತ ಚಳವಳಿಗೆ ರೆಡಿಮೇಡಾದ ಸಿದ್ಧಾಂತವಿಲ್ಲ. ದಲಿತ ಚಳವಳಿ ಇನ್ನೂ ಸಿದ್ಧಾಂತವನ್ನು ಹುಡುಕಾಡುತ್ತಿದೆ'' ಎಂದರು.

ಪ್ರತಿಭಟನಾ ಪರಂಪರೆ

'ಸಾಹಿತ್ಯ ಪರಂಪರೆ ಮತ್ತು ಬಂಡಾಯ' ಎಂಬ ಚರ್ಚಾಗೋಷ್ಠಿಯ ಆಶಯ ಭಾಷಣ ಮಾಡಿದ ಸಿ. ವಿ. ಪಾಟೀಲರು "ನಮ್ಮ ಪೂರ್ವದಕವಿಗಳನ್ನು ಕಲಾವಿದರನ್ನು ಅವರ ಮತಗಳ ಹಿನ್ನೆಲೆಯಲ್ಲಿ ಗುರುತಿಸಬೇಕು.... ಜೈನ ಧರ್ಮ ವೈಧಿಕ ಧರ್ಮಕ್ಕೆ ತೋರಿದ ಪ್ರತಿಭಟನೆಯಿಂದಲೇ ನಮ್ಮ ಕಾವ್ಯ ಪರಂಪರೆ ಪ್ರಾರಂಭವಾಗಿದೆ'' ಎಂದು ಅಭಿಪ್ರಾಯಪಟ್ಟರು.

'ಬಂಡಾಯ ಮನೋಧರ್ಮ ಮತ್ತು ಸೃಜನಶೀಲತೆ' ಬಗ್ಗೆ ಹೆಚ್. ಎಸ್. ಶಿವಪ್ರಕಾಶ್ ಅವರ ಲೇಖನವನ್ನು ಓದಲಾಯಿತು. ಬಂಡಾಯ ಪ್ರವೃತ್ತಿಗೂ ಸೃಜನಶೀಲತೆಗೂ ಗಾಢ ಸಂಬಂಧವಿದೆ... ನಾವೇ ಪ್ರಥಮ ಬಂಡಾಯಗಾರರಲ್ಲ. ಬೇರೆ ಪಂಥಗಳ ವ್ಯಕ್ತಿಗಳ ವಿಚಾರ ತಿಳಿದುಕೊಳ್ಳುವುದು ಒಳ್ಳೆಯದು, ಎಂದು ಅವರು ಹೇಳಿದರು.

'ಕನ್ನಡ ಸಾಹಿತ್ಯದಲ್ಲಿ ಬಂಡಾಯ ಪರಂಪರೆ' ಕುರಿತು ಆರ್ಕೆ. ಮಣಿಪಾಲ್ "ಒಂಟಿದನಿಗಿಂತ ಸಮೂಹದನಿ ಸಮಾಜವನ್ನು ತಟ್ಟುತ್ತದೆ, ಸಾಮಾಜಿಕವಾಗಿ ಒಳ್ಳೆಯದನ್ನು ಮಾಡದ ವ್ಯಕ್ತಿಗೆ ವ್ಯಕ್ತಿತ್ವವೇ ಇಲ್ಲ'' ಎಂದು ಪ್ರತಿಭಟಿಸಿದರು.

'ಬಂಡಾಯಸಾಹಿತ್ಯಚಳವಳಿ'ಯನ್ನು ಜಿ. ಎಸ್. ಅವಧಾನಿ ಮುಂದಿನಂತೆ ವಿವರಿಸಿದರು : "ಎಪ್ಪತ್ತರ ದಶಕದಲ್ಲಿ ಬಂಡಾಯಕ್ಕೆ ಚಾರಿತ್ರಿಕ ಹಿನ್ನೆಲೆ ಸಿದ್ಧವಾಗಿತ್ತು. ತುರ್ತುಪರಿಸ್ಥಿತಿ ಲೇಖಕರನ್ನು ಪರೀಕ್ಷಿಸಿತು.... ಸಾಹಿತ್ಯ ಪರಿಷತ್ತು ತುರ್ತುಪರಿಸ್ಥಿತಿಯಲ್ಲಿ ಭಜನಾಮಂಡಲಿಯ ಕೆಲಸ ನಿರ್ವಹಿಸಿತು'' ಎಂದು ಖಂಡಿಸಿದರು.

ಗೋಷ್ಠಿಯ ಅಧ್ಯಕ್ಷರಾಗಿದ್ದ ಕ. ವೆಂ. ರಾಜಗೋಪಾಲ್ "ಪರಂಪರೆಯ ದರಿದ್ರ ಭಯ ನಮ್ಮನ್ನು ಬಂಡಾಯಗಾರರಾಗಲಿಕ್ಕೆ ಅವಕಾಶ ಕೊಡುತ್ತಿಲ್ಲ'' ಎಂದ ಅವರು ಬಂಡಾಯದ ಪರವಾಗಿ ಮಾತನಾಡುತ್ತಿದ್ದಾರೊ ಇಲ್ಲ ವಿರುದ್ಧ ನಿಲುವು ತಳೆದಿದ್ದಾರೋ ಎಂಬ ಗೊಂದಲವನ್ನು ಸಭಿಕರಲ್ಲಿ ಉಂಟುಮಾಡಿದರು, 'ಭಯ'ವನ್ನು ಗೆಲ್ಲುವುದೇ ಬಂಡಾಯ ಎಂಬ ತತ್ವವನ್ನು ಕ. ವೆಂ. ರವರು ತಿಳಿಯದಿರುವುದು ಶೋಚನೀಯ.

ಮಾಲೀಕರ ಹಿತಾಸಕ್ತಿ

ನಾಲ್ಕನೇ ಗೋಷ್ಠಿಯು 'ಸಂಸ್ಕೃತಿ ಮತ್ತು ರಾಜಕೀಯಕ್ಕೆ' ಮೀಸಲಾಗಿತ್ತು. "ಸಾಂಸ್ಕೃತಿಕ ವರ್ಗವಳ ಮಾಲೀಕರು ತಮ್ಮ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಲು ಆಸಕ್ತರಾಗಿದ್ದಾರೆಯೋ ಹೊರತು ಜನರ ನೋವುಗಳನ್ನಲ್ಲ'' ಎಂದು ಹೇಳಿ, ಇಂದಿನ ವ್ಯವಸ್ಥೆ ಬಗ್ಗೆ ಪ್ರಜ್ಞಾಪೂರ್ವಕವಾಗಿ ಆಲೋಚಿಸಬೇಕಾಗಿರುವುದನ್ನು ಚೆನ್ನಾಗಿ ವಿಶ್ಲೇಷಿಸಿದ ಜಿ. ರಾಮಕೃಷ್ಣ ಅವರು ಗೋಷ್ಠಿಯನ್ನು ಉದ್ಘಾಟಿಸಿದರು.

ಆಶಯ ಭಾಷಣ ಮಾಡಿದ ಬಿ. ಗಂಗಾಧರಮೂರ್ತಿ "ಕುವೆಂಪು ಅವರು 'ನಾನು ಹಿಂದೂ ಧರ್ಮವನ್ನು ಬಿಟ್ಟು ಬಿಟ್ಟಿದ್ದೇನೆ' ಎಂದು ಹೇಳಿದಾಗ ಹಿಂದೂಗಳು ಸುಮ್ಮನಿದ್ದರು. ಭಗವಾನ್ ಅವರು ಶಂಕರಾಚಾರ್ಯರ ಬಗ್ಗೆ ('ಬದಲಾವಣೆ' ವಿಮರ್ಶಾಕೃತಿ ನೋಡಬಹುದು) ವಿಮರ್ಶಿಸಿದಾಗ ತಾತ್ವಿಕ ಚರ್ಚೆಗಳಾದವೇ ವಿನಃ ಹಲ್ಲೆಗಳು ನಡೆಯಲಿಲ್ಲ. ಆದರೆ ಪೋಲಂಕಿರಾಮಮೂರ್ತಿಯವರು 'ರಾಮಾಯಣದ ಸೀತಾಯಣ'ದ ಬಗ್ಗೆ (ಸಂಕ್ರಮಣ ಪತ್ರಿಕೆ, ಸಾಕಷ್ಟು ಚರ್ಚೆ ಕೂಡ ನಡೆದಿದೆ) ಭಾಷಣ (ಶಿವಮೊಗ್ಗ) ಮಾಡಿದಾಗ ಕೆಲವು ಕ್ಷುಲ್ಲಕ ವ್ಯಕ್ತಿಗಳು ತಾತ್ವಿಕ ಚರ್ಚೆಗಳ ಬದಲಿಗೆ ಹಲ್ಲೆ ನಡೆಸಿದ್ದು ಖಂಡನೀಯ'' ಎಂದ ಗಂಗಾಧರಮೂರ್ತಿಯವರು ಭಾರತೀಯ ಸಂಸ್ಕೃತಿಯ ಇಬ್ಬಂದಿತನವನ್ನು ಬಹಿರಂಗಪಡಿಸಿದರು.

ಭಗವಾನ್ ಅವರು 'ಸಂಸ್ಕೃತಿಯ ಪರಿಕಲ್ಪನೆ' ಬಗ್ಗೆ ಪ್ರಬಂಧ ಮಂಡಿಸಿ "ನಾವಿನ್ನೂ ಅನಾಗರಿಕ ಸ್ಥಿತಿಯಲ್ಲೇ ಇದ್ದೇವೆ. ಹಿಂದೂ ಸಂಸ್ಕೃತಿ ಎಂದರೆ ಅಸಮಾನತೆಯ ಸಂಸ್ಕೃತಿ. ಈ ಅಸಮಾನತೆಗೆ

‘ಇತಿಹಾಸ ನಿರ್ಮಿಸುತ್ತಿರುವ ಬಂಡಾಯ ಚಳವಳಿ’

ಜನವರಿ ೨೮, ೨೯ರಂದು ಕೋಲಾರದಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದ ವರದಿ

ಡಿ. ಹೊಸಳ್ಳಿ ಶಿವು

ಅಂದು ನನಗೆ ಸಡಗರ ಹಾಗು ಕುತೂಹಲ, ಸಾಹಿತ್ಯ ಸಮ್ಮೇಳನಕ್ಕೆಂದು ಹೋಗುತ್ತಿದ್ದದ್ದು ಅದೇ ಮೊದಲು. ಅದೇ ವೇಳೆಯಲ್ಲಿ ರಾಜ್ಯದಾದ್ಯಂತ ರಸ್ತೆ ಮತ್ತು ರೈಲು ತಡೆಯ ರೈತ ಚಳವಳಿ ಆರಂಭ. ಹಾಗಾಗಿ ನನ್ನ ಕುತೂಹಲಕ್ಕೆ ಎಲ್ಲಿ ಭಂಗ ಬರುತ್ತೊ ?–ಎಂಬ ಆತಂಕ. ಒಂದು ದೃಷ್ಟಿಯಲ್ಲಿ ರೈತ ಮನುಷ್ಯನಾಗಲು ಸಂಘಟಿತನಾಗುತ್ತಿರುವುದಕ್ಕೆ ಸಂತೋಷ. ಬೆಳೆಯುತ್ತಿರುವ ರೈತ ಸಂಘ ದಲಿತ ಸಂಘವನ್ನು ಕಡೆಗಣಿಸಿ ಬಿಟ್ಟಿದೆಯೋ ಅಥವ ದಲಿತ ಸಂಘವೇ ಇವರೊಡನೆ ಸ್ಪಂದಿಸುತ್ತಿಲ್ಲವೊ ?– ಎಂಬ ದ್ವಂದ್ವ ಹಾಗು ಆಶಯಂಗಳೊಂದಿಗೆ ಜ. 28 ಮತ್ತು 29–1984 ರಂದು ಕೋಲಾರದಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ನಾಲ್ಕನೇ ಬಂಡಾಯ ಸಾಹಿತ್ಯ ಸಮ್ಮೇಳನಕ್ಕೆ ಹೋಗಲೇಬೇಕೆಂದು ತೀರ್ಮಾನಿಸಿದೆ. 27 ರಂದು ಗುರುಗಳಾದ ಭಗವಾನ್ ಮತ್ತು ಮಿತ್ರ ನಟೇಶ್ ದೊಡ್ಡಟ್ಟಿಯವರನ್ನು ಕೂಡಿ ಆದಿನ ಬಸ್ಸಿಗಾಗಿ ಪರದಾಡಿದೆವು. ಕಾರಣ : ರೈತ ಚಳುವಳಿಯಿಂದಾಗಿ (ಮೈಸೂರ್ ಟು ಬೆಂಗಳೂರ್) ಸಾರಿಗೆ ಸಂಚಾರ ಸ್ಥಗಿತಗೊಂಡಿತ್ತು. ಕೊನೆಗೆ ರೈಲ್ವೆ ಸ್ಟೇಷನ್ನಿಗೆ ಹೋಗಿ ವಿಚಾರಿಸಿದಾಗ "ಸಂಜೆ ಆರಕ್ಕೆ ಒಂದು ಟ್ರೈನ್ ಇದೆ" ಎಂದರು. ಆಗ ಕೋಲಾರಕ್ಕೆ ಹೋದಷ್ಟೇ ಖುಷಿಯಾಯಿತು. ದೇವನೂರು ಸಹ ಬರುತ್ತಾರೆಂದು ವಿಚಾರಿಸಿದಾಗ "ಮಧ್ಯದಲ್ಲಿ ಚಳವಳಿಯವರು ಕಂಬಿಗಿಂಬಿ ಕಿತ್ತಿಟ್ಟಿದ್ರೆ" ಎಂಬ ಸಂಶಯವನ್ನು ವ್ಯಕ್ತಪಡಿಸಿದರು. ನಾವಂತು ಹೋಗಲು ನಿರ್ಧರಿಸಿ ಆಗಿದ್ದರಿಂದ ಸ್ಟೇಷನ್‌ಗೆ ಹೋಗಿ ಟ್ರೈನ್ ಹತ್ತಿಕೊಂಡೆವು. ಟ್ರೈನ್ ಹೊರಟಾಗ ನನಗೆ ಒಂದು ರೀತಿಯ ಖುಷಿಯಾಯಿತು. ಏಕೆಂದರೆ ಆವತ್ತಿನ ಸನ್ನಿವೇಶದಲ್ಲಿ ನಾವು ಹೋದದ್ದೇ ಒಂದು ರೀತಿಯ ಬಂಡಾಯವಾಗಿತ್ತು.

ರಂಜನೀಯ ಆರಂಭ

ಜ. 28 ರಂದು ಸದಾಶಿವ ಸ್ಮಾರಕಭವನದ ಹೊರಾಂಗಣದಲ್ಲಿ ದಿ॥ ದೇವಯ್ಯ ಹರವೆ ವೇದಿಕೆ ಸಿದ್ಧವಾಗಿತ್ತು. ಮೊದಲಿಗೆ ಪಿಚ್ಚಳ್ಳಿ ಶ್ರೀನಿವಾಸ್ ವೃಂದ "ದೇವಯ್ಯ ಹರವೆ, ದೇವಯ್ಯ ಹರವೆ....." ಮುಂತಾದ ಬಂಡಾಯ ಗೀತೆಗಳನ್ನು ಹಾಡುವುದರ ಮೂಲಕ "ಬಂಡಾಯ ಸಾಹಿತ್ಯ ಸಮ್ಮೇಳನವನ್ನು ರಂಜನೀಯವಾಗಿ ಆರಂಭಿಸಿದರು.

ಸ್ವಾಗತ ಸಮಿತಿಯ ಪರವಾಗಿ ಕೆ. ರಾಮಯ್ಯನವರು "ಭೂಮಾಲೀಕರ, ಮೇಲ್ವರ್ಗಗಳ ಕ್ರೂರ ತುಳಿತಕ್ಕೊಳಗಾದ ಈ ಬೆಂಗಾಡಿನಲ್ಲಿ ಬಂಡಾಯರ ಧ್ವನಿ ಮೊಳಗುತ್ತಿರುವುದು ಅರ್ಥಪೂರ್ಣ" ಎಂಬ ಅಂಶವನ್ನು ತಾತ್ವಿಕ ದೃಷ್ಟಿಯಿಂದ ಸ್ಪಷ್ಟಪಡಿಸಿದರು.

ಬಂಡಾಯ ತೆರೆದ ಅಧ್ಯಾಯ

ಪ್ರಾಸ್ತಾವಿಕ ಭಾಷಣ ಮಾಡಿದ ಬಂಡಾಯ ಸಂಘಟನೆಯ ಸಂಚಾಲಕ ಬರಗೂರು ರಾಮಚಂದ್ರಪ್ಪ ಅವರು ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಬಂಡಾಯವನ್ನು ಒಡೆದು ಆಳಲು ನೋಡುತ್ತಿವೆ. ಸಂಘಟನೆಯ ಆರಂಭದಿಂದಲೂ ಆ ಪಟ್ಟಭದ್ರ ಹಿತಾಶಕ್ತಿಗಳಿಂದ ನಕಾರಾತ್ಮಕ ಟೀಕೆ ಕೇಳಿಬರುತ್ತಿದೆಯಾದರೂ ಅದು ಉರುಳಿಲ್ಲದ್ದು. ಚಳವಳಿಯ ಆರಂಭದಲ್ಲಿಯೇ ಗಣನೀಯವಾದ ಮಹೋನ್ನತ ಸಾಹಿತ್ಯವನ್ನು ನಿರೀಕ್ಷಿಸುವುದು ತಪ್ಪು–ಅನ್ನುವುದನ್ನು ಸಕಾರಣಗಳನ್ನಿಟ್ಟು ಸಮರ್ಥಿಸಿದರು. ಬಂಡಾಯ ಸಾಹಿತ್ಯ ಹಂತ ಹಂತವಾಗಿ ಬೆಳೆಯುತ್ತಿರುವುದನ್ನು ವಿವರಿಸಿದರು. ವಿಶ್ವವಿದ್ಯಾನಿಲಯಗಳ ಪಠ್ಯಕ್ರಮದಲ್ಲಿ ಬಂಡಾಯ ಸಾಹಿತ್ಯ ಈಗಾಗಲೇ ಸೇರಿದೆ.'ಅಂದರೆ ಇತಿಹಾಸದಲ್ಲಿ ಒಂದು ಅಧ್ಯಾಯವನ್ನು ಪ್ರಾರಂಭಿಸಿದೆ. ಎಂದು ಸ್ಪಷ್ಟಪಡಿಸಿದ ಬರಗೂರರು ಇತಿಹಾಸದ ಚಕ್ರ ಬದಲಾಗುತ್ತಿರುವುದನ್ನು ಮನೋಜ್ಞವಾಗಿ ಪ್ರಚುರ ಪಡಿಸಿದರು.

‘ವಿಪ್ಲವಯುಗ’

ಬಂಡಾಯ ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಮೊದಲೇ ನಾಲ್ಕು ಬಂಡಾಯ ಕೃತಿಗಳನ್ನು ಬಿಡುಗಡೆ ಮಾಡಿದ ಚಂದ್ರಶೇಖರ ಪಾಟೀಲರು ಭಾಷಣ ಆರಂಭಿಸಿದರು, "ನಾವು ಕನಸುಗಾರರು, ಶೋಷಣೆ ರಹಿತ, ದುಃಖವಿಲ್ಲದ, ನಿರ್ಮಲವಾದ ಹಾಗು ಸುಂದರವಾದ ನಾಡನ್ನು ನಿರ್ಮಿಸಬೇಕೆಂಬುದು ನಮ್ಮ ಕನಸು" ಎಂಬ ಆಶಯವನ್ನು ಮಾರ್ಮಿಕವಾಗಿ ವಿಶ್ಲೇಷಿಸುತ್ತಾ, ಶೋಷಣೆ ಮತ್ತು ದುರ್ವ್ಯವಸ್ಥೆಯ ವಿರುದ್ಧ ಸಿಡಿಯುವುದೇ ನಿಜವಾದ ಬಂಡಾಯ. ಈ ನಿಟ್ಟಿನಲ್ಲಿ ತರುಣ ಪೀಳಿಗೆಗೆ ತರಬೇತಿಯ ಅವಶ್ಯಕತೆಯಿರುವುದನ್ನು ವಿಚಾರಾತ್ಮಕವಾಗಿ ಬಣ್ಣಿಸಿದರು. ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ಬೂಸಾ ಚಳವಳಿ, ಜೆ. ಪಿ. ಆಂದೋಲನ, ದಲಿತ ಸಂಘರ್ಷ ಸಮಿತಿಯ ಹುಟ್ಟು–ಇವುಗಳ ತಾರ್ಕಿಕ ಬೆಳವಣಿಗೆಯೇ ಬಂಡಾಯ ಸಾಹಿತ್ಯ ಸಂಘಟನೆ ಮತ್ತು ಚಳವಳಿ–ಎಂದು ಗುರುತಿಸಿದರು. ಭಾಷಾ ಹೋರಾಟವನ್ನು ಪ್ರಾರಂಭಮಾಡಿದ್ದೇ ಬಂಡಾಯದವರು, ಅದು ಅನಂತರ ಜನತಾ ಆಂದೋಲನವಾಗಿ ಕನ್ನಡ ನಾಡನ್ನು ವ್ಯಾಪಿಸಿತು. ಈ ಎಲ್ಲ ಕಾರಣಗಳಿಂದ ಇದನ್ನು "ವಿಪ್ಲವಯುಗ" ಎಂದು ಕರೆಯಬಹುದು ಎಂದರು.

ಆಂಗ್ಲ ಮಾದರಿ

'ಕನ್ನಡ ಹೋರಾಟದ ಸ್ವರೂಪ' ಎಂಬ ವಿಚಾರಗೋಷ್ಠಿಯನ್ನು ಉದ್ಘಾಟಿಸಿದ ಬಿ. ಟಿ. ಲಲಿತಾ ನಾಯಕ್ ಆಗ ತಾನೆ ಹೈಕೋರ್ಟಿನಿಂದ ಹೊರಬಿದ್ದಿದ್ದ 'ಸಂಸ್ಕೃತವೇ ಪ್ರಥಮ ಭಾಷೆ' ಎಂಬ ತೀರ್ಪನ್ನು ಒಂದು ಸಮಸ್ಯೆಯಾಗಿ ತೆಗೆದುಕೊಂಡು 'ಮುಕ್ಕೋಟಿ ಕನ್ನಡಿಗರ ತೀರ್ಪು ಮುಖ್ಯವೇ ಹೊರತು ಆ ಮೂರು ಜನರದ್ದಲ್ಲ' ಎಂಬುದನ್ನು ಸೂಚಿಸುತ್ತಾ, ಕನ್ನಡಪರ ಚಳವಳಿ ಮತ್ತೆ ಆರಂಭವಾಗಬೇಕಾಗಿದೆ ಎಂದರು. ಆಶಯ ಭಾಷಣ ಮಾಡಿದ ಜಿ.ಹೆಚ್.ರಾಘವೇಂದ್ರರು "ಗೋಕಾಕ್ ವರದಿ ಪರ ಹೋರಾಟ ನಮ್ಮ ಪ್ರಾದೇಶಿಕ ಭಿನ್ನತೆಯನ್ನು ಮರೆಸಿತು ; ಸರ್ಕಾರ ಬದಲಾಯಿಸಿದ ಶಕ್ತಿ ಭಾಷಾ ಚಳವಳಿಗೆ ಇತ್ತು' ಎಂದರು.

'ಕನ್ನಡ ಸಾಹಿತ್ಯದಲ್ಲಿ ಕನ್ನಡ ಪ್ರಜ್ಞೆ'–ವಿಷಯ ಕುರಿತು ಪ್ರಬಂಧ ಓದಿದ ಬಸವರಾಜ ಸಬರದ 'ನಮಗೆ ಭಾಷಾ ಶ್ರೀಮಂತಿಕೆ ಇದೆ—ಭಾಷೆಯ ಬಗ್ಗೆ ಅಂಧಾಭಿಮಾನ ಅನವಶ್ಯಕ. ನಯಸೇನ ಆಂಡಯ್ಯ, ಹರಿಹರ, ಮುದ್ದಣ–ಮುಂತಾದ ಕವಿಗಳಲ್ಲಿ ಕನ್ನಡ ಪ್ರಜ್ಞೆ ಇದೆ" ಎಂದರು.

'ಪ್ರಾದೇಶಿಕ ಭಾಷೆ ಮತ್ತು ಪ್ರಜಾಪ್ರಭುತ್ವ'ದ ಬಗ್ಗೆ ಮಾತಾಡಿದ ಆರ್. ವಿ. ಭಂಡಾರಿಯವರು "ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೆ ಜನರ ಭಾಷೆಯಲ್ಲಿಯೇ ಆಡಳಿತ ಮುಂತಾದ ವ್ಯವಹಾರಗಳು ನಡೆಯಬೇಕು" ಎಂದರು.

'ಭಾಷಾ ಚಳವಳಿ ಮತ್ತು ಜನಪರ ಹೋರಾಟ' ಕುರಿತು ಸಿ. ಯತಿರಾಜ್ ಅವರು "ಬ್ರಿಟಿಷರು ಬಲತ್ಕಾರವಾಗಿ ನಮ್ಮ ಮೇಲೆ ಇಂಗ್ಲಿಷನ್ನು ಹೇರಿದರು. ಅದೇ ಇಂಗ್ಲಿಷನ್ನು ನಮ್ಮ ಸರ್ಕಾರಗಳು ಮುಂದು

ಅನುಭವದ ಗಣಿಯಿಂದ

(6ನೇ ಪುಟದಿಂದ)

ಹೋಗಿ ಐದು ವರ್ಷವಾದರೂ ಯಾವ ತಕರಾರುಗಳನ್ನೂ ಊರಿಗೆ ತಂದಿಲ್ಲ ಎಂದು. ಊರಿನ ಕಾರ್ಯಕಲಾಪಗಳಲ್ಲಿ ಯಾವುದರಲ್ಲೂ ಪ್ರತಿಭಟಿಸಲಿಲ್ಲ ಎಂದು. ಗೌಡರು ಎಷ್ಟು ಮೆಚ್ಚಿಕೊಂಡಿದ್ದರೆ ಏನು ಫಲ ? ಅನ್ಯಾಯ ಅಸಮಾನತೆಗಳ ವಿರುದ್ಧ ನನ್ನ ಹೃದಯದಲ್ಲಿ ಪ್ರತಿಭಟನೆ ಬೆಳೆಯತೊಡಗಿತ್ತು.

ಗೌಡರ ಗತ್ತಿಗೆ ಬಿದ್ದಿರುವ ನನ್ನ ಜನರು ನರ ಸತ್ತ ಜನರಾಗಿದ್ದರು. ಅವರು ಪಡುವ ಕಷ್ಟನಷ್ಟಗಳು ಅವರ ಪಾಲಿನ ಹಣೇ ಬರಹವೇ ಆಗಿತ್ತು. ಎಲ್ಲಕ್ಕೂ ಮೀರಿಸುವ ಅಸಮಾನತೆ. ಕುಡಿಯುವ ನೀರಿಗೆ ಸುಮಾರು 2–3 ಘಂಟೆ ಕಾಲ ಕಾಯಬೇಕಾಗುತ್ತಿತ್ತು. ಇದೆ ಅಲ್ಲದೆ ಗ್ರಾಮದಲ್ಲಿ ದೇವರ ಉತ್ಸವ ನಡೆದರೆ ಹರಿಜನರ ಕೇರಿಯೊಳಗೆ ದೇವರು ಬರದಿರುವುದು ಅಷ್ಟೆ ಅಲ್ಲ. ಪೂಜೆಯಲ್ಲಿ ಅಸಮಾನತೆ, ದೇವಸ್ಥಾನದೊಳಗೆ ಪ್ರವೇಶವಿಲ್ಲದಿರುವುದು. ಇಂತಹವೇ ನನ್ನ ಕಣ್ಣ ಮುಂದೆ ರಾಶಿರಾಶಿಯಾಗಿ ಬೆಳೆದು ನಿಂತವು.

ಇಂತಹ ಪರಿಸ್ಥಿತಿಯಲ್ಲಿ 1981 ಏಪ್ರಿಲ್ 5 ಯುಗಾದಿ ಹಬ್ಬ ನನ್ನೂರಲ್ಲಿಯೂ ಸಹ. ಆ ದಿನವೂ ಸಹಾ ನನ್ನ ಜನ ನೀರಿಗಾಗಿ ಸುಮಾರು ಗಂಟೆಗಳ ಕಾಲ ಕಾದರೂ ಸವರ್ಣಿಯ ಯಾವಹೆಂಗಸೇಯಾಗಲೀ ನೀರು ಮೊಗೆದು ಹಾಕಲಿಲ್ಲ. ಗೌಡರ ಹೆಣ್ಣು ಮಕ್ಕಳು ಹಬ್ಬದ ಸಂಭ್ರಮ ಹೊಸ ಉಡುಪಿನೊಂದಿಗೆ ಬಂದೋರು ಬಂದಂಗೆ ಕುಂಟೆಯಲ್ಲಿ ನೀರು ಮೊಗೆದುಕೊಂಡು ಹೋಗುತ್ತಾರೆ. ಅವರ ವಯ್ಯಾರ ನೋಡಿ, ಬಿಸಲಲ್ಲಿ ಮಡಕೆ ಮುಂದಿಟ್ಟುಕೊಂಡು ಕೇಳಿಕೊಳ್ಳುತ್ತಿರುವ ನನ್ನ ಅಕ್ಕತಂಗಿಯರನ್ನು ನೋಡಿದರೆ ಹಿಂದೂಧರ್ಮ ದೇವತೆಯ ಕುಂಡಿಯ ಮೇಲೆ ಕಾದ ಕಬ್ಬಿಣದ ಬರೆ ಹಾಕೋಣ ಎಂದೆನಿಸುತ್ತಿತ್ತು. ಈ ದೃಶ್ಯವನ್ನು ನೋಡಲು ಆಗದೆ ನನ್ನ ಅಕ್ಕ ತಂಗಿಯರಿಗೆ ನೀರು ಮೊಗೆದು ಕೊಟ್ಟೆ ! ಇದೇ ಮಹಾ ತಪ್ಪು ಎಂದು ಹರಿಜನ ಹುಡುಗ ಕುಂಟೆಯಲ್ಲಿ ನೀರು ಮುಟ್ಟಿದ ಎಂದು ಹಿಂದೂ ಧರ್ಮದೇವತೆಯು ತನ್ನ ಮಾನ ಮರ್ಯಾದೆ ಬಿಟ್ಟು ಬೆತ್ತಲೆಯಾಗಿ ನಿಂತಳು. ನೀರು ಮೊಗದ ಸುದ್ದಿ ಊರಲ್ಲಿ ಕ್ಷಣಕ್ಕೆ ಹರಡಿತು. ನನ್ನ ತಂದೆ ತಾಯಿಯರು ತೃಪ್ತಿಯಾಗುವವರೆಗೂ ನನ್ನನ್ನು ಬೈದರು. ಮೆಚ್ಚಿಕೊಂಡಿದ್ದ ಗೌಡರು ಅಂದೇ ಮರೆತರು. ಆಗ ನಾನು ಚಿಕ್ಕಂದಿನಿಂದ ಗೆಳೆತನ ಬೆಳೆಸಿದ ಗೌಡ ಹುಡುಗರು ನನ್ನಿಂದ ದೂರವಾದರು. ನಮ್ಮ ಮನೆಯಲ್ಲೆ ತಯಾರಾದ ಸಾರಾಯಿ ಕುಡಿದು ನಮ್ಮ ಒಲೆ ಮೇಲೆ ಬೆಂದ ಸಾರು ನೆಕ್ಕಿದ ಗೌಡರ ಮುಖವು ಹೇಲುಮುಖವಾಯಿತು. ಅಂದಿನಿಂದಲೇ ನನ್ನ ಮೇಲೆಗೌಡರೆಲ್ಲ ಒಳಗೊಳಗೆ ಮಾತಾಡಿಕೊಳ್ಳಲು ಶುರುವಾಧರು. ಅಲ್ಲಿಗೂ ಸಹ ನಾನು ಯಾರಲ್ಲೂ ದ್ವೇಷ ಭಾವ ಬೆಳೆಸದೇ ಎಲ್ಲ ಸವರ್ಣಿಯ ಹುಡುಗರ ಜೊತೆ ಮಾತಾಡುತ್ತಿದ್ದೆ.

ದಿನಗಳು ಕಳೆದಂತೆ 1981 ಅಕ್ಟೋಬರ್‌ನಲ್ಲಿ ದೀಪಾವಳಿಯ ಹಬ್ಬವೂ ಬಂತು. ನನ್ನೂರಲ್ಲಿಯೂ ದೀಪಾವಳಿ ಹಬ್ಬ ಆಚರಣೆಯಾಯಿತು. ದೀಪಾವಳಿಯ ಕಾಲ ಎಲ್ಲರಿಗೂ ತಿಳಿದಂತೆ ಜಡಿಮಳೆಯ ಕಾಲ. ಆ ದಿನವು ದೀಪಾವಳಿಯ ಜಡಿ ಹಿಡಿದಿತ್ತು ಊರಿನ ಭಕ್ತಾದಿಗಳು ದೇವಸ್ಥಾನಕ್ಕೆ ಹೋದರು. ಮೇಲ್ಜಾತಿಯ ಭಕ್ತಾದಿಗಳು ದೇವಸ್ಥಾನದ ಒಳಗೆ ಹೋಗಿ ಕೂತರು. ಅವರ ಸಣ್ಣಪುಟ್ಟ ಮಕ್ಕಳು ಸಹಾ ಆನಂದವಾಗಿ ಪಟಾಕಿ ಮತಾಪು ಸುಡುತ್ತಾ ಇದ್ದಾರೆ. ಆದರೆ ನನ್ನ ಜನರು ಮಾತ್ರ ಹನಿ ಹನಿ ಜಡಿಮಳೆಯಲ್ಲೇದೇವಾಲಯ ಹೊರಗೆ ನಿಂತಿದ್ದಾರೆ ಇವರ ಪಕ್ಕದಲ್ಲೇ ಪಕ್ಷಿ ಮರಿಗಳಾಗಿ ಮಕ್ಕಳು ಒರಗಿಕೊಂಡಿದ್ದಾರೆ. ಜಡಿಮಳೆ ಬೀಳುತ್ತಲೆ ಇದೆ. ಸವರ್ಣಿಯರು ದೇವಾಲಯದಲ್ಲಿ ಕಥೆ ಪ್ರಾರಂಭ ಮಾಡಬೇಕು. ಅಷ್ಟುಹೊತ್ತಿಗೆನಾನು ಹರಿಜನರನ್ನು ಮನೆಗಳಲ್ಲೆ ತಡೆದು ದೇವಸ್ಥಾನದ ಹತ್ತಿರ ಬಂದೆ. ದೃಷ್ಯ ನೋಡುತ್ತಲೆ ನನ್ನ ತಲೆ ತಿರಿಗಿದಾಗೆ ಆಯಿತು. ಆದರೂ ಸಹ ವಿನಯದಿಂದ ಗೌಡರ ಕುರಿತು "ನಾವು ಒಳಗೆ ಹೋಗುತ್ತೇವೆ. ಜಡಿಮಳೆಯಲ್ಲಿ ಇರಲು ಆಗದು" ಎಂದೆ. ರಾಕ್ಷಸ ಗೌಡರು (ಪದವಿ ವಿದ್ಯಾವಂತರೂ ಸಹ) ನಮ್ಮನ್ನು ಒಳಗೆ ಬಿಡಲಿಲ್ಲ. ಅಲ್ಪ ಗಲಾಟೆಯೇ ಆಯಿತು. ಆದರೆ ಪ್ರಯತ್ನ ವಿಫಲ. ಈ ರೀತಿ ಪ್ರತಿಭಟಿಸಿದ್ದೇ ಮಹಾ ತಪ್ಪು ಎಂದು ಮಾರನೆ ದಿನ ಬೆಳಿಗ್ಗೆ ಪಂಚಾಯ್ತಿಗೆ (ನ್ಯಾಯಕ್ಕೆ) ಕರೆಸಿದರು. ಊರಲ್ಲಿ ಯಾವ ಪಂಚಾಯ್ತಿಗೂ ಸೇರದ ಜನ ಆ ದಿನ ನನ್ನ ನ್ಯಾಯಕ್ಕೆ ತುಂಬಿ ತುಳುಕಾಡುತ್ತಿದ್ದರು. ನನ್ನನ್ನು ಪ್ರಶ್ನಿಸುತ್ತಾ ಒಬ್ಬ ಗೌಡ :

"ನೀನು ಮಾಡಿರುವುದು ತಪ್ಪು" ಎಂದ. ಅದಕ್ಕೆ ನಾ ಉತ್ತರವಾಗಿ "ಇಲ್ಲ ನಾನು ಮಾಡಿರುವುದು ಸರಿ ಇದೆ. ಇನ್ನು ನೀವು ಮಾಡಿರುವುದು ತಪ್ಪು. ಹೇಲು ತಿನ್ನೊ ನಾಯಿಗೆ ಸ್ವಾತಂತ್ರ ಇದೆ. ಅದೇ ನಿಮ್ಮಂಗೆ ಇರುವ ಮನುಷ್ಯನಿಗೆ ಈ ಹಕ್ಕು ಇಲ್ಲ" ಎಂದೆ, ಇದನ್ನು ಅರ್ಥಮಾಡಿಕೊಳ್ಳದಂಥ ಮನುಷ್ಯರು 'ಎಲಾ ನಮ್ಮನ್ನು ನಾಯಿಗಳು ಎಂದೇ' ಎಂದು ಕೋಪಿಸಿಕೊಂಡರು. ಕೊನೆಗೆ ನಾನು ತಪ್ಪು ಒಪ್ಪಿಕೊಳ್ಳದೆ ಸಾರ್ವಜನಿಕ ನೀರಿನ ಅನುಭೋಗ ಮತ್ತು ದೇವಾಸ್ಥಾನ ಪ್ರವೇಶ ನನ್ನ ಹಕ್ಕು ಎಂದು, ಕುಂಟೆಯಲ್ಲಿ ಈಜಿಕೊಂಡು ಬಂದೆ. ಅಂದಿಗಾಗಲೀ ನಾನು ಮಾಡಿದ ತಪ್ಪು ಬಿಟ್ಟು ಮುಗ್ಧ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿದರು. ಆ ದಿನವೇ ಒಬ್ಬ ದಲಿತನ 500/- ರೂ. ಬೆಲೆ ಬಾಳುವ ಹಂದಿಯನ್ನು ಗೌಡರು ಕೊಂದಾಕಿದರು. (ನಾನು ಆಗ ಕೋಲಾರಕ್ಕೆ ಹೋಗಿದ್ದೆ) ಭಯ ಪಟ್ಟು ದಲಿತರು ಗೌಡರಿಗೆ ಶರಣಾದರು. ಆದರೆ ಯುವಕರು ಮಾತ್ರ ಶರಣಾಗಲಿಲ್ಲ.

ಚಿಕ್ಕಮಂಗಳೂರು ಸಮಿತಿ

(14ನೇ ಪುಟದಿಂದ)

ದರು. ಸಾರ್ವಜನಿಕ ಆಸ್ಪತ್ರೆಯಿಂದ ಔಷಧ ಪಡೆದು ಉಳಿದುಕೊಂಡರು. ಆದರೇನು ದುರದೃಷ್ಟವಶಾತ್ ನಮ್ಮ ಸಹೋದರಿಯಾದ ಆದೇ ನಿಲಯದ ರುಕ್ಮಿಣಿ ಎಂಬ ವಿದ್ಯಾರ್ಥಿನಿಯು ವಿಪರೀತವಾದ ವಾಂತಿಯಾದುದರಿಂದ ಪ್ರಾಣತೆತ್ತಳು, ವಿಧಿಯು ತನ್ನ ಬಾಳಸಂಗಾತಿಯನ್ನು ಕಳೆದುಕೊಂಡಿತು. ಆಕೆಯ ಗೆಳತಿಯರ ಕಣ್ಣೀರು ವರೆಸುವವರಾರು ? ಆಕೆಯ ತಂದೆ ತಾಯಿಯರ ಅಕ್ಕ ತಂಗಿಯರ ಅಣ್ಣತಮ್ಮಂದಿರ ದುಃಖವನ್ನು ಅಳಲನ್ನು ನಿಲ್ಲಿಸುವವರಾರು ?

ಇಂತಹ ನಿಕೃಷ್ಟ ವಾತಾವರಣದಲ್ಲಿ ಚಿಕ್ಕಬಾಲಕಿಯಾದ ರುಕ್ಮಿಣಿಯ ಸಾವನ್ನರಿತ ಆಕೆಯ ಅಗಲಿಕೆಯಿಂದ ತಪ್ತರಾದ ಜಿಲ್ಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮಗಳ ವ್ಯಾಸಂಗದ ಜೊತೆಯಲ್ಲೆ ತಮ್ಮ ಜವಾಬ್ದಾರಿಯನ್ನರಿತುಕೊಂಡು ಇನ್ನು ಮುಂದೆಯೂ ನಮಗೆ ಇಂತಹ ಅನೇಕ ಕಷ್ಟಗಳು ಒದಗಬಹುದೆಂಬ ಮುನ್ನೆಚ್ಚರಿಕೆಯಿಂದ ಅಮಾಯಕರನ್ನು ಸುಸಂಘಟಿಸುತ್ತ ಕಡೆಗಣಿಸಲ್ಪಟ್ಟವರಿಗೆ ದಾರಿದೀಪವಾಗುತ್ತಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಅಂಗವಾಗಿ ಕವಲೊಡೆಯುತ್ತಿರುವ ದಲಿತ ವಿದ್ಯಾರ್ಥಿ ಒಕ್ಕೂಟದ ಸಂಘಟನೆಯಲ್ಲಿ ಸಂಘಟಿತರಾಗುತ್ತಿರುವುದು ಅನಿಷ್ಟತೆಗಳನ್ನು ತೊಡೆದು ಹಾಕುವ ಖಚಿತ ಮುನ್ಸೂಚನೆಯಾಗಿದೆ.

ಚಿಕ್ಕಮಗಳೂರು ದಲಿತರ ಬದುಕು ಮತ್ತು ಯಾತನೆ

ಒಂದು ಸಮೀಕ್ಷೆ

● ಕಲ್ಲಯ್ಯ

ನೈಸರ್ಗಿಕ ಮಡಿಲಲ್ಲಿ ಮಲೆನಾಡು ಪ್ರದೇಶದ ಗುಡ್ಡ ಬೆಟ್ಟ, ಕಾಡು ಮೇಡು ಹಳ್ಳಕೊಳ್ಳಗಳಿಂದ ಸಮೃದ್ಧಿ ಹೊಂದಿರುವ ಚಿಕ್ಕಮಗಳೂರು ಕರ್ನಾಟಕ ರಾಜ್ಯದ ಹತ್ತೊಂಬತ್ತು ಜಿಲ್ಲೆಗಳಲ್ಲೊಂದಾಗಿದೆ. ರಾಷ್ಟ್ರವಿಖ್ಯಾತಿ ಪಡೆದಿದೆ. ಈ ಜಿಲ್ಲೆಯು ಭತ್ತ, ಕಾಫಿ, ಏಲಕ್ಕಿ ಇತ್ಯಾದಿ ಬೆಳೆಗಳನ್ನು ಬೆಳೆಯುವ ತಾಣ.

ಈ ಜಿಲ್ಲೆಯ ಭೂಸಂಪತ್ತನ್ನೆಲ್ಲ ತಮ್ಮಗಳ ಬಿಗಿಮುಷ್ಟಿಯಲ್ಲಿ ಕೇಂದ್ರಿಕರಿಸಿಕೊಂಡು, ದೊಡ್ಡ ಬಂಗಲೆ ಕಟ್ಟಿಸಿಕೊಂಡು, ಸಂಚರಿಸಲು ಕಾರುಗಳನ್ನಿಟ್ಟುಕೊಂಡು, ಹಸಿವಿನ ತೃಷೆಯು ತೀರಿಕೆಗೆ ದಿನ ನಿತ್ಯವು ಪರಿಮಳ ಸೂಸುವಂತ ಮೃಷ್ಟಾನ್ನ ಭೋಜಿಸಿ ನಿದ್ರಾವಲೋಕನದಲ್ಲಿ ಮುಳುಗಲು ಮೆತ್ತನೆಯ ಹಾಸಿಗೆಯ ಮೇಲೆ ಮಲಗಿ, ಉತ್ತಮ ಗಾಳಿ ಸೇವನೆಗಾಗಿ ಫ್ಯಾನುಗಳನ್ನಿಟ್ಟುಕೊಂಡು ರಾತ್ರಿ ವೇಳೆಯಲ್ಲಿ ತಮ್ಮಗಳ ರಕ್ಷಣೆಗೆ ತಿಂದು ಕೊಬ್ಬಿದ ರೋಷಪೂರಿತ ನಾಯಿಗಳನ್ನಿರಿಸಿಕೊಂಡು ಲೋಡು ಮಾಡಿದ ಬಂದೂಕುಗಳನ್ನಿಟ್ಟುಕೊಂಡು, ತಮ್ಮಗಳ ಸೇವೆಗೆಂದು ಕೈಗೊಬ್ಬ ಕಾಲಿಗೊಬ್ಬ ಆಳುಗಳನ್ನಿಟ್ಟುಕೊಂಡು, ಹಿತರಕ್ಷಣೆ ದೃಷ್ಟಿಯಿಂದ ಸುತ್ತಲು ಗೂಂಡಾಗಳನ್ನಿರಿಸಿಕೊಂಡು, ತಮ್ಮಗಳ ಪಾರ್‌ಪತ್ಯ ನಡೆಸುತ್ತ ಈ ರೋಗಿಷ್ಟ ಜಿಲ್ಲೆಯಲ್ಲಿ ಶ್ರೀಮಂತರು, ಜಾತಿವಾದಿಗಳು, ರಾಜಕೀಯ ಪುಡಾರಿಗಳು. ಮಠಾಧಿಪತಿಗಳು ಸುಖ ಸಂತೋಷದ ಸಂಭ್ರಮದ ಸಾಗರದಲ್ಲಿ ಈಜಾಡುತ್ತಿರುವ ಆನಂದ ನಿರಂತರವಾದುದಾಗಿದೆ.

ಹೀಗೆ ಮಹಾಬಂಗಲೆಗಳಲ್ಲಿ ಭೂರೀ ಭೋಜನವನ್ನುಂಡು ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುತ್ತಿರುವ ಸಂಭ್ರಮ ಒಂದು ಕಡೆಯಾದರೆ ಮತ್ತೊಂದೆಡೆ ಹಗಲು ರಾತ್ರಿ ದುಡಿದುಡಿದು ಬೆವರು ರಕ್ತವನ್ನು ಸುರಿಸಿ, ತುತ್ತು ಕೂಳಿಲ್ಲದೆ, ತೊಡಲು ಬಟ್ಟೆಯಿಲ್ಲದೆಬಳಲುತ್ತಿರುವವರ ಸ್ಥಿತಿ ಚಿಂತಾಜನಕವೆಂಬುದಕ್ಕೆ ಈ ಜಿಲ್ಲೆಯ ದಲಿತರ ಕೂಲಿಕಾರ್ಮಿಕರ ಕೃತ್ಯಗಳು– "ತಲೆತಲಾಂತರದಿಂದಲೂ ಮಾಡುವುದು ಕೂಲಿ ಬೇಡುವುದು ಕೂಳು". ಈ ತರಹದ ದಲಿತ ಜನಾಂಗದವರ ಪರಿಸ್ಥಿತಿ ಕಣ್ಣೀರಿನ ರೂಪವಾಗಿದೆ. ನೋವಿನ ಆಗರವಾಗಿದೆ. ಅಸಂತೋಷ ಕಟ್ಟಿಟ್ಟ ಬುತ್ತಿಯಾಗಿದೆ. ನೆಲೆಯಿಲ್ಲದ ಬದುಕಾಗಿದೆ. ಎಂಬವುಗಳಿಗೆ ಈ ಕೆಳಕಂಡ ನಿದರ್ಶನಗಳೇ ಮೂಕ ಸಾಕ್ಷಿಗಳಾಗಿವೆ.

(1) ಚಿಕ್ಕಮಗಳೂರು ಜಿಲ್ಲೆ ಕಾಂಡ್ಯ ಹೋಬಳಿ 'ಹ್ಯಾರಂಬಿ' ಮತ್ತು 'ಪುರ' ಎಂಬೆರಡು ಕುಗ್ರಾಮದಲ್ಲಿ ಜೀವಿಸುತ್ತಿರುವ ಹೊಲೆಮಾದಿಗ ಜನಾಂಗದವರ ಬಾಳು ಶೋಚನೀಯ. ನೋಡಿದವರ ಕಣ್ಣಿನಲ್ಲಿ ನೀರು ಸುರಿಯದೆ ಇರಲಾರದು. ಅಂದರೆ ಭದ್ರಾನದಿಯ ಉಪನದಿಯ ದಡದ ಮಗುಲಿನಲ್ಲಿ ಪ್ರಾಣಿಗಳೋಪಾದಿಯಲ್ಲಿ ಹುಲ್ಲುಗುಡಿಸಲುಗಳಲ್ಲಿ, ತೊಡಲು ಮೈಮುಚ್ಚುವಷ್ಟು ಬಟ್ಟೆಯಿಲ್ಲದೆ, ತಲೆಗೆ ಎಣ್ಣೆ ಇಲ್ಲದೆ, ಊಟ ಒಂದೊತ್ತಿದ್ದರೆ ಮತ್ತೊಂದೊತ್ತಿಗೆ ಇಲ್ಲದೆ ಪರದಾಡುತ್ತ ಮೂಲೆಗುಂಪಾಗಿದ್ದಾರೆ. ಅಲ್ಲದೆ ಹೆಚ್ಚು ಮಂದಿ ಅಂಗವಿಕಲರಾಗಿ ಅಸಹಾಯಕ ಪರಿಸ್ಥಿತಿಯಲ್ಲಿದ್ದು ಸರ್ಕಾರದಿಂದ ದೊರಕಬಹುದಾದ ಯಾವುದೆ ಸೌಲಭ್ಯ ದಕ್ಕದೆ ಹತಾಶರಾಗಿದ್ದಾರೆ. ಶ್ರೀಮಂತರಿಂದ ಅನ್ಯಾಯ, ದಬ್ಬಾಳಿಕೆಗೆ ಒಳಗಾಗಿದ್ದಾರೇ ಮೈ ಪರಚಿಕೊಂಡು ಸೋಲು ಸಂಕಟವೆನ್ನದೆ ದುಡಿದರೂ ಕನಿಷ್ಟ ಕೂಲಿ ದೊರೆಯದೆ ಅಮಾಯಕರಾಗಿದ್ದಾರೆ. ಮಕ್ಕಳಿಗೆ ವಿಧ್ಯೆಯಿಲ್ಲ, ಕತ್ತಲೆಯೆಂಬ ಅಜ್ಞಾನದ ಮಡಿಲಲ್ಲಿ ತೂಕಡಿಸುತ್ತಿದ್ದಾರೆ. ಒಟ್ಟಾರೆಯಾಗಿ ಮೋಸವೆಂಬ ಸರಪಳಿಗೆ ಸಿಕ್ಕಿ ದಗ್ಧರಾಗಿದ್ದಾರೆ. ಇದು ಹ್ಯಾರಂಬಿ ಮತ್ತು ಪುರ ಜನರ ಜೀವನ ಮಾತ್ರವಲ್ಲದೆ ಇಡೀ ಚಿಕ್ಕಮಗಳೂರು ಜಿಲ್ಲಾದ್ಯಾಂತ ನಡೆದಿರುವ ಜೀವನ ಚಿತ್ರವಾಗಿದೆ.

(2) ಚಿಕ್ಕಮಗಳೂರು ತಾಲ್ಲೂಕು ತೊಂಡವಳ್ಳಿ ಗ್ರಾಮದಲ್ಲಿಹರಕುಮುರುಕು ಗುಡಿಸಿಲಿನಲ್ಲಿ ಜನಿಸಿದ ನಮ್ಮ ತಂಗಿ ಅರೆಪ್ರಾಯದ ಹೆಣ್ಣು 'ಮಂಜಮ್ಮ' ಹೊಲೆಯರ ಮಗಳನ್ನು ದುಷ್ಟ ಕಾಮುಕರು ತಮ್ಮ ಲೈಂಗಿಕ ತೃಷೆ ತೀರಿಸಿಕೊಳ್ಳಲು ಹೋಗಿ ವಿಫಲವಾದುದರಿಂದ ಆಕೆಯನ್ನು ಕೊಂದು ಬಾವಿಗೆ ಎಸೆದ ದುರಂತ ಘಟನೆಯೊಂದು ಈ ಹಿಂದೆ ನಡೆದು ಮಂಜು ಮುಸುಕಿದಂತಾಗಿದೆ.

(3) ಮೂಡಿಗೆರೆ ತಾಲ್ಲೂಕು ಕೋಳೂರು ಗ್ರಾಮದಲ್ಲಿ ಬಡ ಹೊಲೆಯರ ಮಗಳು ಹೊಟ್ಟೆಪಾಡಿಗೋಸ್ಕರ ಕೂಲಿಗೆ ಹೋದ ಸಂದರ್ಭವನ್ನು ಉಪಯೋಗಿಸಿಕೊಂಡು ಅದೇ ಸಾಹುಕಾರನ ಮಗ ಮದುವೆಯ ನೆಪ ಹೇಳಿ ಆಕೆಯನ್ನು ಮೋಹಿಸಿ, ಅನುಭೋಗಿಸಿ ಗಂಡುಪುತ್ರ ಜನಿಸಿದ ನಂತರ ತನ್ನ ತಪ್ಪನ್ನು ತಾನು ಒಪ್ಪಿಕೊಳ್ಳಲು ನಿರಾಕರಿಸುವ ಶ್ರೀಮಂತ ಕುಬೇರನಾಗಿ ರಾಜರೋಷವಾಗಿ ತಿರುಗುತ್ತಿದ್ದಾನೆ. ಆದರೆ ಆ ಬಡಕನ್ಯೆಯ ಸ್ಥಿತಿ ಬೀದಿಪಾಲಾಗಿದೆ ಅಲ್ಲದೆ ತನ್ನ ಕುಟುಂಬ, ಗ್ರಾಮಸ್ಥರುಗಳಿಂದಲೂ ನಿಂದೆಗೊಳಪಟ್ಟು ಅನಾಥೆಯಾಗಿದ್ದಾಳೆ.

(4) ಮೂಡಿಗೆರೆ ತಾಲ್ಲೂಕು ಮೊಕೋನಹಳ್ಳಿ ಗ್ರಾಮದ ಕಾಫಿತೋಟ ಮಾಲಿಕರಲ್ಲಿ ತನ್ನ ಪ್ರಾಣ ಮುಡಿಪಾಗಿಟ್ಟು ದುಡಿಯುತ್ತಿದ್ದ "ಶಂಭು" ಎಂಬುವನನ್ನು ಸಕಾರಣವಿಲ್ಲದೆ ಶ್ರೀಕಂಠಗೌಡರು ಪೋಲಿಸ್‌ಗೆ ದೂರುನೀಡಿ ಕೋಳ ತೊಡಿಸಿ ಲಾಟಿ ಬೂಟಿನಿಂದ ಹೊಡೆಸಿ ಕೊಂದ ದುರ್ಘಟನೆಯೊಂದು ನಡೆದು ಮಾಯವಾಗಿವೆ.

(5) ಇತ್ತೀಚಿಗೆ ಜಿಲ್ಲೆಯಲ್ಲಿ ಒಂದಿಲ್ಲೊಂದೆಡೆ ದುಷ್ಕೃತ್ಯಗಳು ಮರುಕಳಿಸುತ್ತಲೇ ಇವೆ ಎಂಬುದಕ್ಕೆ ಮೂಡಿಗೆರೆ ತಾಲ್ಲೂಕು ದೇವವೃಂದದಲ್ಲಿ ಅಗತ್ಯ ಬೇಡಿಕೆ ಈಡೇರಿಕೆಗಾಗಿ ಮುಷ್ಕರ ಹೂಡಿದ್ದ ಕಾರ್ಮಿಕರನ್ನು ಥಳಿಸಿ ಮಕ್ಕಳಾದಿಯಾಗಿ ಹಲವರನ್ನು ಅಪಹರಿಸಿದ ಘಟನೆ ನಡೆದಿದೆ. ಅಗತ್ಯ ಸೌಲಭ್ಯ ಕೇಳಿದರೆ ಕಾರ್ಮಿಕರ ಮೇಲೆ ಬರ್ಬರ ಕೃತ್ಯಗಳು ನಡೆಯುತ್ತಲಿವೆ.

ಇಂತಹ ಸಂದಿಗ್ಧ ವಾತಾವರಣದಲ್ಲಿ ಅನಿಷ್ಟರ ತುಳಿತಕ್ಕೆ ಸಿಕ್ಕಿ ಗೋಳಾಡುತ್ತಿರುವವರ ಒಡಲಿನಿಂದ ಜನಿಸಿದ ಪುತ್ರಪುತ್ರಿಯರು ಅಲ್ಪ ಸಂಖ್ಯೆಯಲ್ಲಿ ಈ ಜಿಲ್ಲೆಯ ವಿದ್ಯಾಕೇಂದ್ರಗಳಲ್ಲಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು ಸರ್ಕಾರದಿಂದ ದೊರೆಯಬಹುದಾದ ಶೇ. 18ರ ರಿಯಾಯಿತಿ ಸೌಲಭ್ಯವೂ ಸರಿಯಾಗಿ ದೊರೆಯದೆ ಕಂಗಾಲಾಗಿದ್ದಾರೆ. ಅಂದರೆ ಹಾಸ್ಟೆಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಜಿಲ್ಲೆಯ ಯಾವ ಭಾಗಕ್ಕೆ ಹೋಗಿ ನೋಡಿದರೂ ಸಹ ಉತ್ತಮವಾದ ವಾಸಸ್ಥಾನವಿಲ್ಲ, ಕುಡಿಯುವುದಕ್ಕು ನೀರಿಲ್ಲ, ಕಕ್ಕಸ್ಸುರೂಂಗಳು ಸ್ವಚ್ಛವಾಗಿಲ್ಲ. ಉತ್ತಮ ಊಟೋಪಚಾರವಿಲ್ಲ. ಶುಚಿತ್ವವಿಲ್ಲದ ಊಟತಿಂದು ಅನಾರೋಗ್ಯಕ್ಕೆ ತುತ್ತಾದ ವಿದ್ಯಾರ್ಥಿ ವಿಧ್ಯಾರ್ಥಿನಿಯರ ಸಂಖ್ಯೆ ಅಪಾರವಾಗಿದೆ.

ಇತ್ತೀಚಿಗೆ ಚಿಕ್ಕಮಗಳೂರು ತಾಲ್ಲೂಕಿನ ಪಟ್ಟಣದಲ್ಲಿರುವ ವಿದ್ಯಾರ್ಥಿನಿ ನಿಲಯದಲ್ಲಿ ದುರಂತ ಒಂದು ನಡೆದು ಮಾಸಿ ಹೋಗಿದೆ. ಅಂದರೆ ಅಹಿತಕರ ಊಟ (ಮುಗ್ಗಿನ ಅಕ್ಕಿಯಿಂದ ಮಾಡಿದ ಅನ್ನ) ಸೇವಿಸಿ ನಿಲಯದ ಎಲ್ಲ ವಿದ್ಯಾರ್ಥಿನಿಯರು 'ವಾಂತಿ' ಎಂಬ ಕಾಯಿಲೆಗೆ ತುತ್ತಾ

(ಮುಂದಿನ ಪುಟಕ್ಕೆ)

ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಇಡಬೇಕಾದ ಗಂಭೀರ ಹೆಜ್ಜೆಗಳು

ಈ ಇಂಡಿಯಾದಲ್ಲಿ ಎಣಿಕೆಗೂ ಬಾರದಷ್ಟು ಸಂಘಸಂಸ್ಥೆಗಳು, ಸಂಘಟನೆಗಳು ಜನ್ಮವೆತ್ತಿವೆ. ಹುಟ್ಟಿಕೊಳ್ಳುತ್ತಲೂ ಇವೆ. ವಿಷಾದದ ಸಂಗತಿಯೆಂದರೆ ಇಂತಹ ಸಂಘಟನೆಗಳೆಲ್ಲವೂ ವೈಯಕ್ತಿಕ ಪ್ರತಿಷ್ಠೆ. ಸ್ವಾರ್ಥಲಾಲಸೆ, ಕೆಟ್ಟ ಆಮಿಷ ಮುಂತಾದ ದುರುದ್ದೇಶವನ್ನಿಟ್ಟುಕೊಂಡು ಜನವಿರೋಧಿ ಸಂಸ್ಥೆಗಳಾಗಿ ಮಾರ್ಪಡುತ್ತವೆ. ಯಾವುದೇ ತಾತ್ವಿಕ ರೂಪರೇಷೆಗಳೊಂದನ್ನೂ ಗುರಿಯಾಗಿಟ್ಟುಕೊಳ್ಳದೆ ಹಣಕ್ಕಾಗಿಯೋ ಅಧಿಕಾರಕ್ಕಾಗಿಯೋ ಹುಟ್ಟಿಕೊಳ್ಳುವ ಇಂತಹ ಸಂಘಟನೆಗಳು ಹುಟ್ಟಿಕೊಂಡಷ್ಟೇ ಬೇಗ ತಮ್ಮ ಮೂಲ ಉದ್ದೇಶ ಫಲಿಸಿದ ನಂತರ ಕಣ್ಮರೆಯಾಗುತ್ತವೆ. ಇಂತಹ ಎಲ್ಲಾ ಸಂಘಟನೆಗಳಿಗೆಲ್ಲಾ ಒಂದು ಅಪವಾದ ನಮ್ಮ ದಲಿತ ಸಂಘಟನೆ.

ದಶಕಕ್ಕೂ ಹಿಂದೆ ನಮ್ಮನ್ನು ಈಗ ಹೋಲಿಸಿಕೊಂಡಾಗ ನಮ್ಮಲ್ಲಿ ವಿದ್ಯಾವಂತರ ಸಂಖ್ಯೆ ಬಹಳಷ್ಟು ಸುಧಾರಿಸಿದೆ. ಧರ್ಮಾಂಧತೆ, ಮೌಢ್ಯ ಇಂತಹ ಮೂಲ ಜಾಡ್ಯಗಳಿಂದ ಪಾರಾಗಿ ಇಂದಿನ ನಮ್ಮ ಇಂಡಿಯಾದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ವಿದ್ಯಾವಂತರು ಸಂಘಟನೆಯ ಅನಿವಾರ್ಯತೆಯನ್ನು ತಿಳಿದುಕೊಂಡರೆ ಸಾಕು. ಬಹುಶಃ ಯಾವುದೇ ಸಂಘಟನೆಗಿಂತ ನಮ್ಮ ಸಂಘಟನೆ ಎಲ್ಲಾ ರೀತಿಯಲ್ಲೂ ಅತ್ಯಂತ 'ಗಟ್ಟಿ' ಯಾಗಿ ಬೆಳೆಯಬಲ್ಲದು. ಆದರೆ ನಮ್ಮಲ್ಲಿ ಬಹಳಷ್ಟು ವಿದ್ಯಾವಂತರು ಸ್ವಾರ್ಥಪ್ರವೃತ್ತಿಯವರಾಗಿ ಮಧ್ಯಮ ವರ್ಗದ ಬೂರ್ಜ್ವಾಗಳಾಗುತ್ತಿದ್ದಾರೆ, ಹೆಚ್ಚೆಚ್ಚು ನಿಷ್ಕ್ರಿಯರಾಗುತ್ತಿದ್ದಾರೆ, ಬ್ರಾಹ್ಮಣರಾಗುತ್ತಿದ್ದಾರೆ. ಇವೆಲ್ಲಕ್ಕಿಂತ ಹೆಚ್ಚು ದಲಿತ ಅವಿದ್ಯಾವಂತ ಹಳ್ಳಿಗರ ಸಂಪರ್ಕವನ್ನೇ ಕಡಿದುಕೊಳ್ಳುತ್ತಿದ್ದಾರೆ.

ಬಹುಶಃ ಇದಕ್ಕಾಗಿಯೋ ಏನೋ ನಮ್ಮ ದ. ಸಂ. ಸ. ಎಲ್ಲಾ ಹಳ್ಳಿಗರ, ಪಟ್ಟಣಿಗರ ಕ್ರಮವಾದ ಸಂಪರ್ಕವನ್ನಿಟ್ಟುಕೊಳ್ಳಲು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಕಾರ್ಯಕರ್ತರನ್ನು ತಯಾರು ಮಾಡಿದೆ. ಶತಶತಮಾನಗಳಿಂದ ತುಳಿಯಲ್ಪಟ್ಟ ನಮ್ಮ ದಲಿತರನ್ನು ದಿಡೀರ್ ಮೇಲೆತ್ತಲು, ಪ್ರಜ್ಞಾವಂತರನ್ನಾಗಿ ಮಾಡಿ ಜಾಗೃತಿ ಮೂಡಿಸಲು ನಾವಂದುಕೊಂಡಷ್ಟು ಬೇಗ ಸಾಧ್ಯವಾಗದಿದ್ದರೂ ಅಸಾಧ್ಯವಾದುದೇನಲ್ಲ. ಇದಕ್ಕೆ ಕ್ರಮವಾದ ಭೇಟಿ, ವ್ಯವಸ್ಥಿತ ಕಾರ್ಯಕ್ರಮ, ಸಮರ್ಪಕ ತಿಳುವಳಿಕೆ ಮತ್ತು ನಮ್ಮ ದಲಿತರ ಸಮಸ್ಯೆಗಳತ್ತ ಜವಾಬ್ದಾರಿಯುತ ಗಂಭೀರ ಹೆಜ್ಜೆ ಇಡಬೇಕಾಗುತ್ತದೆ. ಇವೆಲ್ಲಕ್ಕಿಂತ ಹೆಚ್ಚು ಕಾರ್ಯಕರ್ತರಾಗಿ ಕೆಲಸ ಮಾಡುವ ನಾವು ವೈಯಕ್ತಿಕವಾಗಿ ಪ್ರಾಮಾಣಿಕರಾಗಿಯೂ ಶೀಲವಂತರಾಗಿಯೂ ಚೈತನ್ಯಶೀಲರಾಗಿಯೂ ಇರಬೇಕಾಗುತ್ತದೆ. ಹೀಗಿದ್ದರೆ ಮಾತ್ರ ನಾವು ಜನರ ಒಲವು ಗಳಿಸಲು ಸಾಧ್ಯ.

ದ. ಸಂ. ಸ. ಕಾರ್ಯಕರ್ತರ ಬಗ್ಗೆ ಒಂದು ಮಾತು ಹೇಳಬೇಕೆಂದರೆ ವಿಭಿನ್ನ ರೀತಿಯ ಕಾರ್ಯಕರ್ತರಿದ್ದಾರೆ. ಕೆಲವರು ಬೌದ್ಧಿಕವಾಗಿ ಸೊನ್ನೆಯಾಗಿ ಕೇವಲ ಹುರುಪುಳ್ಳವರಾಗಿದ್ದಾರೆ. ಕೆಲವರು ಮೂಲತಃ ಬೂರ್ಜ್ವಾಗಳಾಗಿದ್ದು ಕೇವಲ ಫ್ಯಾಶನ್‌ಗಾಗಿ ಕೆಲಸ ಮಾಡುವವರಿದ್ದಾರೆ. ಕೆಲವರು ಕಾರ್ಯಕರ್ತರ ಸೋಗು ಹಾಕಿಕೊಂಡು ಶೋಷಕರೂ ಆಗಿದ್ದಾರೆ. ಇಂತಹವರಿಗೆ ಎಲ್ಲಾ ರೀತಿಯ ತರಬೇತಿ ಬಹಳಷ್ಟು ಅತ್ಯಗತ್ಯವಾಗಿದೆ ಎನಿಸುತ್ತದೆ. ಹೀಗೆ ಯೋಚಿಸಿದ್ದಲ್ಲಿ ದ. ಸಂ. ಸ. ಆಗಾಗ್ಗೆ ಏರ್ಪಡಿಸುವ 'ಕಲಾಮೇಳ'ಕ್ಕಿಂತ ಹೆಚ್ಚು ಮಹತ್ವ ದ. ಸಂ. ಸ. ಕಾರ್ಯಕರ್ತರ ತರಬೇತಿ ಶಿಬಿರದತ್ತ ಹೆಚ್ಚು ಹೆಚ್ಚು ಹೆಜ್ಜೆ ಇಡಬೇಕಾಗುತ್ತದೆ.

—ಹಿತೈಷಿ

ದಂ. ಸ. ಸ. ಕಾರ್ಯಕರ್ತ,

ಕೊಡಗು

ಸೃಷ್ಟಿಯಲ್ಲಿ ಬುದ್ಧಿ ಇದೆ. ಆದರಲ್ಲಿ ಬುದ್ಧ ಹುಟ್ಟುತ್ತಾನೆ; ದೇವರಲ್ಲಿ ನಂಬುಗೆ ಇದೆ, ಆದರಲ್ಲಿ ರಾಮರು ಕೃಷ್ಣರು ಹುಟ್ಟುತ್ತಾರೆ. ಸೃಷ್ಟಿಯ ಬುದ್ಧನಿಗೆ ದೇವರಿಲ್ಲ, ತಾನು ದೇವನೂ ಆಗುವುದಿಲ್ಲ. ದೇವರ ರಾಮರಲ್ಲಿ, ಕೃಷ್ಣರಲ್ಲಿ, ದೇವರ ಅವತಾರಗಳಿವೆ–ಸಾಯಿಬಾಬಾ ಇದ್ದಾನೆ, ಭಗವಾನ ರಜನೀಶನಿದ್ದಾನೆ, ಬಂದೂಕಿನ ಬ್ರಹ್ಮಚಾರಿ ಇದ್ದಾನೆ. ಸೃಷ್ಟಿಯೂ ಗುಡ್ Good ಆದರೆ ದೇವರು ಈವಿಲ್ Evil ಆಗಿದ್ದಾನೆ.

ಇನ್ನು ಸೃಷ್ಟಿಯಲ್ಲಿ ಹಿಂಸೆ ಇದೆಯೋ ಎನ್ನುವ ಪ್ರಶ್ನೆ ಗಂಭೀರವಾದದ್ದು. ತಿರುಮಲೇಶರು ಹುಲಿ ಮೊಲಗಳ ಕ್ರೌರ್ಯವನ್ನು, ಹಿಂಸೆಯನ್ನು, ಹೆಸರಿಸಿದ್ದಾರೆ. ಕಂದ ಮೂಲಗಳನ್ನು ತಿನ್ನುವ, ಮಧುಪರ್ಕಗಳನ್ನು ಸೇವಿಸುವ ಅಹಿಂಸಕ ಹೇಗೆ ಕಂದ ಮೂಲಗಳನ್ನು ಕೀಳುವಲ್ಲಿ ಸಸ್ಯಜೀವಿಗೆ ಎಷ್ಟರ ಮಟ್ಟಿನ ಹಿಂಸೆಯನ್ನು ಕೊಡುತ್ತಾನೆ ಎಂಬುದನ್ನು ನೋಡಬೇಕಾದರೆ ಜಗದೀಶ್ ಚಂದ್ರಬೋಸರ ಹಾಗೂ ಸಮಕಾಲೀನ, ವೈಜ್ಞಾನಿಕ ಪ್ರಯೋಗಗಳನ್ನು, ಅವುಗಳಲ್ಲಿ ಅವರು ಕಣ್ಣಿಗೆ ಕಟ್ಟುವಂತೆ ಸಸ್ಯಗಳು, ಅವುಗಳ ಎಲೆ ಕಿತ್ತಾಗ, ಅವುಗಳನ್ನು ಕಡಿದಾಗ, ಎಂತಹ ಹೃದಯವಿದ್ರಾವಕ ನೋವುಗಳನ್ನು ಅನುಭವಿಸುತ್ತವೆ ಎನ್ನುವುದು ತೋರಿಸುವುದನ್ನು ಕಾಣಬೇಕು. ಸಾಮಾನ್ಯವಾದ ಲೈಡಿಟೆಕ್ಟರ್ ಸಾಧನೆ ಉಪಯೋಗಿಸಿ, ಒಬ್ಬ ಒಂದು ಮರದ ಎಲೆಗಳನ್ನು ತನ್ನ ಸಿಗರೇಟ್ ಲೈಟರ್‌ನಿಂದ ಸುಟ್ಟ: ಆಗ ಇಡಿಯ ಮರದ ಹೃದಯದ ಬಡಿತ ಭಯದಿಂದ ನಡುಗಲಾರಂಭಿಸಿತು: ಮರುದಿನ ಆ ಮನುಷ್ಯ ಮರದ ಹತ್ತಿರ ಬರುತ್ತಿದ್ದಂತೆಯೇ ಮರ ಅವನ ವಾಸನೆ ಹಿಡಿದ ಕೂಡಲೇ ಮತ್ತೆ ನಡುಗಲಾರಂಭಿಸಿತು: ಲೈಡಿಟೆಕ್ಟರ್ ಯಂತ್ರ ಅದರ ಹೃದಯದ ಬಡಿತದ ಉಲ್ಬಣವನ್ನು ಚಿತ್ರಿಸಿತ್ತು!

ಅಂದಾಗ ಕಂದಮೂಲ ಕಿತ್ತು ತಿನ್ನುವ ಬೈರಾಗಿ, ಹುಲಿ ಜಿಂಕೆಯನ್ನು ಕೊಲ್ಲುವ "ಹಿಂಸೆ" ಗಿಂತ ಕಡಿಮೆ ಹಿಂಸೆ ಮಾಡುತ್ತಾನೆಯೇ? ಅವನು ತಿನ್ನುವ ಮಧುಪರ್ಕ, ದುಂಬಿಯ ಬಾಯಿ ಬಡಿದು ತಿನ್ನುವ ಜೇನು: ಕರುವಿನ ಬಾಯಿ ಬಡಿದು ತಿನ್ನುವ ಮೊಸರು. ಅಲ್ಲವೇ? ಸೃಷ್ಟಿಯಲ್ಲಿ ಹಿಂಸೆ ಇದೆಯೇ—ಈ ಗಂಭೀರ ಪ್ರಶ್ನೆಯನ್ನು ನಾನು ಮುಂದೆ, ಬಿಡುವಾದಾಗ, ನನ್ನ ಮುಂದಿನ ಲೇಖನದಲ್ಲಿ ವಿಶ್ಲೇಷಿಸುವ ಯೋಚನೆ ಇಟ್ಟುಕೊಂಡಿದ್ದೇನೆ

ಈಗ ಇಷ್ಟು ನಾವು ಮನದಟ್ಟು ಮಾಡಿಕೊಳ್ಳುವ: ಸೃಷ್ಟಿಯ ಧರ್ಮವೇ ಜೀವಧರ್ಮ: ಜೀವದ ಧರ್ಮವೇ ಜೀವನ, the purpose of life is to live, to foster living. ಸೃಷ್ಟಿ ಜೀವನವನ್ನು ಪೋಷಿಸುತ್ತದೆ, ಬೆಳೆಸುತ್ತದೆ—ಅದೇ ಸೃಷ್ಟಿಯ ಧರ್ಮ, ನೀತಿ, ಪ್ರೇಮ, ಔದಾರ್ಯ ಆ ಧರ್ಮ, ನೀತಿ, ಪ್ರೇಮ,! ಔದಾರ್ಯ ಮಾನವ ಪ್ರಪಂಚದ ಪ್ರಸ್ನಕ್ಕೆ ಮೊಟಕು ಮಾಡಿಕೊಂಡಾಗ ದೇವರು ಹುಟ್ಟುತ್ತಾನೆ, ಅವತಾರಗಳು ತಾಂಡವವಾಡುತ್ತವೆ, ತಿರುಮಲೇಶರ ಗೊಂದಲ ಪ್ರಾರಂಭವಾಗುತ್ತದೆ, ಎಲ್ಲಿ ಪುರುಷ ಪ್ರಯತ್ನವಿದೆಯೋ, ಶ್ರಮವಿದೆಯೋ, ಎಲ್ಲಿ ದಣಿವಿನ ಬೆವರು ಹರಿಯುತ್ತದೆಯೋ ಅಲ್ಲಿ ಸೃಷ್ಟಿಯಿದೆ, ಜೀವವಿದೆ, ಜೀವೋತ್ಕರ್ಷವಿದೆ, ಕಲೆ ಇದೆ–ಅಲ್ಲಿ ಪ್ರೇಮ ಔದಾರ್ಯಗಳು, ಬೆವರಿನೊಂದಿಗೆ, ಹರಿಯುತ್ತವೆ. ಅದಕ್ಕೇ ಪ್ರಾಜ್ಞರು ಸೃಷ್ಟಿಯನ್ನು ಬ್ರಹ್ಮ ಎಂದರು; ಬ್ರಹ್ಮ ಎಂದರೆ ಬೆಳೆಯುವುದು, ದೊಡ್ಡದಾಗು ಎಂದರ್ಥ. ಆ ಬೆಳವಣಿಗೆಯೇ, ದೊಡ್ಡದಾಗುವಿಕೆಯೇ, ದೊಡ್ಡತನವೇ ಬ್ರಾಹ್ಮಣ. ಯಾವಾಗ ಮಾನವನು ಕಾಯದಲ್ಲಿ, ಶ್ರಮದಲ್ಲಿ, ದಣಿವಿನಲ್ಲಿ, ಬೆವರು ಸುರಿಸಿ, ರಕ್ತ ಸಂಚರಿಸಿ, ಬೆಳೆಯುವುದಿಲ್ಲವೋ, ಬಾಳುವುದಿಲ್ಲವೋ ಆಗ ಅವನು ಬೆಳೆಯುವ, ದೊಡ್ಡವನಾಗುವ, ಬ್ರಾಹ್ಮಣನಾಗುವುದಿಲ್ಲ–ಕುಂಡೆಸವುಕ ಬುದ್ಧಿ-ಜೀವಿಯಾಗುತ್ತಾನೆ, ಜಂಟಲ್‌ಮನ್ ಆಗುತ್ತಾನೆ, ಭೂಸುರನಾಗುತ್ತಾನೆ; ದೇವರು ಆಗುತ್ತಾನೆ; ಸೃಷ್ಟಿ ಜೀವಿಯಾಗುವುದಿಲ್ಲ, ಮಾನವನಾಗುವುದಿಲ್ಲ.

ಹಾಗಿ ಮೇಲ್ಜಾತಿಯವರಲ್ಲಿ ಕಲೆಗಳು ಬೆಳೆದಿಲ್ಲ ; ಮೇಲ್ಜಾತಿಯವರು ಪ್ರಜ್ಞಾಪೂರ್ವಕವಾಗಿ, ತಮ್ಮ ಕಲೆಗಳನ್ನು ಹುಟ್ಟಿಸಿಕೊಳ್ಳುತ್ತಾರೆ, ಬೆಳೆಸುತ್ತಾರೆ-ಕಲ್ಟಿವೇಟ್ ಮಾಡುತ್ತಾರೆ ; ಆದರೆ ದಲಿತ ಶ್ರಮಜೀವಿಗಳು ಇನ್‌ಸ್ಟಿಂಕ್ಟಿವ್ ಆಗಿ ತಮ್ಮ ಒಳಗಿನ ಖುಷಿಗೆ, ರಕ್ತದ ಒತ್ತಡಕ್ಕೆ, ಜೀವೋತ್ಕರ್ಷಕ್ಕೆ' ಜ್ವಾದ್ ವೀವ್ರ Joiede Vivre ಗೆ ಕುಣಿಯುತ್ತಾರೆ, ಹಾಡುತ್ತಾರೆ,' ಕೆತ್ತುತ್ತಾರೆ, ಕೊರೆಯುತ್ತಾರೆ, ಚಿತ್ರಿಸುತ್ತಾರೆ.

ಇನ್ನೊಂದು ಮಾತು. ನೋಡಿ, ದಲಿತ ಕರ್ಮಿ, ಶ್ರಮಜೀವ, ಹೇಗೆ ತನ್ನಲ್ಲಿ ಕಲೆಯ ಸಾಂತ್ವನವನ್ನು ಪಡೆದುಕೊಳ್ಳುತ್ತದೆಎನ್ನುವುದನ್ನು. ದಣಿದ, ಶ್ರಮಪಟ್ಟ, ಖಾಯಿಲೆಯ ಮನುಷ್ಯ ಮುಲುಕುತ್ತಾನೆ, ಹುಂಗುಟ್ಟುತ್ತಾನೆ ; ಜ್ವರ ಬಂದವನು ಹುಂ, ಹುಂ ಎಂದು ಮುಲುಕುವುದರಿಂದ ಅವನಿಗೆ ಸ್ವಲ್ಪ ನೆಮ್ಮದಿಯಾಗುತ್ತದೆ. ಆ ದಣಿದ, ಜ್ವರದಿಂದ ಸೋತ ಮನುಷ್ಯನ ನೈಸರ್ಗಿಕ ಹುಂಗುಟ್ಟುವಿಕೆಯಲ್ಲಿ ಒಂದು ರಿದಂ rhytom ಇದೆ, ಲಯವಿದೆ. ಹಾಗೆಯೇ ಭತ್ತಕುಟ್ಟುವ ದಲಿತೆ ಹುಂಗುಡುತ್ತಾಳೆ ; ಹುಟ್ಟುವಲ್ಲಿ ಹಾಕುವ ದೋಣಿಗ "ಹೋಯ್" ಎನ್ನುತ್ತಾನೆ, ಒಗೆಯುವ ಅಗಸ "ಉಸ್" ಅನ್ನುತ್ತಾನೆ. ಹೀಗೆಯೇ ಈ ಸಹಜವಾದ, ನೈಸರ್ಗಿಕವಾದ, ಇನ್‌ಸ್ಟಿಂಕ್ಟ್‌ನಂತಹ ಹೂಂಗುಟ್ಟು, ಹೊಯ್‌ಕಾರ' ಉಸ್ಸಪ್ಪ ತನ್ನದೇ ರಿದಂ rythm ಕಂಡುಕೊಂಡು ಹಾಡಾಗುತ್ತದೆ-ಕುಟ್ಟುವ ಕ್ರಿಯೆ ಸುವ್ವಿ, ಸುವ್ವಿ ಹಾಡಾಗುತ್ತದೆ ; ಹುಟ್ಟಿನ ಹೊಯ್ ಹೊಯ್, ಹೊಯ್ಯಾಲೆ ಹೊಯ್ಯ ದೋಣಿ ಹಾಡಾಗುತ್ತದೆ ; ಎಲೆಕ್ಟ್ರಿಕ್ ಕಂಬ ಹೂಳುವವರ, "ಐಸಾ" ಒಂದು ಮನರಂಜಕ ಹಾಡಾಗಿಯೇ ಬೆಳೆಯುತ್ತಾ ಹೋಗುತ್ತದೆ. ಹೀಗೆಯೇ ಗೀ ಗೀ ಪದಗಳೂ, ಮೂಗಿನ ಅನುಸ್ವಾರಕ್ಕೆ ಲಯಬದ್ಧವಾಗಿ ಗುಯ್‌ಗುಡುವ ಗೀತಗಳು, ಬೆಳೆಯುತ್ತವೆ ; ಚರ್ಮ, ತಂತಿ, ಮೂಳೆ, ಮರ, ಮಣ್ಣು, ವಾದ್ಯಗಳು ಸೃಷ್ಟಿಯಾಗುತ್ತವೆ ; ಜಾನಪದ, ಜನರಿಂದ, ದಲಿತ ಶ್ರಮಜೀವಿ ಸಾಮಾನ್ಯರಿಂದ, ಹರಿಯುತ್ತದೆ.

ಜಾನಪದ ಸೃಷಿಯ ಔದಾರ್ಯವೆಂದಿದ್ದೇನೆ ; ಏಕೆಂದರೆ ಶ್ರಮಕ್ಕೆ ಸಾಂತ್ವನವಾಗಿ, ಉತ್ಸಾಹಕ್ಕೆ ; ಆನಂದಕ್ಕೆ, ಉತ್ತೇಜಕವಾಗಿ ಕಲೆ ಇನ್‌ಸ್ಟಿಂಕ್ಟ್‌ನಲ್ಲೇ ಹುಟ್ಟಿ ಬೆಳೆಯುತ್ತದೆ. ಈಗಲೂ ನಾನು ಗಂಗೋತ್ರಿಯ ಮಹಡಿ ಮೇಲೆ ಎಂ. ಎ. ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿರುವಾಗ ಬಂಡಿ ಹೊಡೆದುಕೊಂಡು ಹೋಗುವ ಕುಕ್ಕರಹಳ್ಳಿ ದಲಿತ, ಪಡಿವಾರ ಹಳ್ಳಿ ಶ್ರಮ ಜೀವಿ, ಹಾಡುತ್ತಾ ಹೋಗುತ್ತಾನೆ, ನಮ್ಮ ಷೇಕ್ಸ್‌ಪಿಯರಿನ ಪಾಠವನ್ನು ನಿಲ್ಲಿಸುವಷ್ಟು ಆನಂದದಲ್ಲಿ. ಆ ದಲಿತ, ಶ್ರಮಜೀವಿ, ಮುಕ್ತವಾಗಿ ಹಾಡುವಂತೆ ನಮ್ಮ ಇಡೀ ಗಂಗೋತ್ರಿಯ ಬುದ್ಧಿಜೀವಿ ಪ್ರೊಫೆಸರುಗಳು, ಅಧ್ಯಾಪಕರು ಒಬ್ಬರಾಗಲೀ ಹಾಡುವುದಿಲ್ಲ, ಗುನುಗುವುದಿಲ್ಲ ; ಬುದ್ಧಿಜೀವಿ ವಿದ್ಯಾರ್ಥಿಗಳು ಹಾಡಿದರೂ ಅವು ಸಿನಿಮಾ, ಶಾಸ್ತ್ರೀಯ ಗೀತೆಗಳಾಗಲೀ ದಲಿತ ಶ್ರಮಜೀವಿಗಳ ಜಾನಪದಗಳಲ್ಲ, ಬಯಲು ನಾಟಕ ಸಾಲುಗಳಲ್ಲ. ಬುದ್ಧಿಜೀವಿಗಳನ್ನು ಕುರಿತು ಕಾನ್ರಾಡಿನ ಕಥೆಗಳಲ್ಲಿನ ಒಬ್ಬ ನಾವಿಕ ಹೇಳುವ ಈ ಮಾತು ನೆನಪಿಟ್ಟುಕೊಳ್ಳುವಂತಹದು ; ನಾವಿಕರಲ್ಲಿ ಜಂಟಲ್‌ಮನ್ gentleman ಯಾರು ಎಂಬ ಪ್ರಶ್ನೆ ಬಂದಾಗ ಒಬ್ಬ ನಾವಿಕ ತನ್ನ ಡೆಫಿನಿಷನ್ ಹೀಗೆ ಕೊಡುತ್ತಾನೆ : "ಜಂಟಲ್‌ಮನ್ ಎಂದರೆ ಅವನ ಪ್ಯಾಂಟಿನ ಹಿಂಭಾಗ ಸವೆದಿರುತ್ತದೆ–ಕುರ್ಚಿಯ ಮೇಲೆ ಕೂತೂ ಕೂತೂ" ಹೀಗೆ ಮೇಲು ವರ್ಗದ ನೆಮ್ಮದಿ ಜೀವನದ ನಾವು ಬುದ್ಧಿ ಜೀವಿ ಕುಂಡೆಸವುಕರೇ. ಕಲೆ, ಸೃಜನಾತ್ಮಕ ಕ್ರಿಯಾಶಕ್ತಿ, ದಲಿತ ಶ್ರಮಜೀವಿಗಳ, ವರ್ಕಿಂಗ್ ಕ್ಲಾಸಿನ, ಕಾಯಕದ ಜೀವಂತದಲ್ಲಿ ಹೆಚ್ಚಾಗಿ ಬೆಳೆಯುವ ಸಾಧ್ಯತೆ ಇದೆ. ವಾಲ್ಮೀಕಿ ಬೇಡನೆನ್ನುತ್ತೇವೆ. ವ್ಯಾಸ ಬೆಸ್ತನೆನ್ನುತ್ತೇವೆ, ಪಂಪ ಯೋಧನೆನ್ನುತ್ತೇವೆ, ಹೋಮರನು ಕುರುಡು ಗಾಯಕ, ಎನ್ನುತ್ತೇವೆ, ಷೇಕ್ಸ್‌ಪಿಯರ್ ನಟನೆನ್ನುತ್ತೇವೆ. ಲಾರೆನ್ಸ್ ವರ್ಕಿಂಗ್ ಕ್ಲಾಸ್ ಎನ್ನುತ್ತೇವೆ ; ಅಂದಮಾತ್ರಕ್ಕೆ ಬುದ್ಧಿಜೀವಿ ಕುಂಡೆಸವುಕರಲ್ಲಿ ಕವಿಗಳು ಕತೆಗಾರರು ಇಲ್ಲವೆನ್ನಲಾಗುವುದಿಲ್ಲ : ಇದ್ದಾರೆ, ಅವರ ಸಂಖ್ಯೆ ಕಡಿಮೆ, ಅವರ ಕಲೆ ಜಾನಪದ ಕಲೆಯಷ್ಟು ವಿಪುಲವೂ, ವ್ಯಾಪಕವೂ ಅಲ್ಲ.

ನಮ್ಮಲ್ಲಿ ಕಾಯಕವೇ ಕೈಲಾಸವೆನ್ನುವ ಮಾತಿದೆ. ಅದನ್ನು ಕಾಯಕವೇ ಕಲೆ ಎಂದರೆ, ನಮ್ಮ ಜನಪದ ಸಾಹಿತ್ಯದ ಜನಸಾಮಾನ್ಯ ಶ್ರಮಜೀವಿಗಳ, ದಲಿತರ ಸಂದರ್ಭದಲ್ಲಿ, ಹೆಚ್ಚು ಅರ್ಥಪೂರ್ಣವಾಗುತ್ತದೆ, ಅಲ್ಲವೇ ?

ಆದೀಗ ಸೃಷ್ಟಿಯ ಔದಾರ್ಯ. ಸೃಷ್ಟಿಯಲ್ಲಿ ನೀರಿನಲ್ಲಿನ ನೀರಾನೆ ನೆಲದ ಮೇಲಿನ ಜಿಂಕೆ ಮರಿಯನ್ನು ಮೊಸಳೆಯಿಂದ ರಕ್ಷಿಸುತ್ತದೆ, ಮೈದಡವಿ ಮೈನೆಕ್ಕುತ್ತದೆ–ಪ್ರೇಮದಲ್ಲಿ ಸೃಷ್ಟಿಯಲ್ಲಿ ಆಕಾಶದಲ್ಲಿ ಹಾರುವ ಹಕ್ಕಿ ನೀರಿನಲ್ಲೀಜುವ ಮೀನುಗಳಿಗೆ ಕೊಕ್ಕಿನಿಂದ ಆಹಾರ ತಂದು ಹಾಕಿ ಅವು ಅದನ್ನು ತಿನ್ನುವುದನ್ನು ನೋಡುತ್ತದೆ ; ಆ ಆಟವನ್ನು ಆಡುತ್ತದೆ. ಸೃಷ್ಟಿಯಲ್ಲಿ ಅನೇಕ ಮಾಂಸಾಹಾರಿ ಮೃಗಗಳು ಪುಟ್ಟ ವನ್ಯಜಂತುಗಳನ್ನು ಮೈನೆಕ್ಕಿ ಸಾಕುತ್ತವೆ ಕೂಡಾ ; ಎಲ್ಲರಿಗೂ ಗೊತ್ತಿರುವಂತ ಮಾಂಸಾಹಾರಿ ತೋಳ ಮಾನವ ಶಿಶುವಿಗೆ ಮೊಲೆಯೂಡಿ ಸಲಹುತ್ತದೆ, ಅಂತಹತೋಳ ಮಕ್ಕಳನ್ನು ನಾವು Woolf Boy ಎನ್ನುತ್ತೇವೆ. ರೋಮಿನ ಸ್ಥಾಪಕರೂ, ಪೂರ್ವಜರೂ ಆದ ರೀಮಸ್ ಮತ್ತು ರಾಮ್ಯುಲಸ್ ಅವಳಿಜವಳಿಗಳು ತೋಳದ ಮೊಲೆಯುಂಡು ಬೆಳೆದ ವ್ಯಕ್ತಿಗಳು ಎನ್ನುತ್ತದೆ ಪುರಾಣ ತಿರುಮಲೇಶರು "ಹುಲಿಯು ಮೊಲವನ್ನು ಹಿಡಿದು ತಿನ್ನುತ್ತದೆ" ಎಂದಿದ್ದಾರೆ. ಸೃಷ್ಟಿಯಲ್ಲಿ ಕ್ರೌರ್ಯವೆನ್ನುವುದಕ್ಕೆ ಉದಾಹರಣೆ ಕೊಡುತ್ತಾ, ಅದು ಅಷ್ಟು ಸರಿಯಾದ ಉದಾಹರಣೆಯಲ್ಲ, ಏಕೆಂದರೆ ಹುಲಿ ಹಿಡಿದು ತಿನ್ನುವುದು, ತನ್ನ ಒಂದು ಹಲ್ಲಿಗೂ ದಕ್ಕದ ಮೊಲವನ್ನಲ್ಲ ; ಅದು ತನಗೆ 10–15 ದಿನಕ್ಕಾಗುವಷ್ಟು ಮಾಂಸ ತಿನ್ನಲು ಈಡಾಗುವ ಕಾಡು ದನವನ್ನು, ಕಡವೆಯನ್ನು, ಜಿಂಕೆಯನ್ನು ; ಹುಲಿ ಒಮ್ಮೊಮ್ಮೆ ಆನೆಯನ್ನೇ ಬೇಟೆಯಾಡುವ ದಾರ್ಷ್ಟ್ಯದ್ದು ! ತಿರುಮಲೇಶರು ಹೇಳುವಂತೆ ಹುಲಿ ಮೊಲವೊಂದು ಸಿಕ್ಕರೆ ಅದನ್ನು ಹಿಡಿದು ತಿನ್ನುವುದಕ್ಕಿಂತ ಅದರ ಮೈ ನೆಕ್ಕಿ ಅದರ ಮೈದಡಲು ಬಿಡುವ ಸಾಧ್ಯತೆಯೇ ಹೆಚ್ಚಿದೆ ಎನ್ನಬಹುದಲ್ಲವೇ ? ಏಕೆಂದರೆ ವನ್ಯ ಜೀವನದಲ್ಲಿ ದೊಡ್ಡ ಪ್ರಾಣಿಗಳು ಮಾಂಸಾಹಾರಿಗಳೂ ಚಿಕ್ಕಪುಟ್ಟ ಗೋಚಿಗೆ ಸಾಮಾನ್ಯವಾಗಿ ಹೋಗುವುದಿಲ್ಲ ; ಬದಲಿಗೆ ಅವು ಅವನ್ನು ರಕ್ಷಿಸುವ ಒಲವನ್ನು ಉಳ್ಳವು ಆಗಿವೆ. ನಾವು ಪ್ರೇಮ, ಔದಾರ್ಯ, ಆಲ್ಟ್ರುಯಿಸಂ Altruism, ಪರಹಿತವನ್ನು, ಮಾನವರಾಗಿ ಗುತ್ತಿಗೆ ತೆಗೆದುಕೊಂಡಂತಿದೆ. ನಮ್ರತೆಯಿಂದ, ಜೀವ ವಿಶ್ವಕ್ಕೆ ನಮ್ಮನ್ನು ನಾವು ಬಿಚ್ಚಿಕೊಂಡು, ಮುಕ್ತ ಹೃದಯಿಗಳಾಗಿ ನಾವು ನೋಡಿದಾಗ ನಮಗೆ ತಿಳಿಯುತ್ತದೆ–ಹೇಗೆ ಸೃಷ್ಟಿಯಲ್ಲಿ ಪ್ರೇಮವಿದೆ, ಔದಾರ್ಯವಿದೆ, ಪರಹಿತವೂ ಇದೆ–ಅವ್ಯಾಜವಾದ ಪ್ರೇಮವೂ ಅಹೇತುವಾದ ಪರಿಹಿತವೂ ಇವೆ, ಎಂಬುದು.

ಸೃಷ್ಟಿಯ, ಪ್ರಕೃತಿಯ. ಪ್ರೇಮ ಔದಾರ್ಯ, ಪರಹಿತ, ಸೃಷ್ಟಿಯ ಬುದ್ಧಿ ಕಾಸ್ಮಿಕ್ ಇಂಟೆಲಿಜೆನ್ಸ್, ನಮ್ಮ ಮಾನವ ಜಗತ್ತಿನ ಹೃಸ್ವಕ್ಕೆ ಮೀರಿದ್ದಾಗಿದೆ. ಆದರಿಂದಲೇ ಸೃಷ್ಟಿಯನ್ನು, ಕ್ರಿಯೇಷನ್ ಅನ್ನು, ಎಮಾರಲ್ amoral. ಅನ್ನುವುದು. ಸೃಷ್ಟಿಯ ಔದಾರ್ಯ ಎಂತಹುದೆಂದರೆ ಅದು ಮಾನವನನ್ನೂ ಸೊಳ್ಳೆಯನ್ನೂ ಏಕವಾದ ಜೈವಿಕತೆಯಲ್ಲಿ ಬೆಳೆಸುತ್ತದೆ ; ಇಬ್ಬರಿಗೂ ಇಮ್ಯೂನಿಟಿಯ ರಕ್ಷೆಯನ್ನು ಕೊಡುತ್ತದೆ, ಇಬ್ಬರನ್ನೂ ಸಮತೆಯಲ್ಲಿ ಅವರವರ ವೈವಿಧ್ಯತೆಯಲ್ಲಿ, ವೈಶಿಷ್ಟ್ಯತೆಯಲ್ಲಿ, ವೈಚಿತ್ರ್ಯದಲ್ಲಿ ಬೆಳೆಸುತ್ತದೆ ; ಸೃಷ್ಟಿಯದು ನಿಷ್ಪಕ್ಷಪಾತ ಔದಾರ್ಯ, ಪ್ರೇಮ.

ಯಾವುದು ಸೃಷ್ಟಿಯೋ ಅದರ ವಿರೋಧವೇ ದೇವರು. ಸೃಷ್ಟಿಯಲ್ಲಿ ಸಮತೆ ಇದೆ, ಪ್ರೇಮವಿದೆ ಔದಾರ್ಯವಿದೆ: **ದೇವರಲ್ಲಿ** ಭೇದವಿದೆ, ಜಾತಿ ವರ್ಣಗಳಿವೆ, ತಾರತಮ್ಯಗಳಿವೆ, ಹಿಂಸೆ ಇದೆ.

ವಿಧವೆಯರಿಗೆ ಮಾಸಿಕ ವೇತನ

- ಈಗಾಗಲೇ ವೃದ್ಧರು ಮತ್ತು ಅಂಗವಿಕಲರ ಜೀವನ ನಿರ್ವಹಣೆಗೆ ಮಾಸಾಶನ ನೀಡುತ್ತಿರುವ ಸರ್ಕಾರ ಈ ದಿಶೆಯಲ್ಲಿ ಮತ್ತೊಂದು ಹೆಜ್ಜೆ ಮುನ್ನಡೆದಿದೆ.

- 1, 500 ರೂಪಾಯಿಗಿಂತ ಕಡಿಮೆ ವಾರ್ಷಿಕ ಆದಾಯದ ಎಲ್ಲ ವಿಧವೆಯರಿಗೂ ತಿಂಗಳಿಗೆ 50ರೂ. ಮಾಸಿಕ ವೇತನ ದೊರೆಯಲಿದೆ.

- ಈ ಮಾಸಿಕ ವೇತನವು ಅಂತಹ ವಿಧವೆಯರು 60 ವರ್ಷ ವಯಸ್ಸು ಮುಟ್ಟುವವರೆಗೂ ದೊರೆಯುತ್ತದೆ. ನಂತರ ಅವರಿಗೆ ವೃದ್ಧಾಪ್ಯ ವೇತನ ಸೌಲಭ್ಯ ಸಿಗುತ್ತದೆ.

- ವಿಧವೆಯರಿಗೆ ವೃದ್ಧಾಪ್ಯ ವೇತನ ನೀಡಿಕೆ ವ್ಯವಸ್ಥೆಯು ಜನವರಿ ೧೯೭೪ ರಿಂದ ಪ್ರಾರಂಭವಾಗಲಿದೆ.

ಪ್ರಕಟಣೆ : "ಕರ್ನಾಟಕ ವಾರ್ತೆ"

ದಲಿತ 'ಚಿರಂಜೀವಿ' ಏಕೆಂದರೆ ಆತ ಶ್ರಮಜೀವಿ

ಸೃಷ್ಟಿಯಲ್ಲಿ ಸಮತೆ ಔದಾರ್ಯ ಕುರಿತಂತೆ ಮುಂದುವರಿದ ಚರ್ಚೆ

ಡಾ|| ಪೋಲಂಕಿ ರಾಮಮೂರ್ತಿ

ಪ್ರತಿಕ್ರಿಯೆ

ಡಾ. ತಿರುಮಲೇಶರು ನನ್ನ ಪ್ರತಿಕ್ರಿಯೆಗೆ ಪ್ರತಿಕ್ರಿಯಿಸುತ್ತಾ, ನಾನು ಎಲ್ಲಿ "ಸೃಷ್ಟಿ", "ಪ್ರಕೃತಿ" Cosmos, nature ಎಂದಿದ್ದೇನೆಯೋ ಅಲ್ಲಿ "ದೇವರು" ಎಂದು ಭರ್ತಿ ಮಾಡಿಕೊಂಡು, ಆ ಮಾತನ್ನು ನನ್ನ ಬಾಯಿಯಲ್ಲಿ ಹಾಕಿ ನನಗೆ ಅಪಚಾರ-ಅಪರಾಧ – ಮಾಡಿದ್ದಾರೆ: ನೋಡಿ, ತಿರುಮಲೇಶರು ಹೇಳುತ್ತಾರೆ—"ಬೋಳುವಾರರು ಚಿತ್ರಿಸುವ ಈ ಜಗತ್ತಿನಿಂದ ಡಾ. ಪೋಲಂಕಿ ಯವರ ಕಾಸ್ಮೊಸ್‌ಗೆ ಯಾವ ಪ್ರಯಾಸವೂ ಇಲ್ಲದೆ ಬರಬಹುದು–ದೇವರ ಬದಲು ಸೃಷ್ಟಿ ಎಂಬ ಪದವನ್ನು ಉಪಯೋಗಿಸಿ."

ಡಾ. ತಿರುಮಲೇಶರು, ಅವರು ಹೇಳುತ್ತಿರುವಂತೆಯೇ, ನನ್ನ "ಸೃಷ್ಟಿ" ಯ ಬದಲು ಅವರ "ದೇವರು" ಉಪಯೋಗಿಸಿ ನಮ್ಮೆಲ್ಲರ ಕಣ್ಣು ಚುಚ್ಚಿದ್ದಾರೆ, ಭಾಗಲ್ಪುರ ಮಾಡಿದ್ದಾರೆ: "ಆದ್ದರಿಂದ ಡಾ|| ಪೋಲಂಕಿಯವರ 'ಜೈವಿಕ' ವಾದಕ್ಕೂ ಸನಾತನಿಗಳ 'ದೈವಿಕ' ವಾದಕ್ಕೂ ಮೊತ್ತದಲ್ಲಿ ಯಾವ ವ್ಯತ್ಯಾಸವೂ ಇಲ್ಲದಿರುವುದು." –ಡಾ|| ತಿರುಮಲೇಶ್.

ನನ್ನ ಈ ಬಗೆಗಿನ ಲೇಖನಗಳೆಲ್ಲವೂ, ಓದುಗರು ಅರಿತಂತೆ, ಈ ಸನಾತನದಲ್ಲಿನ ಮೂಲಭೂತ ಜಾತಿ ವ್ಯವಸ್ಥೆಯ ಅಸಮತೆಯನ್ನು ವಿರೋಧಿಸಿಯೇ, ಅಲ್ಲಗಳೆದೇ, ಅಲ್ಲವೇ ನನ್ನ ಸೃಷ್ಟಿ–ಪ್ರಕೃತಿವಾದ, ಅಥವಾ ಚಿಂತನೆ, ನಿಂತಿರುವುದು ? ನನ್ನ "ಸೃಷ್ಟಿಯಲ್ಲಿ ಸಮತೆ" ಲೇಖನ ಸ್ಥಾಪಿಸುತ್ತಿರುವುದು ? ಅಂದಾಗ ತಿರುಮಲೇಶರು—ನನಗೆ ಅವರು ಲೇಖನದುದ್ದಕ್ಕೂ ಡಾಕ್ಟರಿಸಿದ್ದಾರೆ, ನಾನು ಬರವಣಿಗೆಯ ಸರಳತೆಗಾಗಿ ಅವರನ್ನು ಬಹುವಚನಿಸುವಷ್ಟು ಸಲಿಗೆ ತೋರುತ್ತಿದ್ದೇನೆ–ಅವರ "ಸನಾತನ" ವನ್ನು ನನ್ನ "ಸೃಷ್ಟಿ" ಗೆ ಸಮೀಕರಿಸುವುದು, ಅಲ್ಲದೆ ಅದನ್ನೂ ಅವರ 'ದೇವರಿ' ಗೆ ಭರ್ತಿಮಾಡಿಕೊಂಡಿರುವುದು ನನಗೆ ತುಂಬಾ ನೋವನ್ನುಂಟು ಮಾಡುವ ವಿಷಯವಾಗಿದೆ.

ಇಂಗ್ಲಿಷ್‌ನಲ್ಲಿ God is made in the image of man ಅಂದರೆ "ದೇವರು ಮಾನವಕಲ್ಪಿತ, ಮಾನವನ ಸ್ವಪ್ರತಿಮೆ" ಎನ್ನುವ ಅರ್ಥದ ಮಾತಿದೆ. ಮಾನವ ತನ್ನ ಪ್ರಜ್ಞೆಯಲ್ಲೇ ಹುಟ್ಟಿದ ಅಸಮತೆ ತಾರತಮ್ಯಗಳನ್ನು, ಪಾಪಪುಣ್ಯಗಳನ್ನು, ಸ್ವರ್ಗ ನರಕಗಳನ್ನು ಎರಕಹೊಯ್ದು "ದೇವರು" ಮಾಡುತ್ತಾನೆ ; ಆ ಮಾನವ "ದೇವರು" ದುಷ್ಟ ಶಿಕ್ಷಕ ಶಿಷ್ಟ ರಕ್ಷಕನಾಗುತ್ತಾನೆ, ಆ ಮಾನವನ "ದೇವರು", ಪುರುಷಸೂಕ್ತದಂತೆ, ಬಾಯಿಂದ ಬ್ರಾಹ್ಮಣರನ್ನು, ಭುಜದಿಂದ ಕ್ಷತ್ರಿಯರನ್ನು, ತೊಡೆಯಿಂದ ವೈಶ್ಯರನ್ನು, ಪಾದದಿಂದ ಶೂದ್ರರನ್ನು ಸೃಷ್ಟಿಸುತ್ತಾನೆ: ಆ ಮಾನವ "ದೇವರು" "ಬ್ರಾಹ್ಮಣ" ನೇ ಆಗಿ "ಭೂಸುರ" ನಾಗುತ್ತಾನೆ: ಭೂಸುರನಾಗಿ ಶೂದ್ರ ಶಂಭೂಕನನ್ನು ಕೊಲ್ಲಿಸುತ್ತಾನೆ, ಹಸುಳೆ ಉಪಪಾಂಡವರನ್ನು ಕೊಂದು ಕೊಲೆಗಾರನಾದರೂ ಕೊಲ್ಲಲಾರದವನಾಗುತ್ತಾನೆ: "ದೇವರು" ಆಗುತ್ತಾನೆ ; ಆ "ದೇವರು" ಆಗಿಯೇ ಅನಾದಿಕಾಲದಿಂದಲೂ ಪೂಜೆಗೊಳ್ಳುತ್ತಾನೆ, ಪ್ರಜಾಪ್ರಭುತ್ವವಾದ ಭಾರತ ಮೊದಲಪ್ರಜೆಯೂ ರಾಷ್ಟ್ರಪತಿಯೂ ಆದ ರಾಜೇಂದ್ರ ಪ್ರಸಾದರಿಂದ ನೂರು ಜನ ಬ್ರಾಹ್ಮಣರಲ್ಲಿ ಪಾದ ತೊಳಿಸಿಕೊಳ್ಳುತ್ತಾನೆ, ಆ ಅವಮಾನುಷತೆಗೆ ರಾಮಮನೋಹರ ಲೋಹಿಯರಂತಹ ಮಾನವರನ್ನು ದಿಗ್ಭ್ರಾಂತಗೊಳಿಸುತ್ತಾನೆ: ಆ ಮಾನವ ಕಪೋಲಕಲ್ಪಿತ "ದೇವರೇ" ಬೋಳುವಾರರ, ತಿರುಮಲೇಶರ "ದೇವರು" ಆ 'ದೇವರ' ನ್ನು 'ಸೃಷ್ಟಿ' ಗೆ 'ಪ್ರಕೃತಿ' ಗೆ, Nature, Cosmos ಗೆ ಸಮೀಕರಿಸುವುದು ಅಕ್ಷಮ್ಯವಾದ ಅನಕ್ಷರತೆ ಎಂದು ತಿಳಿಯಬೇಕಾಗುತ್ತದೆ.

ನೋಡಿ, ಉದಾಹರಣೆಗೆ ತಿರುಮಲೇಶರೇ ಉದ್ಧರಿಸಿದ ಬೋಳುವಾರರ ಕಥೆಯಲ್ಲಿ "ಸೃಷ್ಟಿ" ಮತ್ತು "ದೇವರು" ಒಂದಕ್ಕೊಂದು ಹೇಗೆ ವಿರುದ್ಧವಾಗಿದೆ ಎಂಬುದನ್ನು ಕಥೆ ಹೇಳುತ್ತದೆ–"ದೇವರ ಇಚ್ಛೆಯಂತೆ ಅವನು (ಜೋಸಫನು) ಬಡವನೂ, ಆರೋಗ್ಯವಂತನೂ ಆಗಿದ್ದನು. "ಇಲ್ಲಿ ಜೋಸಫನು ಬಡವ" ನಾಗಿರುವುದು "ದೇವ" ರಿಂದ, ಮಾನವನಿರ್ಮಿತ ದೇವರಿಂದ: ಆದರೆ ಅವನು "ಆರೋಗ್ಯವಂತ" ನಾಗಿರುವುದು ಸೃಷ್ಟಿಯಿಂದ ಪ್ರಕೃತಿಯಿಂದ Nature ನಿಂದ. ಬಡತನದ ವ್ಯವಸ್ಥೆ ಮಾನವ ಕಲ್ಪಿತವಾದದ್ದು, ಮಾನವ ಹುಟ್ಟು ಹಾಕಿದ ಧರ್ಮ–ದೇವರು ನಿರ್ಮಿತವಾದದ್ದು. Blessed are the poor, ದರಿದ್ರರೇ ಪುಣ್ಯವಂತರು ಎಂಬ ಮಾತನ್ನು ಧರ್ಮಗ್ರಂಥ, ಬೈಬಲ್ಲು ಹೇಳುತ್ತದೆ, ದೇವ ಮಾನವನಿಂದ ಹೇಳಿಸುತ್ತದೆ, ದೇವರ ವಾಕ್ಯವೆನ್ನುತ್ತದೆ — gospel ದೇವರ ವಚನ, ಎನ್ನುತ್ತದೆ. 'ಆದ್ದರಿಂದ "ಬಡತನ ಚಿರಂತನವಾಗುತ್ತದೆ, ಶಾಶ್ವತವಾಗುತ್ತದೆ—"ದೇವರ"ಂತೆಯೇ.

ಆದರೆ "ಆರೋಗ್ಯ" ಬಡವನ ಆರೋಗ್ಯ ಸೃಷ್ಟಿದತ್ತವಾದದ್ದು, ನೇಚರಿನ ಕೊಡುಗೆ. ಏಕೆಂದರೆ ಬಡವ ಕಾಯಕದವ, ಕಾಯಕದ ಕಸರತ್ತೇ ಅವನ ರಕ್ತಚಲನೆಯನ್ನು ರಕ್ತಶುದ್ಧಿಯನ್ನು ದೇಹಾರೋಗ್ಯವನ್ನು ಕಾಪಾಡುತ್ತದೆ, ಬೆಳೆಸುತ್ತದೆ. ಶ್ರಮಜೀವಿಯು ತಿಂದ ಆಹಾರ ಜೀರ್ಣವಾಗುತ್ತದೆ, ರಕ್ತವಾಗುತ್ತದೆ, ಮಾಂಸ ಮೂಳೆಯಾಗುತ್ತದೆ. ಪುಷ್ಟವಾಗುತ್ತದೆ–ಸುಂದರವಾಗುತ್ತದೆ. ಆದ್ದರಿಂದಲೇ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಎಲ್ಲಾ ಕಾಲದಲ್ಲೂ ಕಾಯಕದ ಬಡವರು ಶ್ರಮಜೀವ ಕೆಳವರ್ಗದವರು ಧೃಢಕಾಯರಾಗಿರುತ್ತಾರೆ, ಚೆಲುವರಾಗಿರುತ್ತಾರೆ, ಉದಾಹರಣೆಗೆ, ಅನಂತಮೂರ್ತಿಯವರ ಕಥೆಗಳಲ್ಲಿ ಶೂದ್ರ, ದಲಿತ ಹೆಣ್ಣುಗಳು, ಬ್ರಾಹ್ಮಣ ಹೆಣ್ಣುಗಳೊಡನೆ ಅವರೇ ಹೋಲಿಸಿ ತೋರಿಸಿದಂತೆ ಪುಷ್ಟರಾದ, ದೇಹಾಂಗ ಪುಷ್ಕಳತೆಯುಳ್ಳ, ಚೆಲುವೆಯರು–ಕಾಮಿಸುವಷ್ಟು ಸುಂದರಿಯರು. ಇ. ಎಂ. ಫೋರ್ಸ್ಟರನೂ ಭಾರತೀಯ ಮೇಲ್ವರ್ಗದ ನಾಗರೀಕರನ್ನು ಅಸ್ಪೃಶ್ಯರಿಗೆ ಹೋಲಿಸುತ್ತಾ ಈ ಮಾತನ್ನು ಹೇಳುತ್ತಾನೆ : "This man would have been noticeable fnywhere : among the thin-hammed alatchested mediocrities of Chandrapore he stood out as divine, yet he was of the city, its garbage had nourished him, he would end on its rubbish heaps" ಈ ಮಾತುಗಳನ್ನು ಎಲ್ಲಾ ಕಾಲದೇಶಗಳ ಶ್ರಮಜೀವಿಗಳ, ದಲಿತರ ಬಗ್ಗೆ ಶೋಷಿತ ಕೆಳವರ್ಗಗಳ ಬಗ್ಗೆ, Working Class ಬಗ್ಗೆ ಹೇಳಬಹುದಲ್ಲವೇ ?

ಇಲ್ಲಿ ಗಮನಿಸಬೇಕಾದ್ದು ಏನೆಂದರೆ ಸೃಷ್ಟಿ–ಪ್ರಕೃತಿ ಶ್ರಮಜೀವಿಗೆ ಸಹಜವಾಗಿಯೇ. ಅವನಿಗೆ ಆ ಶ್ರಮದಿಂದಲೇ, ಆರೋಗ್ಯ–ಚೆಲುವುಗಳನ್ನು ಗಳಿಸಿಕೊಡುತ್ತದೆ. ಆರೋಗ್ಯ ಪಾಠ ಹೇಳುವಂತೆ Circulation is health ; Stagnation is death. ದಣಿಯುವ ಬೆವರುವ ಜೀವಿ ತನ್ನಲ್ಲಿ ಇಮ್ಯೂನಿಟಿ

ತಿಸಿಸ್ಟೆನ್ಸ್, ಸ್ಟ್ಯಾಮಿನಾ (immunity, resistance, stamina) ಗಳನ್ನು ಗಳಿಸಿಕೊಳ್ಳುತ್ತಾನೆ. ಮೊನ್ನೆ ತಾನೆ ನನಗೆ ನನ್ನ ಬಂಧುಗಳೊಬ್ಬರು ತರಗಾರರೊಬ್ಬ ಕುಂದಾಪುರದ ಕಟ್ಟಡವೊಂದರಿಂದ ನಲವತ್ತಡಿ ಎತ್ತರದಿಂದ ಧೊಪ್ಪನೆ ಕಾಂಕ್ರೀಟ್ ನೆಲದ ಮೇಲೆ ಬಿದ್ದು, ತಲೆ ಕಿವಿಗಳಿಂದ ರಕ್ತಸ್ರಾವವಾಗಿ ಪ್ರಜ್ಞೆ ತಪ್ಪಿದನೆಂದೂ, ಹೇಗೆ ಅವನನ್ನು ಮಣಿಪಾಲಿಗೆ ರವಾನಿಸಲಾಯಿತೆಂದೂ, ಅಲ್ಲಿ ಇಳಿಸುವಾಗ ಅವನ ಸ್ಟ್ರೆಚರಿನ ದೋಣಿ ರಕ್ತದಿಂದ ತುಂಬಿತೆಂದೂ, ಹೇಗೆ ಅಲ್ಲಿನ ಡಾಕ್ಟರುಗಳು ಅವನು ಉಳಿಯುವುದು ಸಾಧ್ಯವಿಲ್ಲವೆಂತಲೇ ಅವನಿಗೆ ರಕ್ತ ಕೊಟ್ಟು ಅಪರೇಷನ್ ಮಾಡಿದರೆಂದೂ, ಆದರೆ ಅವರೆಲ್ಲರಿಗೂ ಅಚಾಕ್ಕಾಗುವಂತೆ ಆ ಮನುಷ್ಯ ನಿಧಾನವಾಗಿ ಪ್ರಜ್ಞೆಗೆ ಮರಳಿ, ಈಗ ಒಂದು ತಿಂಗಳಾದ ಮೇಲೆ, ಮತ್ತೆ ತರಗಾರ ಕೆಲಸಕ್ಕೆ ಸಿದ್ಧನಾಗಿರುವನೆಂದೂ ಹೇಳುತ್ತಾ ಆ ಶ್ರಮಜೀವಿಯ ಅತ್ಯಾಶ್ಚರ್ಯಕ stamina ವನ್ನು ಕೊಂಡಾಡಿದರು.

ಆದರೆ ತಿರುಮಲೇಶರು ಹೇಳುತ್ತಾರೆ: "ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗದಲ್ಲಿ ಇಮ್ಯೂನಿಟಿಯ ಬಗ್ಗೆ ಹೇಳುವ ಡಾ॥ ಪೋಲಂಕಿ ಇದೇ ವರ್ಗಗಳಲ್ಲಿ ಅತಿ ಹೆಚ್ಚಿನ ಅಕಾಲ ಮರಣಗಳು ಸಂಭವಿಸುತ್ತವೆ; ಆ ಕಡಿಮೆ ಆಯುರ್ಮಾನವಿರುವುದೂ ಈ ಜನರಲ್ಲೇ ಎಂಬ ಬಗ್ಗೆ ಹೇಳುವುದಿಲ್ಲ" ತಿರುಮಲೇಶರ Statistics, ಅಂಕಿ ಅಂಶ, ಚಿತ್ರದ ಅರ್ಧಕ್ಕೆ ಸತ್ಯ: ಇನ್ನರ್ಧಕ್ಕೆ ಅದು ಕಣ್ಣು ಮುಚ್ಚಿಕೊಂಡಿದೆ, ಬಗ್ಗಬಡತನದಲ್ಲಿ ಒಂದು ಹೊತ್ತೂ ಸರಿಯಾದ ಆಹಾರವಿಲ್ಲದೆ, ಆ ಆಹಾರದಲ್ಲೂ ಪೌಷ್ಟಿಕಾಂಶ ಸಾಕಷ್ಟಿಲ್ಲದೆ, ಜರ್ಝರಿತನಾಗಿ, ಶೋಷಣೆಗೆ ತುತ್ತಾದ ಜೀವಿತನಗೆ ಪ್ರಕೃತಿಯಿಂದ ದತ್ತವಾದ, ತನ್ನ ಜೀವದ ಶ್ರಮದಿಂದಲೇ ಲಭ್ಯವಾದ, ಇಮ್ಯೂನಿಟಿ, ರೆಸಿಸ್ಟೆನ್ಸ್, ಸ್ಟ್ಯಾಮಿನಾಗಳನ್ನು ಎಲ್ಲಿಯವರೆಗೆ ರಕ್ಷಿಸಿಕೊಳ್ಳಬಲ್ಲ? ನಮ್ಮ ದೇಶದಲ್ಲಿ ದಲಿತರಲ್ಲಿ ಹೊಟ್ಟೆಗಿಲ್ಲದೇ ಸಾಯುವವರೆಷ್ಟು! ಅರ್ಧಕ್ಕಿಂತಲೂ ಹೆಚ್ಚು ಜನ ದರಿದ್ರ ರೇಖೆಗೆ ಕೆಳಗೇ ಇದ್ದಾರೆ. ಅವರಲ್ಲೂ ದಲಿತರು, ಅಸ್ಪೃಶ್ಯರು, ಇನ್ನೂ ಭೀಕರವಾದ ಬರದಲ್ಲಿ ಪ್ರಾಣ ಹಿಡಿದುಕೊಂಡಿದ್ದಾರೆ; ಬಾಣಂತಿಯರು ಕ್ಷೀಣಿಸಿ. ರಕ್ತ ಸ್ರವಿಸಿ, ಸಾಯುತ್ತಾರೆ; ಮಕ್ಕಳು ಹಾಲಿಲ್ಲದೆ ಸಾಯುತ್ತವೆ. ಈ ಅಮಾನುಷ ಪರಿಸ್ಥಿತಿಯಲ್ಲಿ ದಲಿತರು ಸಂಪೂರ್ಣ ನಿರ್ನಾಮವಾಗಿ, ನಿರ್ವಂಶವಾಗಿ, ಅಳಿದುಹೋಗದೇ ಇರುವುದೇ ಆಶ್ಚರ್ಯ; ಅವರಿನ್ನೂ ಉಳಿದಿರುವುದಕ್ಕೆ ಸೃಷ್ಟಿ–ಪ್ರಕೃತಿ ಅವರಿಗೆ ಕೊಟ್ಟಿರುವ ಇಮ್ಯೂನಿಟಿ, ರೆಸಿಸ್ಟೆನ್ಸ್, ಸ್ಟ್ಯಾಮಿನಾಗಳೇ ಆ ಪವಾಡ, ಅಲ್ಲವೇ? ಅಂತಹದರಲ್ಲಿ ಎರಡು ಹೊತ್ತು ಹೊಟ್ಟೆ ತುಂಬುವ ಜೀತದಾಳು. ಅಸ್ಪೃಶ್ಯ ಪುಷ್ಟನಾಗಿರುತ್ತಾನೆ, ಪುಷ್ಕಳವಾಗಿ ಬೆಳೆಯುತ್ತಾನೆ. ಈ ದಲಿತರ ದಾರಿದ್ರ್ಯ ಪರಿಸ್ಥಿತಿ ಮೇಲ್ಕಾಣಿಸಿಯುವ ರಿಗಿದ್ದಲ್ಲಿ ಅವರಲ್ಲಿ ಪ್ರತಿ ಒಬ್ಬ ಸಾಯುವ ದಲಿತನಿಗೆ ನಾಲ್ಕೈದು ಜನ ಸಾಯುತ್ತಿದ್ದರೆಂದರೆ ಉತ್ಪ್ರೇಕ್ಷೆಯಾಗಲಾರದಲ್ಲವೇ? ರಕ್ತಸ್ರಾವವಾದ ದಲಿತ ತರಗಾರನಿಗೆ ರಕ್ತ ಕೊಟ್ಟ ಮೇಲೆ ಅವನು ಚೇತರಿಸಿಕೊಂಡ: ಸ್ಕೂಟರಿನಿಂದ ಬಿದ್ದು ರಕ್ತಸ್ರಾವಗೊಂಡವರಲ್ಲಿ ಎಷ್ಟು ಜನ ರಕ್ತ ತೆಗೆದುಕೊಂಡು ಅವನಂತೆ ಬದುಕಿಯಾರು?

ಇಲ್ಲಿ ನೋಡಿ, ತಿರುಮಲೇಶರ ಅಂಕಿಅಂಶಕ್ಕೆ ಎದುರಿಗಿರುವ ಸತ್ಯಾಂಶವನ್ನು: ಅವರು ಹೇಳುತ್ತಿರುವ "ಅಕಾಲ ಮರಣಕ್ಕೀಡಾಗುವ" ಹಾಗೂ "ಕಡಿಮೆ ಆಯುರ್ಮಾನವಿರುವ" ದಲಿತ ಅಸ್ಪೃಶ್ಯರು ಈ ನಾಡಿನ ಐದನೇ ಒಂದು ಭಾಗದಷ್ಟಕ್ಕೆ ಬೆಳೆದ ಜನಸಂಖ್ಯೆಯುವರಾಗಿದ್ದಾರಲ್ಲಾ. ಸಾವಿರಾರು ವರ್ಷಗಳ ತೊತ್ತಳತುಳಿಯಲ್ಲಿ ಜೀವಂತರಾಗಿ ಬದುಕಿ ವೃದ್ಧಿಗೊಳ್ಳುತ್ತಿದ್ದಾರಲ್ಲಾ, ಆದರೆ ಅದಕ್ಕೆ ವಿರುದ್ಧವಾಗಿ ಅನಾದಿಕಾಲದಿಂದಲೂ ಪೋಷಿತರಾಗಿ ಪೂಜೆಗೊಂಡ, ಪೌಷ್ಟಿಕ ಆಹಾರಗಳಾದ ಹಾಲು ಮೊಸರು ತುಪ್ಪಗಳನ್ನು ಸೇವಿಸುತ್ತಾ ಬಂದಿರುವ ಬ್ರಾಹ್ಮಣ ಉಚ್ಚವರ್ಗ ಕೇವಲ ನಾಡಿನ 4 ಅಥವಾ 5ರ ಶೇಕಡದಷ್ಟಕ್ಕೆ ಹ್ರಸ್ವವಾಗಿದೆಯಲ್ಲಾ, ಮೇಲಿದ್ದ ಉಚ್ಚವರ್ಗಗಳೆಲ್ಲಾ ಅಸ್ಪೃಶ್ಯಜನಸಂಖ್ಯೆಗೆ ಹೋಲಿಸಿದರೆ ಮೈನಾರಿಟಿಯೇ ಆಗಿವೆಯಲ್ಲಾ, ಅದರ ರಹಸ್ಯವೇನು? ನಮ್ಮಲ್ಲಿನ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್‌ಗಳನ್ನು ನಾವು ಸೇರಿಸಿಕೊಂಡರಂತೂ ಅವರು ಭಾರತೀಯ ಜನಸಂಖ್ಯೆಯ 1/3 ಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯುವರು–ಹರಿಜನ ಗಿರಿಜನ ದಲಿತ ಅಸ್ಪೃಶ್ಯರು!

ತಿರುಮಲೇಶರ ಸ್ಟ್ಯಾಟಿಸ್‌ಟಿಕ್ಸ್, ಅಂಕಿಅಂಶ ಎರಡೂ ಕಣ್ಣಿನಿಂದ ನೋಡಿದ ಚಿತ್ರದ್ದಾಗಬೇಕು, ಆಗ ತಿಳಿಯುತ್ತದೆ ಹೇಗೆ ದಲಿತ ಅಸ್ಪೃಶ್ಯರಲ್ಲೇ ಹೆಚ್ಚಿನ ಫರ್ಟಿಲಿಟಿ fertility, ಸಂತಾನ ಸಂಪತ್ತೂ, ಹೆಚ್ಚಿದೆ, ಹೇಗೆ ಅವರಲ್ಲೇ ಹೆಚ್ಚಿನ ಎಂಡ್ಯೂರೆನ್ಸ್ endurence ಸರ್ವೈವಲ್ survival, ಧಾರಣೆ, ಬಾಳಿಕೆಗಳು, ಅವರಿಗಿರುವ ಹ್ಯಾಂಡಿಕ್ಯಾಪ್ handicap ಗಳೊಡನೆ ಹೋಲಿಸಿದಾಗ, ಇರಲಿಕ್ಕೆ ಸಾಕು ಎನ್ನುವ ಸತ್ಯಾಂಶ. ಅವರಲ್ಲಿ ಬಹಳ ಜನ ಅಕಾಲ ಮರಣಕ್ಕೆ ಈಡಾಗುತ್ತಾರೆ. ಏಕೆಂದರೆ ಅವರು ಕೆಲಸ ಮಾಡುವ ಗಣಿಗಳು, ಕಟ್ಟಡಗಳು ಕುಸಿದು ಅವರು ಸಾಯುತ್ತಾರೆ; ಅವರನ್ನು ಮೇಲ್ವರ್ಗದ ಜನರು ಬೇಟೆಯಾಡಿ ಅವರ ಗುಡಿಸಲಿಗೆ ಬೆಂಕಿ ಇಕ್ಕಿ ಕೊಲ್ಲುತ್ತಾರೆ; ಅಸ್ಪೃಶ್ಯರನ್ನು ಹಳ್ಳಿಗಳಲ್ಲಿ ಚಿಲ್ಲರೆ ವಿಷಯಕ್ಕೆ ಅನಾಯಾಸವಾಗಿ ಕೊಂದು ಬಿಡುತ್ತಾರೆ; ಇಂತಹ ಅನೇಕ ಮನುಷ್ಯ ಮಾಡಿದ, ಸೃಷ್ಟಿಸಿದ ಅಪಘಾತಗಳಿಂದಲೇ ಹೆಚ್ಚು ಪ್ರಮಾಣ
ದಲ್ಲಿ ದಲಿತರು ಅಕಾಲಮರಣಕ್ಕೆ ಈಡಾಗುತ್ತಾರೆ:
ಇದರ ಜೊತೆಗೆ ಅವರು ಇರುವ ಅನಾರೋಗ್ಯಕರ
ಹೊಲಗೇರಿಗಳು. ಅವರು ತಿನ್ನಬೇಕಾದ ಅಳಸಿದ,
ಕೊಳೆತ ಆಹಾರ ಪದಾರ್ಥಗಳು, ಅವರಿಗಿರುವ
ಸೊಳ್ಳೆ ತಿಗಣೆ ಇಲಿ ಹೆಗ್ಗಣಗಳ, ರಕ್ತ–ಆಹಾರ
ಶೋಷಕ ಪಿಡುಗುಗಳು–ಈ ಎಲ್ಲಾ ಹ್ಯಾಂಡಿ
ಕ್ಯಾಪ್‌ಗಳನ್ನು ಎದುರಿಗೆ ಇಟ್ಟುಕೊಂಡು ನೋಡಿ
ದರೆ, ಅವರು ಈ ಅಪಾರ ಜನಸಂಖ್ಯೆಯಲ್ಲಿ ಅನಾ
ದಿಕಾಲದಿಂದಲೂ ಉಳಿದೇ, ಬಾಳುತ್ತಲೇ, ವೃದ್ಧಿ
ಗೊಳ್ಳುತ್ತಿರುವುದನ್ನು ಗಮನಿಸಿದರೆ ದಲಿತ ಎಷ್ಟು
ಚಿರಂಜೀವಿ ಎನ್ನುವುದು ಗೊತ್ತಾಗುತ್ತದೆ. ದಲಿತ
ಚಿರಂಜೀವಿ ಏಕೆಂದರೆ ಅವನು ಶ್ರಮಜೀವಿ; ಶ್ರಮ
ಜೀವಿ ರಕ್ತ ಸಂಚಾರಿ, ರಕ್ತ ಸಂಚಾರಿ ಆರೋಗ್ಯ;
ಆರೋಗ್ಯವೇ ಸೃಷ್ಟಿಯ ಔದಾರ್ಯ
ಒಬ್ಬ ವೈದ್ಯವಿಜ್ಞಾನಿ ಹೇಳುವಂತೆ ಮಾನವನು
ತನ್ನ ದೇಹ ಭಾಗಗಳ ಸಂಕೀರ್ಣ ಜಗತ್ತನ್ನು ನೆನೆಸಿ
ಕೊಂಡರೆ ಅವನು ಸದಾ ಒಂದಲ್ಲ ಒಂದು ರೋಗ
ಕ್ಕೆ, ಅಸ್ಪೃಶ್ಯತೆಗೆ, ಈಡಾಗಿರಬೇಕು; ಆದರೆ
ಅವನು ಆರೋಗ್ಯಕರವಾಗಿರುವುದು ಸೃಷ್ಟಿಯ
ಪವಾಡವೇ ಸರಿ; ಅದೀಗ ಸೃಷ್ಟಿಯ ಔದಾರ್ಯ
ಹೀಗೆ ಆರೋಗ್ಯದಿಂದ ದೇಹಸೌಷ್ಟವ, ದೇಹ
ಸೌಷ್ಟವದಿಂದ ಚೆಲುವು, ಚೆಲುವಿಂದ ಕಲೆ-ಬೆಳೆಯು
ತ್ತವೆ, ಸೃಷ್ಟಿಯ ಔದಾರ್ಯದಲ್ಲಿ.

ಇನ್ನು ತಿರುಮಲೇಶರು ನನ್ನ ಸೃಷ್ಟಿಲೇಖ
ಗಳಲ್ಲಿನ ದಲಿತ ಮತ್ತು ಕಲೆಗಳಿಗಿರುವ, ಜನಕೂ
ಜಾನಪದಕ್ಕೂ ಇರುವ ಸಂಬಂಧದ ನೈಸರ್ಗಿಕ
ಯನ್ನು ಪ್ರಶ್ನಿಸಿದ್ದಾರೆ. ನೋಡಿ, ಎಲ್ಲಾ ದೇ
ಗಳಲ್ಲೂ ಶ್ರಮಜೀವಿಗಳಿಂದಲೇ ಜಾನಪದ ಕ
ಗಳು ಹುಟ್ಟಿರುವುದು ಅಲ್ಲವೇ? ಪ್ರಾಜ್ಞರೆಲ್ಲರು
ಒಪ್ಪುವಂತೆ ಕಲೆಗಳಲ್ಲೆಲ್ಲಾ, ಅಂದರೆ ಸಾಹಿ
ಸಂಗೀತ ಶಿಲ್ಪ ನೃತ್ಯ ಇತ್ಯಾದಿಗಳಲ್ಲೆಲ್ಲಾ, ನೃತ
ಅತ್ಯಂತ ಪ್ರಾಚೀನವಾದದ್ದು ಎಂದು. ಆದಿಮಾನ
ಮಾತನಾಡುವುದನ್ನು ಕಲಿಯುವುದಕ್ಕೆ ಮುಂಚ
ಹಾಡುವುದಕ್ಕೆ ಮುಂಚೆ, ಕುಣಿಯುತ್ತಾ
ಬೇಟೆಗಾರ ಬೇಟೆಯಾಡಿ ಕುಣಿಯುತ್ತಾನ
ಬೇಟೆಗಾರರೆಲ್ಲಾ ಒಟ್ಟಾಗಿ ಕುಣಿಯುತ್ತಾ
ಹಾಡುತ್ತಾರೆ. ಹಾಗೆಯೇ ಜನರಿಂದ, ಜನಸಾಮಾ
ನ್ಯ ದಲಿತರಿಂದ ಜಾನಪದ ಹುಟ್ಟುತ್ತದೆ–ನಮ್ಮ
ಲ್ಲಿನ ಅಸ್ಪೃಶ್ಯರಿಂದ ಅನೇಕಾನೇಕ ಜಾನಪದ ಕ
ಗಳು, ಚರ್ಮದ ಮದ್ದಲೆಗಳ, ಕರುಳಿನ, ತಂತಿಗ
ಮೂಳೆಗಳ ವಾದ್ಯಗಳ ಜಾನಪದ ಕಲೆಗಳು ವಿ
ಲವಾಗಿ ಬೆಳೆದಿವೆ. ನೀಗ್ರೋ ಜನರ ಮದ್ದಲೆ ಕ
ಗಳು, ಅಮೆರಿಕಾ ಕಪ್ಪು ಜನರ ಜಾಜ್ ಕಲೆಗಳ
ಆದರೆ ಅದೇ ಪ್ರಮಾಣದಲ್ಲಿ ಅಷ್ಟೇ ನೈಸರ್ಗಿ

ನಿರಂತರ ಉದ್ಯೋಗ ಯೋಜನೆ

ದುಡಿಯುವವರಿಗೆ ಬೇಕೆಂದಾಗ ಉದ್ಯೋಗ

- ೨೬-೧-೮೪ ರಿಂದ ರಾಜ್ಯದ ನಲವತ್ತೈದು ತಾಲ್ಲೂಕುಗಳಲ್ಲಿ ನಿರಂತರ ಉದ್ಯೋಗ ಯೋಜನೆಯ ಆರಂಭ. ಈ ತಾಲ್ಲೂಕುಗಳ ಎಲ್ಲ ಗ್ರಾಮಗಳ ೧೬ ರಿಂದ ೬೦ ವರ್ಷದೊಳಗಿನ ಕೃಷಿ ಕಾರ್ಮಿಕರು ಮತ್ತಿತರ ಕೂಲಿಕಾರರಿಗೆ ಇನ್ನು ಮುಂದೆ ವರ್ಷದ ಯಾವುದೇ ಸಮಯದಲ್ಲಿ ಉದ್ಯೋಗ ನೀಡುವ ಭರವಸೆ.

- ಉದ್ಯೋಗ ಬೇಕೆನ್ನುವ ಕೂಲಿಕಾರರು ಸಂಬಂಧಪಟ್ಟ ಗ್ರಾಮಲೆಕ್ಕಿಗರು ಅಥವಾ ಪಂಚಾಯತಿಯಲ್ಲಿ ಹೆಸರು ನೊಂದಾಯಿಸಬೇಕು. ಹಾಗೆ ನೊಂದಾಯಿಸಿದ ಮೂವತ್ತು ದಿನಗಳೊಳಗೆ ಅವರಿಗೆ ಸರ್ಕಾರದ ಕಾಮಗಾರಿ ಕೆಲಸಗಳಲ್ಲಿ ಉದ್ಯೋಗ ಕೊಡಲಾಗುವುದು. ಈ ಉದ್ಯೋಗವನ್ನು ಸಾಮಾನ್ಯವಾಗಿ ಕೂಲಿಕಾರರು ವಾಸಿಸುವ ಗ್ರಾಮಗಳ, ಆರರಿಂದ ಹತ್ತು ಕಿಲೋಮೀಟರ್ ಫಾಸಲೆಯೊಳಗೆ ಒದಗಿಸಲಾಗುವುದು.

- ಕೂಲಿಕಾರರ ಗ್ರಾಮಗಳ ಸುತ್ತ ಮುತ್ತ ಸಾಕಷ್ಟು ಉದ್ಯೋಗಾವಕಾಶಗಳಿಲ್ಲದ ಸಂದರ್ಭದಲ್ಲಿ ಹತ್ತಿರದ ಯೋಜನಾ ಪ್ರದೇಶಗಳಲ್ಲಿ ಉದ್ಯೋಗ ಒದಗಿಸಲಾಗುವುದು.

- ಗ್ರಾಮೀಣ ಪ್ರದೇಶದ ಕಡುಬಡವರ ಜೀವನ ನಿರ್ವಹಣೆಗೆ "ನಿರಂತರ ಉದ್ಯೋಗ ಯೋಜನೆ" ಒಂದು ವರ ಪ್ರಸಾದ. ಲಕ್ಷಾಂತರ ಕೃಷಿ ಕೂಲಿಕಾರರ ಬದುಕಿಗೆ ಇದೊಂದು ಹೊಸ ಆಸರೆ.

- ಗ್ರಾಮೀಣ ಜನತೆಯ ನಿರುದ್ಯೋಗ ಮತ್ತು ಬಡತನದ ನಿವಾರಣೆಗೆ ರಾಜ್ಯದ ಸರ್ಕಾರದ ಬೃಹತ್ ಕಾರ್ಯಕ್ರಮ—"ನಿರುಂತರ ಉದ್ಯೋಗ ಯೋಜನೆ"

ಜನತೆಯ ಆಶೋತ್ತರಗಳಿಗೆ ಸದಾ ಮಿಡಿಯುವ ಸರ್ಕಾರ :— ಜನತಾ ಸರ್ಕಾರ.

ಕರ್ನಾಟಕ ವಾರ್ತೆ

ಕತ್ತಲೊಡನೆ ನೂತುಕತೆ

ಚೆಲುವನ ಗುಡ್ಡ

● ಕೆ. ಬಿ. ಸಿದ್ದಯ್ಯ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಭಯ ಅನ್ನುವುದು ನಾಲಿಗೆ ಸೇದಿಕೊಂಡು ಅರೆ ಜೀವವಾಗಿ ಒದ್ದಾಡುತ್ತಿತ್ತು. ಒಳಗೆ ಹೋಗ್ತ ಹೋಗ್ತ ಬಿ ಕೊ ಅನ್ನುತ್ತದೆ: ಎಕರೆಯಷ್ಟು ಹೊಂಗೆ ತೋಪು. ಈ ಹೊಂಗೆ ಕೋಟೆಯೊಳಗೆ ಪಾತಾಳಕ್ಕೆ ಬೇರು ಬಿಟ್ಟು ಭೂತಾಯಿಯ ಎದೆಯ ಮೇಲೆ ಉಸಿರಾಡುತ್ತ ನಿಂತಿರುವ ದಟ್ಟದರಿದ್ರ ಜುಮ್ಮು ನೇರಳೆಮರ. ಸುತ್ತೇಳು ಹಳ್ಳಿಗಳ ನಾಲಿಗೆಗೆ ರುಚಿತೋರಿಸಿರುವ ಇಪ್ಪತ್ತು ಮೂವತ್ತು ವರ್ಷ ವಯಸ್ಸಿನ ಮರ ಅದು. ಹದಿನೈದು ಮೈಲಿ ಪಾಸ್ಲೆಯಲ್ಲಿ ಜುಮ್ಮು ನೇರಳೆ ಮರ ಅಂತ ಇರೋದು ಅದೊಂದೆ. ಇಷ್ಟಾದರೂ ಹೊಂಗೆ ಗಿಡಗಳಷ್ಟು ಹಸುರಾಗಿ ಎತ್ತರಕ್ಕೆ ಬೆಳೆಯುವ ತಾಕತ್ತು ಇಲ್ಲದೆ ಕುಬ್ಜ ಜೀವದಂತೆ ಹೊಂಗೆ ತೋಪಿನೊಳಗೆ ಶಿಖಂಡಿಯಾಗಿ ಅಡಕವಾಗಿದೆ. ನೋಡಲು ಬರಚಲು ಬರಚಲಾಗಿ ಕಂಡರೂ ಆ ಮರದ ಹಣ್ಣು ತಿನ್ನದವನೇ ಪಾಪಿ. ಜುಮ್ಮು ನೇರಳೆಹಣ್ಣು ಆಯ್ದು ಬಾಯ್ಗೆಸೆದುಕೊಂಡು. ಮರದೆತ್ತರಕ್ಕೆ ಕಲ್ಲೆಸೆದು ಸರಸರ ಆಯ್ದು ಜೇಬು ತುಂಬಿಸುವುದ ಏಕಕಾಲದಲ್ಲೆ ಮಾಡಿದೆ. ತಿಂದು ಸಾಕಾಗಿ ಸುತ್ತಲೂ ಕಣ್ಣಾಡಿಸಿ ಊರ ದಾರಿ ಹಿಡಿದೆ.

'ಯಾವನ್ಲ ಅವ್ನು ಲೇ ಹಿಡ್ಕಳ್ರೋ'! ಎಂಬ ಕೂಗು ಬೆನ್ನಿಗೆ ಪಟಾರನೆ ಬಡಿದು ಕಿವಿಗೆ ಬಿತ್ತು. ಬಿದ್ದಬೀಳ ಓಡಿದೆ. ರಾಗಿಕಡ್ಡಿ ಕೂಳೆ ಅಂಗಾಲಿಗೆ ಏರಿಕೊಂಡು ರಕ್ತ ಸೋರುವುದನ್ನು ಲೆಕ್ಕಿಸದೆ ಓಡಿದೆ. ಸುಸ್ತಾಗಿ ಬುಸುಗುಟ್ಟುತ್ತ ನಿಂತು ಹಿಂದಿರುಗಿ ನೋಡಿದೆ. ಮಾಯದ ಜನ ನನ್ನ ಹೆಜ್ಜೆ ಗುರುತು ಹಿಡಿದು ಅಟ್ಟಿಸಿಕೊಂಡು ಬರುವುದು ಕಂಡಿತು. ಬೊದಬೊದನೆ ಕಕ್ಕಿದೆ. ತಿಂದಿದ್ದ ಹಣ್ಣು ಹಂಗಂಗೆ ಈಚೆಗೆ ನೆಲದ ಮೇಲೆ ತಟ್ಟೆಯಗಲ ನೀಲಿ ಆಕಾರ ಮೂಡಿಸಿತು. ಹೊಟ್ಟೆ ಮಳ್ಳಿಸಿತು. ನೇರಳೆಹಣ್ಣು ಕದ್ದ ಕಿವುಡಣ್ಣನಿಗೆ ಆದ ಗತಿ ನನ್ನೆದುರು ಕುಣಿದಾಡಿತು. ಓಡಿದೆ. ಊರ ಮಂಡಿಲಿಗೆ ಬಿದ್ದವನು ಕಿವುಡಣ್ಣ. ಮಧ್ಯಾನ ಉಪ್ಪಿಟ್ಟು ಕೊಡುವ ಟೈಮಿಗೆ ಸರಿಯಾಗಿ ಇಸ್ಕೂಲಿನ ಬಾಕಲಲ್ಲಿ ಎಂಜಲು ಗದ್ದ ಹಾಕಿ ನಿಲುವುಗಂಬವಾಗುತ್ತಿದ್ದ. ಕಟ್ಟಿದ್ದ ಪುಟಗೋಸಿ, ಕರೆ ಉಡುದಾರ, ಮೈಗೆ ಹೊದಿಸಲು ಇದ್ದ ಸೊಸೈಟಿ ದುಪ್ಪಟಿಬಟ್ಟೆ ಬಿಟ್ರೆ ಅವನದಾಗಿ ಏನೂ ಇರಲಿಲ್ಲ. 'ಊರಾಗೆಲ್ಲಾ ಮುದ್ದೆ ಮಾರಿಗುಡೀಲಿ ನಿದ್ದೆ' ಅವನ ಫಿಲಾಸಫಿ. ಹಬ್ಬ ಬಂದಾಗ ಕಿವುಡಣ್ಣನ ಪುಟಗೋಸಿ, ದುಪ್ಪಟಿ ನೀರಿನ ಮುಖ ಕಾಣುತ್ತಿದ್ದವು.

ನೇರಳೆಹಣ್ಣು ಗಂಟುಕಟ್ಟಲು ದುಪ್ಪಟಿ ಮನಸ್ಸು ಇಚ್ಛಾ ನೆರವಾಗಿತ್ತು. ವಾರಕ್ಕೆ ಒಂದು ಸಾರಿಯಾದರೂ ಒಂದು ದುಪ್ಪಟಿ ನೇರಳೆಹಣ್ಣು ತಂದು ನಮ್ಮ ಇಸ್ಕೂಲ್ ಹುಡುಗರಿಗೆ ಹಂಚುತ್ತಿದ್ದುದು ರೂಡಿ. ಇಡೀ ಇಸ್ಕೂಲಿನ ಹುಡುಗರು ಉಪ್ಪಿಟ್ಟು ತಿನ್ನಲು ಒಂದು ವಾರಕ್ಕೆ ಆಗುವಷ್ಟು ಮುತ್ತುಗದ ಎಲೆ ತಂದುಕೊಟ್ಟು ಹೆಡ್‌ಮಾಸ್ಟರ್‌ರವರ ಪ್ರೀತಿಗೆ ಗುರಿಯಾಗಿದ್ದ. ತಿನ್ನುವಷ್ಟು ಉಪ್ಪಿಟ್ಟು ಕೊಡಿಸಿ ಮೇಸ್ಟ್ರು ಕಿವುಡಣ್ಣನ ಸಂಪಾದಿಸಿಕೊಂಡಿದ್ದರು. ಇಂಥ ಕಿವುಡಣ್ಣ ನೇರಳೆಹಣ್ಣಿನ ಕಳ್ಳನೆಂದು ಮರದ ಕಾವಲುಗಾರರಿಗೆ ಸಿಕ್ಕಿಬಿದ್ದ. ಮೈಮೇಲೆ ಪುಟಗೋಸಿಯೊಂದನ್ನು ಬಿಟ್ಟು ದುಪ್ಪಟಿ ಕಿತ್ತುಕೊಂಡು ಮೈಕೈಗೆಲ್ಲಾ ಹುಲಿಯಾಸದ ಬಣ್ಣ ಬಳಿದು, ಸೊಂಟಕ್ಕೆ ಒಂದು ಹಗ್ಗ ಬಿಗಿದು ಊರೊಳಗೆ ಮೆರವಣಿಗೆ ಮಾಡಿದ್ದರು. ಕಿವುಡಣ್ಣ ತಟ್ಟೆಹಿಡಿದು ತಮಟೆಯ 'ಜಡ್ಗುಣಕಣ್' ಲಯಕ್ಕೆ ಹುಲಿಯಾಗಿ ನನ್ನ ಕಣ್ಣೊಳಗೆ ಇಳಿದನು.

ಈ ರೀತಿಯಾಗಿ ಊರು ದಾರಿ ಹಿಡಿದು ನಡೆಯುತ್ತಿರಲು 'ಆಗಳೊ ಅಗಳೊ ಹೊಯ್ತು ಹೊಯ್ತು ಹಾಕೊ, ಹಾಕೊ' ಎಂಬ ಕೂಗಾಟ ಚೆಲುವನ ಗುಡ್ಡದ ಕಡೆಯಿಂದ ಕೇಳಿಸಿತು. ಅದು ನನ್ನ ಒಡಲೊಳಗೆ ಹುಟ್ಟಿದ ದನಿಯಾಗಿ ಸೆಳೆಯಿತು. ತಿರುಗಿದೆ. ಜನ ಕಡ್ಡಿ ಹಿಡಿದು ಓಡಾಡುತ್ತಿರುವುದು ಕಣ್ಣಿಗೆ ಬಿತ್ತು. ಅವರು ನಮ್ಮಟ್ಟಿಯವರು. ಇಲಿ ಬೇಟೆಗೆ ಬಂದಿದ್ದವರೆಂದು ಖಚಿತವಾಯಿತು, ದಡದಡನೆ ಓಡಿ ಸೇರಿಕೊಂಡೆ. ಒಬ್ಬ ಹುತ್ತ ಅಗಿಯುತ್ತಿದ್ದ. ಮೂವರು ಹಸಿ ಸರ್ವೆ ಕಡ್ಡಿ ಹಿಡಿದು ಹುತ್ತದ ಕ್ವಾವೆಗೆ ಕಣ್ಣಿಕ್ಕಿ ನಿಂತಿದ್ದರು. ಹುತ್ತ ಅಗಿಯುವ ಯಜಮಾನ ಮನುಷ್ಯ ಪಕ್ಕದಲ್ಲಿದ್ದ ಊದುರದ ಕುಡಿಕೆ ಕೊಟ್ಟು 'ಆ ಕ್ವಾವೆಗೆ ಊದ್ರ ಹಿಕ್ಕು' ಎಂದು ಹೇಳಿದ. ಕುಡಿಕೆಯೊಳಗೆ ಕೆಂಡಬೆಣ್ಣೆ ಸುಂಡಿ ಹಾಕಿ ಬಾಯಿಮುಚ್ಚಿದ್ದರಿಂದ ಬರುತ್ತಿದ್ದ ಊದ್ರ ಕುಡಿಕೆಯ ಹೊಟ್ಟೆಯಲ್ಲಿ ಕೊರೆದಿದ್ದ ತೂತಿನ ಮೂಲಕ ಕ್ವಾವೆಗೆ ನುಗ್ಗಿ ಒಳಗಿದ್ದ ಇಲಿಗಳು ಉಸಿರುಕಟ್ಟಿ ಪುದೂರನೆ ತೂರಿದವು. ಯಜಮಾನ ಕೈಲೊಂದು ಅದುಮಿ, ಎಡಗೈಲಿ ಕುತ್ತಿ ಹಿಡಿದು, ಬಲಗೈಲಿ ಬಾಲ ಹಿಡಿದು ಎಳೆದು ಕಣ್ಣುಗುಡ್ಡೆ ಮಡ್ಡಿ ಸುವಷ್ಟರಲ್ಲೆ, ಉಳಿದ ಮೂವರು ಬಯಲುಬಿದ್ದ ಇಲಿ ಬೇಟೆಯಾಡಿ ತಂದು ಗುಡ್ಡೆಗೆ ಎಸೆದು ಮುಳ್ಳು ಮೇಲೆಳೆದು ಚೆಲುವನ ಗುಡ್ಡದ ಬುಡಕ್ಕೆ ಬಂದೊ. ಹೊಡ್ಡಿದ್ದ ಒಲೆ ಅಂಗೆ ಇತ್ತು.

ತಪ್ಪಿಸಿಕೊಂಡು ಹುತ್ತ ಬಿದ್ದ ಇಲಿ ಹಿಡಿಯಲು ಹುತ್ತ ಆಗೆದರೆಂದು ಆಗ ತಿಳಿಯಿತು. ' ತಾಯಿ ಬಿಲಕ್ಕೆ ಗಿಡುಕ್ಕಿದ್ದ ಕಲ್ಲನ್ನು ಯಜಮಾನ ಕಿತ್ತು, 'ಇದ್ಕೆ ಊದ್ರ ಹಿಕ್ಕಲಮಗ' ಅಂದನು. ಮೂವರು ಕಡ್ಡಿ ಎತ್ತಿ ರೆಡಿಯಾದರು. ಯಜಮಾನ ಕಂದಾರದ ಕಡೆಯಿಂದ ಅಗೆಯುತ್ತ ಬಂದ. ಊದ್ರ ತುಂಬ್ತ ತುಂಬ್ತ ಮುಂದೆ ಇಲಿಗಳು ಕಂದಕದಿಂದ ತೂರಿ ಬಲೆಗೆ ಬಿದ್ದು ಒದ್ದಾಡುತ್ತಿದ್ದಂತೆ ರಪರಪ ಬಡಿದು ಗುಡ್ಡೆಕ್ಕೆಸೆದರು. ಗುದ್ಲಿ, ಆರೆಕೋಲು ಒಂದ್ಕಡೆ ಬಿಸಾಕಿ ಬಲೆ ಬಿಚ್ಚಿಕೊಂಡು ಯಜಮಾನ ಬಂದ. ಒಟ್ಟು ಐವತ್ತೆರಡು ಇಲಿ ಬೇಟೆಯಾಡಿದ್ದೆವು. ಚೆಲುವನ ಗುಡ್ಡದ ಬುಡದಲ್ಲಿ ಇಲಿಗುಡ್ಡೆ ಮಧ್ಯಕ್ಕೆ ಬಿಟ್ಟು ರೌಂಡಾಗಿ ಕೂತೆವು. ಊದ್ರದ ಕುಡಿಕೆಯಲ್ಲಿದ್ದ ಬೂದಿ ಸುರಿದು ತಂದು ಯಜಮಾನನ ಕೈಗೆ ಕೊಟ್ಟೆ. ಚೆಲುವನ ಗುಡ್ಡದ ಬುಡದಲ್ಲಿ ನಾವು ಕೂತಿದ್ದು, ಸಣ್ಣದೊಂದು ಗುಡ್ಡವೇ ರೂಪುಗೊಂಡಂತೆ ಕಂಡಿತು.

ಈ ಚೆಲುವನ ಗುಡ್ಡ ಮುಂದೆ ಇಲಿಗಳ ತಾಣ. ವರ್ಷವರ್ಷ ಇಲಿ ಬೇಟೆ **ಮಾಡಿ**ದರೂ ಅಲ್ಲಿ ಇಲಿಗಳು ಕಮ್ಮಿ ಆಗೇ ಇಲ್ಲ. ಎಷ್ಟು ಇಲಿಗಳಿರಬಹುದೆಂದು ಯಾರ ಅಂದಾಜಿಗೂ ಸಿಕ್ಕಿಲ್ಲ. ಗುಡ್ಡದ ಮೈಯಾದ ಮೈಯೆಲ್ಲಾ ಇಲಿಬಿಲದ ಗಾಯಗಳಿಂದ ರಣವಾಗಿ ಮೌನಿಯಾಗಿದೆ. ಜೇನುತುಪ್ಪದಲ್ಲಿ ವಿಷಕುಡಿಸಿದ ಮೇಲೆ ಚೆಲುವಯ್ಯ ಉಸಿರೆಳೆದನೆಂದು ನಂಬಿ ರಾತ್ರೋ ರಾತ್ರಿ ಎತ್ತಿನಗಾಡಿಯಲ್ಲಿ ತುಂಬಿಕೊಂಡು ಬಂದು ಕುಲ್ಲುಗುಡ್ಡದ ತುದಿಯಲಿ ಮಲಗಿಸಿ ಗಾಡಿಗಟ್ಟಲೆ ಕಲ್ಲು ಸುರಿದು ಮುಚ್ಚಲಾಗಿತ್ತು. ಚೆಲುವಯ್ಯ ಕಾಡುಹೆಣವಾಗಿದ್ದರಿಂದ ಅವನಿಗೆ ಕಲ್ಲುಬಾಣ ಮಾಡಿದ್ದರು. ಗುಡ್ಡ ಮೂರು ದಾರಿ ಕೂಡು ಜಾಗದಲ್ಲಿದ್ದು, ಹೆಣ್ಣು ಗಂಡು ಮಕ್ಕಳಾದಿಯಾಗಿ ತಿರುಗುವ ದಾರಿಹೋಕರು ಎಡಗೈಲಿ ಮೂರುಕಲ್ಲನ್ನು ಚೆಲುವನ ಗುಡ್ಡಕ್ಕೆಸೆದು, ಕಲ್ಲುಬಾಣ ಬೀರಿ ಹೋಗಬೇಕು. ಇಲ್ಲದಿದ್ದರೆ, ಚೆಲುವಯ್ಯನ ದೆವ್ವ ಅಂತವರನ್ನು ಬಿಡುವುದಿಲ್ಲವೆಂಬ ನಂಬಿಕೆಯೂ ಊರ ಒಡಲಿಗೆ ಬಿದ್ದು ದಗದಗಿಸುತ್ತಿರಲು, ನಾನು 'ಊ' ಗುಟ್ಟುವುದ ಯಾವಾಗ ನಿಲ್ಲಿಸಿದೆನೆಂದು ಹುಟ್ಟುತ್ತಿದ್ದ ಸೂರ್ಯ ಹೇಳಿದಂತಾಯ್ತು.

ಈಚಲ ಮರದಮ್ಮನ ಹಾಡು

ಕಳ್ಳುಬುಂಡೆ ನಮ್ಮಮ್ಮ
ನಿನ್ನ ಮರೆಯಲಾರೆ ॥

ಬುದ್ಧಿ ಬಂದಾಗಿನಿಂದ
ಬುಂಡೆ ಜೊತೆ ಬಾಳ್ವೆಯಮ್ಮ
ಖಂಡ ಖಂಡ ಕರಗಿದರೂ
ಬುಂಡೆ ಬಿಡಲಾರೆ ತಾಯಿ
ತಾತ ಮುತ್ತಾತರೆಲ್ಲಾ
ನಿನ್ನ ಭಕ್ತರೆ ತಾಯೇ
ನೀನಿಲ್ದೆ ನಾನಿಲ್ಲ
ನಾನಿಲ್ದೆ ನೀನಿಲ್ಲ ॥

ನಿನ್ನ ನಮ್ಮಯ ನಂಟು
ಕೂಡಿದ್ಯಾದರು ಯಾರು ?
ಕೂಲಿನಾಲಿಕುಲವೆಲ್ಲಾ
ಕರುಳು ಬಳ್ಳಿ ಎಂತಾದೆ ?
ಕೂಳಿಗಿರದೆ ಹೋದರೂನು
ನೀನಿರದೆ ನಡೆಯದಮ್ಮ
ದಿನದ ದುಡಿಮೆಯೆಲ್ಲಾ ನಿನ್ನ
ಕಂಡೊಡನೆ ಮಾಯವಮ್ಮ ॥

ದುಡಿದದ್ದೆಲ್ಲವ ಸುರಿದು
ಕಂಠಪೂರ್ತಿ ಕುಡಿದು ಬಂದ್ರೆ
ಕಣ್ಣೀರು ಸುರಿಸಿಕೊಂಡು
ಹೆಂಡತಿ ಗೋಳಾಡುತಾಳೆ
ಹಸಿದ ಮಕ್ಕಳ ಹಿಂಡು
ಕೂಳು ಕೂಳೆನ್ನುತ್ತವೆ
ಈ ಗೋಳು ಮರೆಯ ನಾನು
ಮತ್ತೆ ಶರಣಾದೆನಮ್ಮ ॥

ಈಡಿಗರ ಕುಲದೇವ
ಈಚಲವ್ವನ ಮಗಳೆ
ಕೀಳೆಂಬೊಕುಲವನೆಲ್ಲ
ಕಿರುಬೆರಳಲಿ ಕುಣಿಸುವವಳೆ
ವಿಷದ ಮತ್ತಿನಲ್ಲಿ
ಸತ್ಯವನ್ನು ಮರೆಸಿದವಳೆ
ಮೋಹದ ಜಾಲ ಬೀಸಿ
ಲೋಕವನ್ನೇ ಮುಚ್ಚಿದವಳೆ ॥

ಈಡಿಗರ ಕೈದಾಟಿ
ಕೋಡೆ ಏರಿ ಕುಳಿತೆ ತಾಯಿ
ಕೋಡೆಯ ಸುತ್ತಮುತ್ತ
ಕೋಟ್ಯಾಧೀಶರ ಕೂಟವಮ್ಮ
ಬಸವರಾಜ–ನೆಟಕಲ್ಲಪ್ಪರ
ಸಾಮ್ರಾಜ್ಯವೆ ಬೆಳೆಯಿತಮ್ಮ
ನೀರು ಪೌಡರು ಕಲಿಸಿ
ಬೆರಕೆ ಮಾಡಿದರಲ್ಲೆ
ಬೆಳದಿಂಗಳ ಮೈಬಣ್ಣ
ತೊನ್ನುರೂಪ ತಾಳಿತಲ್ಲೆ
ಹಾಲಿನಂತೆ ಇದ್ದವಳು
ಹಾಲಹಲ ಆದೆಯಲ್ಲೆ
ಊರೂರು ಪಡಕಾನೆಗೆ
ಮಾರಿಯಾಗಿ ಬಂದಿರುವೆ
ಸೆರಗು ತುಂಬಾ ಸಾವು ತಂದು
ಕೈಬೀಸಿ ಕರೆಯುತಿರುವೆ
ಗುಟುಕು ಕುಡಿದರೇನು ಸಾಕು
ಗಾಯವೆಲ್ಲಾ ಉರಿಯುತ್ತೈತೆ
ಗುಂಡಿಗೆಯ ರಕ್ತ ಹಿಂಗಿ
ಕಣ್ಣು ಕುರುಡಾಗುತ್ತೈತೆ
ಗೇಣು ಹೊಟ್ಟೆಗೆ ದುಡಿಯ
ಇರುವುದೊಂದೆ ದೇಹತಾಯಿ
ನಿನ್ನ ರಕ್ತದಾಹಕ್ಕೆ ಸಿಕ್ಕಿ
ಈ ದೇಹವ ಬಲಿಕೊಡಲಾರೆ ॥

ಹಸಿದವರ ಬದುಕ ದೋಚಿ
ಸಿರಿವಂತರ ಬೆಳೆಸುವವಳೆ
ಚುನಾವಣೆಯ ಸಮಯದಲ್ಲಿ
ಹೊಳೆಯಾಗಿ ಹರಿಯುವವಳೆ
ಆಳುವವರ ಅಸ್ತ್ರವಾಗಿ
ಕೊರಳ ಕಡಿಯ ಬಂದವಳೆ
ತಾಯಿಯಲ್ಲ ದೈವವಲ್ಲ
ಮೃತ್ಯು ಮಾರಿ ನೀನಮ್ಮ
ಬಡವರ ಬಾಳಿನಿಂದ
ದೂರ ನೀನು ತೊಲಗಮ್ಮ
ಕಳ್ಳು ಬುಂಡೆ ನಮ್ಮಮ್ಮ
ನಿನ್ನ ಮರೆತು ಬದುಕುವೆ ॥

● ಕೆ. ರಾಮಯ್ಯ

ಮಟ್ಟಕ್ಕೆ ಇಳಿದು ಕೆಲಸ ಮಾಡಬೇಕು. ಅಂದ್ರೆ ಅವರ ಮನಸ್ಸಿಗೆ ಹೊಂದುವ ಹಾಗೆ ಅವರ ಯೋಚನಾ ಮಟ್ಟವನ್ನು ಅರ್ಥ ಮಾಡ್ಕೊಂಡು ಭೋಧನೆ ಮಾಡುವ ಉಪಾಧ್ಯಾಯರು ಬೇಕು. ಅಂಥ ಉಪಾಧ್ಯಾಯರು ಈಗ ಸಿಗೋದು ಕಷ್ಟ. ಅಂತ ಕಾಳಜಿವಯಿಸಿ ಕೆಲಸ ಮಾಡುವವರು ಬಹಳ ಕಡಿಮೆ ಅನ್ಸುತ್ತೆ.

ಪ್ರಶ್ನೆ : ಅಂದ್ರೆ ನಿಮ್ಗೆ ತೃಪ್ತಿಯಾಗದೆ ಇರೊಕ್ಕೆ ಕಾರಣ ಉಪಾಧ್ಯಾಯರ ಕೊರತೆ ಅಂತಾನ ?

ಉತ್ತರ : ಕೊರತೆ ಅಂತಾಲ್ಲ, ಮನಸಿಟ್ಟು ಕೆಲಸ ಮಾಡಬೇಕು. ಈ ಭಾರತ ನನ್ನದು, ಇರುವ ಮಕ್ಕಳೆಲ್ಲ ನಮ್ಮವರು, ಹೇಗೆ ನನ್ನ ಸ್ವಂತ ಮಕ್ಕಳಲ್ಲಿ ಪ್ರೀತಿಯನ್ನು, ಒಲವನ್ನು ತೋರಿಸ್ತಿನೊ ಹಾಗೆ ಈ ಮಕ್ಕಳ ಬಗ್ಗೆಯೂ ಕೂಡ ತೋರಿಸಬೇಕು. ಅಂದ್ರೆ ದೇಶಪ್ರೇಮ ಇರ್ಬೇಕು. ಈಗಿದ್ದಾಗ ಎಲ್ಲ ಮಕ್ಕಳು ನಮ್ಮವು ಅಂತಕ್ಕಂತದ್ದು ಬರುತ್ತೆ. ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಉಪಾಧ್ಯಾಯನ ಮೇಲೆ ಗುರುತರವಾದ ಜವಾಬ್ದಾರಿ ಇದೆ. ಉದಾ : ಒಬ್ಬ ಡಾಕ್ಟರ್ ನಿರ್ಲಕ್ಷ್ಯದಿಂದ ಕೆಲಸ ಮಾಡಿದರೆ ಒಬ್ಬ ರೋಗಿಯ ಪ್ರಾಣವನ್ನೆ ತೆಗೆಯಬಹುದು. ಹಾಗೆ ಒಬ್ಬ ಉಪಾಧ್ಯಾಯ ಬೇಜವಾಬ್ದಾರಿಯಿಂದ ನಡಕೊಂಡ್ರೆ ಮಕ್ಕಳ ಭವಿಷ್ಯವನ್ನ ನಾಶ ಮಾಡಿಬಿಡಬಹುದು. ಆದ್ದರಿಂದ ಇಲ್ಲಿ ಉಪಾಧ್ಯಾಯನ ಕರ್ತವ್ಯ ಹೆಚ್ಚು.

ಪ್ರಶ್ನೆ : ಅಲ್ಲ ನಮ್ಮ ಅನಿಸಿಕೆ ಏನಂದ್ರೆ ಇವತ್ತು ಮಕ್ಕಳಿಗೆ ಮತ ಧರ್ಮ, ಸಂಸ್ಕೃತಿ ಇತ್ಯಾದಿಗಿಂತ ಅವರಿಗೆ ವಿಜ್ಞಾನದ ಬಗ್ಗೆ ಪ್ರಚಲಿತ ಸಮಾಚಾರ ವಿಷಯಗಳ ಬಗ್ಗೆ ಹೆಚ್ಚು ತಿಳಿವಳಿಕೆ ನೀಡಬೇಕು, ಅವರನ್ನ ಪ್ರಜ್ಞಾವಂತರಾಗುವಂತೆ ಮಾಡುವಂತಾಗಬೇಕು ಅನ್ನುವಾಗ ಅವರಿಗೆ ಮೌಢ್ಯತೆಗಳ ಬಗ್ಗೆ ಹೆಚ್ಚು ಭೋದಿಸುವ ಅಂಶಗಳೇ ನಮಗೆ ಎಲ್ಲಾ ದಿಕ್ಕಿನಿಂದಲೂ ಕಾಣ್ತವಲ್ಲ ಅದಕ್ಕೇನಂತಿರಾ ? ಮೂಢ ನಂಬಿಕೆಗಳ ಮೇಲೆ ಇರುವ ಪಾಠಗಳಿಂದ ಮಕ್ಕಳ ಮಾನಸಿಕ ವಿಕಾಸಕ್ಕೆ ಅವು ದಕ್ಕೆ ತರುವಂತ ಅಂತ ವಾಗಲ್ಲವಾ ?

ಉತ್ತರ : ನೋಡಿ ಇವತ್ತಿನ ನಮ್ಮ ಸಿಲಬಸ್‌ನಲ್ಲಿ, ಶಿಕ್ಷಣದಲ್ಲಿ ಮೌಢ್ಯತೆಯ ಬಗ್ಗೆ ಹೇಳುವಂತ ವಿಷಯಗಳು ಇಲ್ಲ.

ಮತ ಮೌಢ್ಯ, ಮೂಢನಂಬಿಕೆಯ ಬಗ್ಗೆ ನಾವು ಶಿಕ್ಷಣ ಕೊಡಲೆಬಾರದು. ಮಾನವ ವರ್ಗವೆಲ್ಲ ಒಂದೇ ವಿಶ್ವಕ್ಕೆ ಸೇರಿದವರು ಎಂಬ ಭಾವನೆ ಬರಿಸಬೇಕು. ನಾವೆಲ್ಲ ಒಂದೇ ಎನ್ನುವ ಭಾವನೆ ತರಬೇಕು ನಾವು.

ನಮ್ಮ ಪ್ರಶ್ನೆಗಳಿಗೆ ತಮ್ಮ ಅನುಭವದ ಹಾದಿಯಲ್ಲೆ ಉತ್ತರಿಸುತ್ತಾ ಅವರು ತಾವು ಕಂಡುಂಡ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಾವು ಇನ್ನೂ ಕೆಲಸ ಮಾಡಬೇಕು ಎನ್ನುತ್ತಾರೆ. ಮಕ್ಕಳ ವಿಷಯದಲ್ಲಿ ತುಂಬಾ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು, ಮಕ್ಕಳಿಗೆ ತಮ್ಮದೆ ಲೋಕವಿದೆ, ಅದರಲ್ಲಿ ಅವರೆಲ್ಲರೂ ತಮ್ಮತನವನ್ನು ಬೆಳೆಸಿಕೊಳ್ಳಬೇಕು. ಅದಕ್ಕಾಗಿ ನಾವು ಶ್ರದ್ಧೆಯಿಂದ ದುಡಿಯಬೇಕು— ಇತ್ಯಾದಿಯಾಗಿ ಮಾತಾಡಿದರು.

ಅನುಭವದ ಗಣಿಯಿಂದ

• ನಾರಾಯಣಪ್ಪ ಬಂಗವಾದಿ

ಅಸ್ಪೃಶ್ಯನ 'ನ್ಯಾಯಕ್ಕೆ' ತುಂಬಿ ತುಳುಕಾಡಿದ ಜನರು!

ಮಾನ್ಯರೆ,

ಏನಂತ ಬರೆಯಲಿ ಈ ಹಿಂದೂ ಧರ್ಮದೇವತೆಯ ಕಥೆಯನ್ನು : ಅಂದು ನನಗೆ ಸುಮಾರು ೧೦-೧೧ ವರ್ಷ. ನಮ್ಮ ತಂದೆ ತಾಯಿಗೆ ಮನೆ ತುಂಬ ಬರೀ ಮಕ್ಕಳು. ನಾಲ್ಕು ಹೆಣ್ಣು ನಾಲ್ಕು ಗಂಡು. ನಮ್ಮ ತಂದೆಯವರು ಹೊಟ್ಟೆ ಬಟ್ಟೆಗಾಗಿ ಕಳ್ಳಬಟ್ಟಿ ಸಾರಾಯಿ (ಮನೆಮದ್ಯ) ಮಾಡಿ, ಅದನ್ನು ಮಾರಿ ಬಂದ ಹಣದಿಂದ ಸಂಸಾರವನ್ನು ಸಾಗಿಸುತ್ತಿದ್ದರು. ಅಂದು ಸಹಾ ಪೋಲೀಸರ ಭಯ ತುಂಬಿ ತುಳುಕಾಡುತ್ತಿತ್ತು. ರಾತ್ರಿಯೇ ನಮ್ಮ ತಂದೆಯವರಿಗೆ ಹಗಲಾಗಿತ್ತು. ಮೂರು ನಾಲ್ಕು ಮೈಲಿ ದೂರದ ದಟ್ಟ ಕಾಡಿನ ಆಚೆ ಇರುವ ಒಂದು ಗ್ರಾಮದಿಂದ ತಯಾರು ಮಾಡಿ ತರುವ ಸಾರಾಯಿ ನಮ್ಮೂರಿನ ಸುತ್ತಮುತ್ತಲಿನ ಜನಕ್ಕೆ ಹೆಸರುವಾಸಿಯಾಗಿತ್ತು. ಮೇಲ್ಜಾತಿಯವರು ಸಹಾ ಸಾರಾಯಿ ಸೇವಿಸುತ್ತಿದ್ದರು. ಅದರಲ್ಲೂ ನಮ್ಮ ಕಡೆ "ಮುಸುಕ ಗೌಡರು" ಪ್ರಧಾನವಾಗಿದ್ದರು. ಇವರು ಸಹಾ ಕದ್ದು ಕದ್ದು ಬಂದು ಸಾರಾಯಿ ಸೇವಿಸಿ ಹೋಗುತ್ತಿದ್ದರು. ಒಳ್ಳೆ ಒಳ್ಳೆ ಗೌರವಸ್ಥರೆನಿಸಿಕೊಂಡ ಗೌಡರೇ ಮೂರನೇ ಪಾರ್ಟಿಯಿಂದ ತರಿಸಿಕೊಂಡು ಕುಡಿಯುವುದು ಅವರ ವಾಡಿಕೆಯಾಗಿತ್ತು. ಹೆಚ್ಚಾಗಿ ಆ ಮೂರನೇ ವ್ಯಕ್ತಿಗಳು ಹೊಲೆಮಾದಿಗರೇ ಆಗಿದ್ದರು. ಮೂರನೇ ವ್ಯಕ್ತಿ ಸಿಗದ ವೇಳೆಯಲ್ಲಿ ತಾವೇ ಸ್ವತಃ ಮುಸ್ಸಂಜೆಯಲ್ಲಿ ಬರುತ್ತಿದ್ದರು. ಗೌಡರು ಬಂದರಲ್ಲಾ ಎಂದು ತಂದೆಯವರು ಅವರಿಗೆ ಕೊಡುತ್ತಿದ್ದ ಮರ್ಯಾದೆಯೇ ಬೇರೆ. ಹರಕಲು ಪುರಕಲು ಇದ್ದ ಚಾಪೆ ಅಥವಾ ಕಂಬಳಿ ಕೆಳಗೆ ಹಾಕಿ ವಿನಯದಿಂದ ವಿಚಾರಿಸಿ ನಂತರ ಉಪಚಾರದ ಕಾರ್ಯಕ್ರಮ. ಕುಡಿದಾದ ಮೇಲೆ ನಾವು ಹೊಲೆಮಾದಿಗರಾದರೂ, ನಮ್ಮ ಒಲೆ ಮೇಲೆ ಬೇಯುತ್ತಿರುವ ಮಾಂಸದ ಸಾರು ಹಾಕಿಸಿಕೊಂಡು ತಿನ್ನುತ್ತಿದ್ದರು! ಗೌಡರು ಹರಿಜನರ ಮನೆಯಲ್ಲಿ ಮಾಂಸದ ಸಾರು ತಿಂದರಲ್ಲಾ ಎಂದು ನಮಗೆಲ್ಲಾ ಆಶ್ಚರ್ಯ.

ಇಂತಹ ಪರಿಸ್ಥಿತಿಯಲ್ಲಿ ಅನೇಕ ಗೌಡರು ಎಗ್ಗಿಲ್ಲದೇ ಹೊಲೆಮಾದಿಗರ ಮನೆಯಲ್ಲಿ ಸಾರಾಯಿನೊಂದಿಗೆ ಸಾಂಬಾರು ಕುಡಿಯುತ್ತಿದ್ದರು. ಕಾಲ ಮುಂದುವರಿಯಿತು. ಊರಿಗೆ ಸರ್ಕಾರಿ ಸಾರಾಯಿ ಸೇಂದಿ ಬಂತು. ನಮ್ಮ ಮಾವನವರೆ ಆ ಅಂಗಡಿ ತೆರೆದರು. ಅನಿವಾರ್ಯವಾಗಿ ನಮ್ಮ ತಂದೆಯವರು ಮನೆ ಮದ್ಯ ಮಾರಾಟ ಕಾರ್ಯವನ್ನು ನಿಲ್ಲಿಸಬೇಕಾಯಿತು.

ಅಂದಿಗಾಗಲೇ ನಾನು ಎಸ್. ಎಸ್. ಎಲ್. ಸಿ. ಫೇಲ್ ಆಗಿ ಮತ್ತೊಂದು ಪ್ರಯತ್ನದಿಂದ ಪಾಸಾಗಿ ಕೋಲಾರ ಕಾಲೇಜಿಗೆ ವಿದ್ಯಾಭ್ಯಾಸಕ್ಕೆ ದಾಖಲಾದೆ. ಎಸ್. ಎಸ್. ಎಲ್. ಸಿ. ಪಾಸು ಮಾಡಬೇಕಾದರೆ ನಮ್ಮ ತಾಲ್ಲೂಕ್ ಆದ ಶ್ರೀನಿವಾಸಪುರದಲ್ಲಿ ಸುಳ್ಳು ಜಾತಿ ಹೇಳಿಕೊಂಡು ಮೂಕನೋವು ಅನುಭವಿಸಿಕೊಂಡು ಕೋಲಾರಕ್ಕೆ ಬಂದರೂ ಅದೇ ಜಾತಿಯ ಕಾಟ! ಕೋಲಾರಕ್ಕೆ ಪರಿಚಯರಾದ ನಮ್ಮ ಅಣ್ಣನವರು (ನಮ್ಮ ತಂದೆ ಅಣ್ಣನ ಮಗ) ಸುಳ್ಳು ಜಾತಿ ಹೇಳಿ ಕೊಠಡಿ ಮಾಡಿದರು, ನನ್ನನ್ನು ಕೊಠಡಿಯೊಳಗೆ ಬಿಟ್ಟು ಜಾತಿಯನ್ನು ಬೇರೆ ಹೇಳು ಎಂದು ಹೇಳಿ ಉಸ್ತುವಾರಿ ಹೇಳಿ ಹೋದರು. ಅಂದು ರಾತ್ರಿ ಅಂತೂ ನನಗೆ ನಿದ್ದೆ ಬರಲಿಲ್ಲ. ಹೊಸ ಜಾಗ ಹೊಸ ಜಾತಿ! ಬೆಳಿಗ್ಗೆ ಇನ್ಯಾರಿಗೆ ನನ್ನ ಜಾತಿ ಪರಿಚಯವಾದೀತು ಎಂಬ ಭಯ. ಬೆಳಿಗ್ಗೆ ಮುಖ ತೊಳೆಯಲು ನೀರು? ಆ ದಿನ ಮುಖ ತೊಳೆಯದೇ ಕಾಲೇಜಿಗೆ ಹೋಗಬೇಕಾಯಿತು. ಮಾರನೆ ದಿನದಿಂದ ಹಾಸ್ಟೆಲ್‌ನಲ್ಲಿ ಊಟ ಸಹ ಕೊಡುತ್ತಾರೆಂದು ಗೊತ್ತಾಯಿತು. ಇನ್ನು ಬೆಳಿಗ್ಗೆ ಸಾಯಂಕಾಲ ಊಟಕ್ಕೆ ಹೋಗಬೇಕಾಗಿತ್ತು. ದಿನವೂ ರೂಂನಲ್ಲಿ ಅಡಿಗೆ ಮಾಡದಿದ್ದರೆ ನನ್ನ ಜಾತಿ ಬಯಲಿಗೆ ಬೀಳುವುದು ಅಂತ ಭಯ. ಇನ್ನು ಓದುವುದು ಎಲ್ಲಿ? ಆದರೆ ನನ್ನ ಗುಟ್ಟು ಬಯಲಾಗಿ ಅಲ್ಲಿನವರಿಗೆ ನನ್ನ ಜಾತಿ ಗೊತ್ತಾಯಿತು. ಆದರೆ ಆ ವಿದ್ಯಾರ್ಥಿಗಳು ಅಷ್ಟು ಭೇದ ಮಾಡಲಿಲ್ಲ. ಆದರೆ ಕೊಠಡಿಯ ಯಜಮಾನರಲ್ಲಿ ನೀರಿಗೆ ಹೋದಾಗ ನಾನು ತೊಟ್ಟಿಯಲ್ಲಿ ಇಳಿದು ನೀರು ಹಿಡಿದುಕೊಂಡು ಬರುವಷ್ಟಿಲ್ಲ, ಯಜಮಾನರ ಮಕ್ಕಳೆ ಬಂದು ನೀರು ಬಕೀಟಿಗೆ ಹುಯ್ಯಬೇಕಾಗಿತ್ತು. ಈ ಮೂಕ ನೋವು ಒಂದರಿ ವರ್ಷ ಅನುಭವಿಸಿದೆ. ಆಗಲೇ ನನಗೆ ಒಬ್ಬ ಗೆಳೆಯ ಪರಿಚಯವಾದ. ಆತನೂ ಹರಿಜನ ಗೆಳೆಯನೇ. ಆದರೆ ಮತ್ತೊಬ್ಬ ಹರಿಜನ ವಿದ್ಯಾರ್ಥಿಗೆ (ಪರಿಚಯವಲ್ಲದ ನನಗೆ) ಒಬ್ಬ ಮನೆಯ ಯಜಮಾನರು ಅವರ ಹಟ್ಟಿಯಲ್ಲಿ ಆ ವಿದ್ಯಾರ್ಥಿಯನ್ನು ಕುಳ್ಳಿರಿಸಿ ಊಟ ಕೊಡುತ್ತಿರುವುದು ನನಗೆ ಇನ್ನೂ ಮರೆಯಲು ಆಗುತ್ತಿಲ್ಲ. ಅದೇ ವಿದ್ಯಾರ್ಥಿ ಈಗ ಉಪಾಧ್ಯಾಯನಾಗಿದ್ದಾನೆ.

ಅಂದಿಗಾಗಲೇ 1977–78 ನೇ ವರ್ಷ ನಾನು ಮೊದಲನೆ ಪದವಿಗೆ ಕೋಲಾರದಲ್ಲೇ ದಾಖಲಾದೆ. ಅಂದಿನ ವರ್ಷವೇ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಕೋಲಾರದಲ್ಲಿ ಒಂದು ಸಮ್ಮೇಳನ ಏರ್ಪಡಿಸಿತ್ತು. ಅಂದು ಮೆರವಣಿಗೆಯೂ ಇತ್ತು. ಆ ಮೆರವಣಿಗೆಯಲ್ಲಿ 10–20 ಜನ ವಿದ್ಯಾರ್ಥಿಗಳಿಗಿಂತ ಹೆಚ್ಚಿರಲಿಲ್ಲ. ಈ ಸಣ್ಣ ಪುಟ್ಟ ಗುಂಪೇ ಟೌನ್ ಹಾಲ್‌ನಲ್ಲಿ ಸಿದ್ದಲಿಂಗಯ್ಯನವರ ಭಾಷಣ ಏರ್ಪಡಿಸಿದ್ದರು. ಸಿದ್ದಲಿಂಗಯ್ಯನವರ ಭಾಷಣದಿಂದ ಕೆಲವು ವಿದ್ಯಾವಂತರೂ ದ. ಸಂ. ಸ. ದಲ್ಲಿ ಆಕರ್ಷಿಸಲ್ಪಟ್ಟರು. ಅದೇ ವರ್ಷವೇ ದಲಿತ ವಿದ್ಯಾರ್ಥಿಗಳಿಗೆ ಸರ್ಕಾರಿ ಕಟ್ಟಡ ನಿರ್ಮಿಸೋ ರೀತಿಯಾಯಿತು. (ಈಗ ಒಂದು ಅಂತಸ್ತು ತಯಾರಾಗಿದೆ) ಆ ಹೋರಾಟದಿಂದ ಪ್ರಾರಂಭವಾದ ದಲಿತ ಸಂಘರ್ಷ ಸಮಿತಿ ಕೋಲಾರದಲ್ಲಿ ದಲಿತರಿಗೆ ಮಂಗೋಳಿ ಕೂಗಾಯಿತು. ನಾನು ಸಹಾ ದ. ಸಂ. ಸ. ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಆಗಲೇ ನನಗೆ ಹೋರಾಟ ಜೀವಿ ಡಾ॥ ಅಂಬೇಡ್ಕರ್ ಪರಿಚಯವಾಗಿದ್ದು. ಈರೀತಿ ದ. ಸಂ. ಸ. ಬೆಳೆಯುತ್ತಿರುವಾಗಲೇ 1979–80 ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕೋಲಾರ ಜಿಲ್ಲಾ ಶಾಖೆ ಐತಿಹಾಸಿಕ ಗೆಲವು ಪಡೆದಿತ್ತು. ಅದೇ ಮಾಲೂರು ತಾಲ್ಲೂಕ್ ಬೋರ್ಡ್ ಅಧ್ಯಕ್ಷ ಹುಣಿಸಿ ಕೋಟೆ ಆರ್. ಕೃಷ್ಣೇಗೌಡನಿಗೆ ಜೈಲು ಶಿಕ್ಷೆ.

1979–80 ರಲ್ಲೆ ನನ್ನ ವಿದ್ಯಾಭ್ಯಾಸವು ಕೋಲಾರದಲ್ಲಿ ಮುಗಿದು ನನ್ನ ಸ್ವಗ್ರಾಮದಲ್ಲಿ ಇರಬೇಕಾಯಿತು. ದಲಿತ ವಿದ್ಯಾರ್ಥಿಗಳು ಸವರ್ಣಿಯ ವಿದ್ಯಾರ್ಥಿಗಳ ಸ್ನೇಹವು ನನಗೆ ತುಂಬಾ ಚೆನ್ನಾಗಿತ್ತು. ಊರಿನ ಗೌಡರಂತೂ ನನ್ನನ್ನು ಮೆಚ್ಚಿಕೊಂಡಿದ್ದರು. ಕಾರಣ ನಾನು ಕೋಲಾರಕ್ಕೆ

(15 ನೇ ಪುಟ ನೋಡಿ)

ಮುಳಕಟ್ಟಮ್ಮನ ಅಸ್ಪೃಶ್ಯ ಪ್ರೇಮ

ಭಾರತ ದೇಶವು ಹಲವಾರು ವಿಶಿಷ್ಟತೆಗಳನ್ನು ಹೊಂದಿದೆ. ಇದು ಬಡವರಿಂದ ತುಂಬಿರುವ ಸಮೃದ್ಧ ರಾಷ್ಟ್ರವಂತೆ. ಎಪ್ಪತ್ತು ಕೋಟಿ ಜನ ಸಂಖ್ಯೆಯನ್ನೂ 330 ಕೋಟಿ ದೇವರುಗಳನ್ನೂ ಹೊಂದಿರುವ ದೊಡ್ಡ ದೇಶ. ಜೊತೆಗೆ ಎಣಿಸಲಾರದಷ್ಟು ಜಾತಿಗಳನ್ನು ಹೊಂದಿರುವ ಈ ನಾಡಿನ ವೈವಿಧ್ಯತೆಗಳತ್ತ ಕಣ್ಣು ತೆರೆಯೋಣ.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನಲ್ಲಿ 'ಕಲ್ಲು ಕೆರೆ' ಎಂಬ ಒಂದು ಸಣ್ಣ ಹಳ್ಳಿ ಇದೆ. ಕೆಂದೂಳಿನ ದಾರಿಯಲ್ಲಿ ನಡೆಯುತ್ತಾ ಏಳೆಂಟು ಬೀದಿಗಳನ್ನು ಬಿಟ್ಟು ಬಂದರೆ ಊರು ಮುಗಿಯುತ್ತದೆ. ಬಲಕ್ಕೆ ಕಣ್ಣು ಹಾಯಿಸಿದರೆ ಒಂದು ದೇವಸ್ಥಾನ ಕಲ್ಲುಗಳಿಂದ ಕಟ್ಟಿರುವ ಗುಡಿಯ ಮೇಲೆ ನಾಲ್ಕು ನಾಲ್ಕು ಕೈಗಳನ್ನು ಹೊಂದಿರುವ ಮೂರು ಹೆಣ್ಣು ದೇವರ ಚಿತ್ರ ಕಡೆದಿದ್ದಾರೆ. ಇವರ ಎಡ ಮತ್ತು ಬಲ ತುದಿಗಳಲ್ಲಿ ಸಿಂಹಗಳು ಮಲಗಿ ಕಾವಲು ಕಾಯುತ್ತಿವೆ. ಆದರೆ ಎರಡು ಸಿಂಹಗಳ ತಲೆಗಳು ಈಗ ಇಲ್ಲ. ಇದನ್ನೆಲ್ಲಾ ಮನದಲ್ಲಿ ತುಂಬಿಕೊಂಡು ಒಳಪ್ರವೇಶಿಸಿದರೆ ಒಂದು ಅಂಗಳ, ನಾಲ್ಕು ಕಲ್ಲಿನ ಕಂಬಗಳು ಮೇಲ್ಛಾವಣಿಯನ್ನು ಹೊತ್ತು ನಿಂತಿದೆ ಗರ್ಭಗುಡಿಯಲ್ಲಿ ಕಪ್ಪು ಶಿಲೆಯ ವಿಗ್ರಹವಿದೆ. ಅದೇ ಆ ಊರಿನ ಪ್ರಭಾವೀ ದೇವತೆ "ಮು. ಕಟ್ಟಮ್ಮ" ಉರುಫ್ ಉಚ್ಚಮ್ಮ. ಈ ದೇವತೆಯು ಜಾತ್ರೆಯ ಸಮಯದಲ್ಲಿ ಮಾತ್ರ ಡ್ರೆಸ್ ಮಾಡಿಕೊಳ್ಳುತ್ತಾಳೆ. ಮುಖ ಬಿಟ್ಟು ಉಳಿದ ಭಾಗವೆಲ್ಲ ಬಟ್ಟೆ ಮತ್ತು ಹೂಗಳಿಂದ ಮುಚ್ಚಿರುತ್ತೆ. ಈಕೆ ಡ್ರೆಸ್‌ನಲ್ಲಿದ್ದಾಗ ತೆಗೆದ ಒಂದು ಫೋಟೋ ಗರ್ಭಗುಡಿಯ ಎಡಭಾಗದ ಮೇಲೆ ನೇತುಹಾಕಿದ್ದಾರೆ. ಅದರ ಮೇಲೆ 'ಕಲ್ಕೆರೆ ಕುರಿಯವರಿಂದ ಕೊಡುಗೆ' ಎಂದು ಬರೆದಿದೆ ಮತ್ತೆ ಬಲಭಾಗದ ಗೋಡೆಯಲ್ಲಿ ಗಂಡು ಮತ್ತು ಹೆಣ್ಣು ದೇವರಿರುವ ಒಂದು ಫೋಟೊ (ಹೆಸರು ನೆನಪಿಲ್ಲ) ಈ ದೇವಾಲಯದಲ್ಲಿ ಒಂದು ಸಣ್ಣ ಮತ್ತು ಒಂದು ದೊಡ್ಡ ಗಂಟೆ ಎರಡು ಮಂಗಳಾರತಿ ತಟ್ಟೆ, ಕರ್ಪೂರ ಇಟ್ಟು ಬೆಳಗುವ ದೂಪಾರತಿಯೊಂದಿದೆ. ಈ ಮುಳಕಟ್ಟಮ್ಮ ನಾಗಮಂಗಲದ ಹತ್ತಿರವಿರುವ 'ಮುಳುಕಟ್ಟೆ' ಯಿಂದ ಕೆ. ಹನುಮಂತಯ್ಯ ಎಂಬುವರ ವಂಶಕ್ಕೆ ಒಲಿದು ಬಂದ ದೇವತೆಯಾಗಿದೆ. ಸುಮಾರು ಮೂರು ತಲೆಮಾರುಗಳಿಂದ ಈ ದೇವತೆಯನ್ನು ಪೂಜಿಸಿಕೊಂಡು ಬರುತ್ತಿದ್ದಾರೆ. ಈ ಹನುಮಂತಯ್ಯನೆಂಬ 'ಅಸ್ಪೃಶ್ಯ'ನೇ ಈ ದೇವರ ಪೂಜಾರಿ. ಈತನು ಬ್ರಾಹ್ಮಣರಂತೆಯೇ ಬಿಳಿ ಬಟ್ಟೆ ಉಟ್ಟು ಪೂಜೆ ಮಾಡುತ್ತಾನೆ. 'ಮಂತ್ರ ಹೇಳುತ್ತಾ ಪೂಜೆ ಮಾಡ್ತಿಯೇನಪ್ಪ' ಎಂದು ನಾನು ಕೇಳಿದಾಗ 'ಇಲ್ಲ ಸ್ವಾಮಿ, ಭಕ್ತಿಯಿಂದ ಪೂಜೆ ಮಾಡ್ತೀನಿ, ಮಂತ್ರ ಬರಲ್ಲ' ಎಂದು ಮುಜುಗರದಿಂದ ಉತ್ತರಿಸಿದ.

ಅಸ್ಪೃಶ್ಯ ಪೂಜಾರಿಯಾಗಿರುವ ಈ ದೇವಾಲಯಕ್ಕೆ ಅಸ್ಪೃಶ್ಯ ಜನಾಂಗ ಪ್ರವೇಶಿಸುವಂತಿಲ್ಲ. ಪೂಜಾರಿ ಗರ್ಭಗುಡಿಯಲ್ಲಿ, ಸವರ್ಣೀಯರು ಆಲಯದೊಳಗೆ, ಅಸ್ಪೃಶ್ಯ ಜನಾಂಗ ಮಾತ್ರ ದೇವಾಲಯದ ಹೊರಬಾಗಿಲಲ್ಲಿ ನಿಂತು ಭಕ್ತಿಯಿಂದ ಅಮ್ಮನವರ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಹರಿಜನರ ಗುಡಿಪ್ರವೇಶವನ್ನು ಸವರ್ಣೀಯರು ನಿಯಂತ್ರಿಸುತ್ತಿದ್ದಾರೆಂದು ಪೂಜಾರಿಯ ಆಕ್ಷೇಪಣೆ ಏನೂ ಇಲ್ಲವೆಂದು ತಿಳಿಯಿತು.

ಪೂಜೆಯು ಪ್ರತಿದಿನ ಬೆಳಿಗ್ಗೆ ನಡೆಯುತ್ತೆ. ಪೂಜೆಗೆ ಬರುವ ಸವರ್ಣೀಯರು ದೇವರಿಗೆ ಬೇಕಾಗುವ 'ಎಡೆ ಅನ್ನ' ತಯಾರಿಸಲು ಅಕ್ಕಿಯನ್ನೇ ಪೂಜಾರಿಯ ಮನೆಗೆ ಕೊಟ್ಟುಬಿಡುತ್ತಾರಂತೆ. ನಂತರ ಪೂಜಾರಿ ಅನ್ನ ಮಾಡಿಕೊಂಡು ದೇವಾಲಯಕ್ಕೆ ತರುತ್ತಾನೆ. ಈ ಅನ್ನವನ್ನು ಸವರ್ಣೀಯ ಭಕ್ತರು ವಾಪಸ್ಸು ತೆಗೆದುಕೊಳ್ಳುವುದಿರಲಿ ಮುಟ್ಟುವುದೂ ಇಲ್ಲವಂತೆ. ಪೂಜಾನಂತರ ಮಂಗಳಾರತಿಯನ್ನು ಗರ್ಭಗುಡಿಯ ಹೊಸ್ತಿಲಿನ ಮೇಲೆ ಇಡಬೇಕು. ಆಗ ಮಾತ್ರ ಸವರ್ಣೀಯರು ಭಕ್ತಿಯಿಂದ ಮಂಗಳಾರತಿ ತೆಗೆದುಕೊಳ್ಳುತ್ತಾರೆ. ಹೊರಬಾಗಿಲಲ್ಲಿ ನಿಂತಿರುವ ಹರಿಜನರು ಅಲ್ಲಿಂದಲೇ ಮಂಗಳಾರತಿ ತೆಗೆದುಕೊಂಡು ಭಕ್ತಿಯಿಂದ ಕಣ್ಣು ಮುಚ್ಚಿಬಿಡುತ್ತಾರೆ.

ಯುಗಾದಿಯ ಸಂಭ್ರಮ ಮಾಸುವುದರೊಳಗಾಗಿ ಮುಳಕಟ್ಟಮ್ಮ ಜಾತ್ರೆ ನಡೆಯುತ್ತದೆ. ಯುಗಾದಿಯಾದ 15 ನೇ ದಿನದಂದು ಈ ದೇವತೆಯ ಉತ್ಸವ ನಡೆಯುತ್ತವೆ.

ಜಾತ್ರೆಯಲ್ಲಿ ಭೂತವಾನ, ತೇರು ಮುಂತಾದ ದೇವತಾಕಾರ್ಯಗಳು ನಡೆಯುತ್ತವೆ.

ದೇವಾಲಯದ ಒಳಪ್ರವೇಶಿಸಿದ ನಾನು ಮತ್ತು ನನ್ನ ಗೆಳೆಯ ತಿರುಗಿ ನೋಡಿದಾಗ ನಮ್ಮ ಜೊತೆಯಲ್ಲೇ ಬಂದ ಸ್ಥಳೀಯ ವಿದ್ಯಾವಂತ ದಲಿತ ಯುವಕರು ಬಾಗಿಲಲ್ಲಿ ನಿಂತಿದ್ದರು. ದೇವಾಲಯದ ಮುಂದೆ ಇದ್ದ ಬೇವಿನ ಮರವು 'ಊರವರ ಎಲ್ಲಾ ಗುಣಗಳೂ ನನ್ನ ರುಚಿಯಂತೆ' ಎಂದು ತನ್ನಡಿಗೆ ಕರೆಯಿತು.

● ಎಂ. ಸಿ. ನರಸಿಂಹಮೂರ್ತಿ

ಹಣ್ಣು ತಿಂದವರ ಹೊಟ್ಟೆ ಉರಿ

ಇತ್ತೀಚೆಗೆ ಮಳವಳ್ಳಿ ತಾಲ್ಲೂಕಿನ ರೈತರ ಕುಂದುಕೊರತೆಗಳನ್ನು ಚರ್ಚಿಸಲು ರೇಷ್ಮೆ ಇಲಾಖೆಯ ಅಧಿಕಾರಿಗಳು ನಮ್ಮ ಸ್ವಗ್ರಾಮವಾದ ಹಲಸ ಹಳ್ಳಿಯಲ್ಲಿ ಸುಮಾರು 4 ತಿಂಗಳ ಹಿಂದೆ ಒಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ನಮ್ಮೂರಿನ ಕೆಲವು ಯುವಕರು ಭಾಗವಹಿಸಿದ್ದರು. ರೇಷ್ಮೆ ಇಲಾಖೆಯ ಅಧಿಕಾರಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯು ಆರಂಭವಾಯಿತು. ತಾಲ್ಲೂಕಿನ ರೈತ ಸಂಘದ ಯುವಕ ರೈತರು ತಮಗೆ ಇರುವ ತೊಂದರೆಗಳನ್ನು ಹೇಳಿದರು. ಎಲ್ಲಾ ಹೇಳಿದ ನಂತರ ಸಭೆಯಲ್ಲಿ ಭಾಗವಹಿಸಿದ ಹಲಸ ಹಳ್ಳಿ ಗ್ರಾಮದ ದಲಿತ ಯುವಕನಾದ ನಾನು ಒಂದು ಸಮಸ್ಯೆಯನ್ನು ಮುಂದಿಟ್ಟೆ. ಸಮಸ್ಯೆ ಏನೆಂದರೆ ರೈತರಿಗೆ ಸರಬರಾಜು ಮಾಡುತ್ತಿರುವ ರೇಷ್ಮೆ ಮೊಟ್ಟೆಯು ತೀರಾ ಕಳಪೆಯದಾಗಿದ್ದು, ಸಕಾಲಕ್ಕೆ ಸಿಗುವುದಿಲ್ಲ ಎಂದು ತಿಳಿಸಿದೆ. ಅದಕ್ಕೆ ಸಮ್ಮತಿಸಿದ ಅಧಿಕಾರಿಗಳು ಸಕಾಲದಲ್ಲಿ ಸರಬರಾಜು ಮಾಡುವುದಾಗಿ ಆಶ್ವಾಸನೆ ನೀಡಿದರು.

ಸಭೆಯಲ್ಲಿ ಭಾಗವಹಿಸಿದ್ದ ಇತರೆ ರೈತಯುವಕರು ತಿನ್ನುವಜಾತಿ ತಿನ್ನುವ ಮೂಢರು ಹರಿಜನರಿಗೆ ಉಚಿತವಾಗಿ ರೇಷ್ಮೆ ಹುಳು ಸಾಕುವ ತಟ್ಟೆ, ಚಂದ್ರಿಕೆ ಯಾಕೆ ಕೊಡಬೇಕು ? ಅವರಿಗೆ ಬಡವರಾಗಿರುವವರು ನಮ್ಮಲ್ಲಿ ಇದ್ದಾರೆ ಕೊಡಿ ಎಂದೆಲ್ಲಾ ಕೂಗಾಡಿದರು. ಅದಕ್ಕೆ ನಾನು "ಬಾಳೆ ಹಣ್ಣು ತಿಂತಾ ಇರೋರೇ ನೀವು, ನಮ್ಮ ಜನ ಅದರ ಸಿಪ್ಪೆ ತಿನ್ನೋದಕ್ಕೂ ಇಷ್ಟು ಹೊಟ್ಟೆಕಿಚ್ಚು ಪಡ್ತೀರಿ ಸರೀನಾ" ಎಂದು ಕೇಳಿದೆ. ನಂತರ ಕಾಫಿ ಸರಬರಾಜು ಮಾಡಿದ ಹರಿಜನ ಉದ್ಧಾರಕರು ನನಗೆ ಕಾಫಿ ಕೊಡಲೇ ಇಲ್ಲಾ. ನಂತರ ಅಧಿಕಾರಿಗಳ ಗಮನಕ್ಕೆ ತಂದ ನಂತರ ಕಾಫಿ ಕೊಟ್ಟರು. ನಂತರ ಗ್ಲಾಸನ್ನು ತೆಗೆಯಲೇ ಇಲ್ಲಾ. ಕೋಪ ಬಂದು ಕಾಫಿ ಗ್ಲಾಸನ್ನು ಕೈಯಲ್ಲಿ ಅಪ್ಪಚ್ಚಿ ಮಾಡಿ ಆಚೆ ಬಂದೆ.

● ಹೆಚ್. ಕೆ. ಜಯಲಿಂಗು

ನಿಷ್ಠೆ ಪ್ರಾಮಾಣಿಕತೆಗಳ ಶ್ರೇಷ್ಠ ಅಧ್ಯಾಪಕ ಚನ್ನಬಸವಯ್ಯ

''ನನಗೆ ಈ ಕೆಲಸದ ಬಗ್ಗೆ ಬಹಳಷ್ಟು ತೃಪ್ತಿ ಇದೆ. ಸ್ವಂತ ಇಚ್ಛೆಯಿಂದಲೆ ನಾನು ಈ ಕೆಲಸವನ್ನು ಆರಿಸಿಕೊಂಡೆ. ಅದರಲ್ಲಿ ನನ್ನೆಲ್ಲ ಕ್ರಿಯಾತ್ಮಕ ಶಕ್ತಿಯನ್ನೂ ಬೆಳೆಸಿಕೊಂಡೆ. ಹೀಗಾಗಿ ನಾನು ನನ್ನ ಜೀವನದಲ್ಲಿ ತುಂಬ ಸಾರ್ಥಕವಾದ ಕೆಲಸ ಮಾಡಿದ್ದೇನೆ ಮಾಡುತ್ತಿದ್ದೇನೆ ಅನ್ನಿಸಿದೆ'' ಹೀಗೆ ಹೇಳಿದವರು ಮೈಸೂರಿನ ''ಕುಕ್ಕರಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆ'' ಯ ಮುಖ್ಯೋಪಾಧ್ಯಾಯರಾದ ಹಾಗೂ ೧೯೮೩ ನೇ ಸಾಲಿನಲ್ಲಿ ಶ್ರೇಷ್ಠ ಅಧ್ಯಾಪಕ''ರೆಂದು ಕರ್ನಾಟಕ ಸರ್ಕಾರದಿಂದ ಪ್ರಶಸ್ತಿಗಳಿಸಿರುವ ಶ್ರೀ ಚೆನ್ನಬಸವಯ್ಯನವರು.



ಸುಮಾರು ೬೫ ವರ್ಷದ ಹೊಸ್ತಿಲಲ್ಲಿ ಇರುವ ಇವರು ೨೨ ವರ್ಷಗಳ ಹಿಂದೆ ಸರಗೂರಿನಲ್ಲಿ ಈ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡರು. ಅಲ್ಲಿ ಬಹಳ ನಿಷ್ಠೆಯಿಂದ ದುಡಿದು ಹೆಸರು ಮಾಡಿದ್ದರು. ಸರಗೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಸುತ್ತಮುತ್ತಲ ಹಳ್ಳಿಗಳಿಂದ ಅನೇಕ ಮಕ್ಕಳು ಬರುತ್ತಿದ್ದು, ಅವರಿಗೆ ಉಚಿತ ವಸತಿ, ಊಟ ಇತರ ಸೌಲಭ್ಯಗಳ ಅಗತ್ಯವಿದೆ ಎಂಬುದನ್ನು ಕಂಡು ಕೇಳಿ ತಿಳಿದುಕೊಂಡರು. ಹಳ್ಳಿ ಹಳ್ಳಿ ತಿರುಗಿ ಅನೇಕ ಗಣ್ಯರನ್ನು ಕಲೆಹಾಕಿ ಒಂದು ಹಾಸ್ಟಲ್ ತೆರೆದರಂತೆ. ಬೀದಿ ಬೀದಿ ತಿರುಗಿ ದವಸ ಧಾನ್ಯ ಸಂಪಾದಿಸಿ ಬಹಳ ಸಭ್ಯತೆಯಿಂದ ಹಾಸ್ಟಲ್ ನಡೆಸಿ, ಪ್ರಾಮಾಣಿಕ ದುಡಿಮೆಗೆ ಅರ್ಥ ತಂದುಕೊಟ್ಟರು. ಸುಮಾರು ೧೨ ವರ್ಷ ಈ ಉಧ್ಯಮದಲ್ಲಿ ತುಂಬಿದ ಮೇಲೆ ತಾವೇ ಸ್ವತಃ ವರ್ಗಾವಣೆ ಕೇಳಿಕೊಂಡು ಮೈಸೂರಿನ ಕುಕ್ಕರಹಳ್ಳಿಗೆ ಬಂದರು.

ಆಗ ಕುಕ್ಕರಹಳ್ಳಿಯ ಶಾಲೆ ಒಂದು ಪುಟ್ಟ ಮನೆಯಲ್ಲಿ ಎಲ್ಲಾ ತರಗತಿಗಳೂ ನಡೆಯುತ್ತಿದ್ದವು. ಇಲ್ಲಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಇವರು ಸುತ್ತ ತಮ್ಮ ಚಟುವಟಿಕೆಯನ್ನು ಹಂತ ಹಂತವಾಗಿ ಪ್ರಾರಂಭಿಸಿ ಅನೇಕ ಕಾರ್ಯಕ್ರಮ ಹಾಕಿಕೊಂಡರು. ಅವರ ಶ್ರಮದಿಂದಾಗಿ ಈಗ ಇಲ್ಲಿನ ಶಾಲೆ ಒಂದು ಮಾದರಿ ಶಾಲೆಯಾಗುವಂತೆ ಮಾಡಿದರು. ಪ್ರತಿಯೊಂದು ತರಗತಿಗೂ ಪ್ರತ್ಯೇಕ ಕೊಠಡಿಯನ್ನು ಕಟ್ಟಿಸಿ, ತಮ್ಮಂತೆ ಶ್ರದ್ಧೆಯಿಂದ ದುಡಿಯುವ ಅನುಭವಿ ಉಪಾಧ್ಯಾಯರುಗಳನ್ನು ಬರುವ ವ್ಯವಸ್ಥೆ ಮಾಡಿಕೊಂಡು ಈ ಶಾಲೆಯನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಿದ್ದಾರೆ. ಆಗ ಮಕ್ಕಳ ಸಂಖ್ಯೆ ೫೦ ಇದ್ದದು ಇಂದು ೬೫೦ ರಿಂದ ೫೦೦ ರ ವರೆಗೆ ಹೆಚ್ಚಿದೆ. ಎಲ್ಲಾ ಜಾತಿಯ, ಎಲ್ಲಾ ವರ್ಗದ ಮಕ್ಕಳು ಕಲಿಯಲು ಬರುತ್ತಿದ್ದಾರೆ.

ತಮ್ಮ ಕಾರ್ಯಕ್ರಮಗಳಿಗೆ ಶ್ರದ್ಧೆಯಿಂದ ಎರಡಿಲ್ಲದೆ ದುಡಿಯುವ ತನ್ನ ಸಹ ಉಪಾಧ್ಯಾಯ ವೃಂದವನ್ನು ತುಂಬು ಹೃದಯದಿಂದ ನೆನೆಯುತ್ತಾರೆ. ಜೊತೆಗೆ ಇವರಿಗೆ ಅತ್ಯಂತ ಪ್ರೇರಕ ಶಕ್ತಿಗಳಾಗಿರುವ ಗಾಂಧಿವಾದಿಗಳಾದ ಶ್ರೀ ಬಿ. ಆರ್. ಪ್ರಾಣೇಶ ರಾವ್ ಮತ್ತು ಶ್ರೀನಿವಾಸನ್ ಇತ್ಯಾದಿ ಗಣ್ಯರು ಇವರನ್ನು ಎಲ್ಲಾ ಹಂತದಲ್ಲೂ ಪ್ರೋತ್ಸಾಹಿಸಿ, ಇಂದು ಇವರನ್ನು ರಾಜ್ಯ ಪ್ರಶಸ್ತಿ ವಿಜೇತರನ್ನಾಗಿ ಮಾಡಿರುವುದು ಇವರಿಗೆ ಅತ್ಯಂತ ಗೌರವದ ಸಂಗತಿ.

ಇಂಥ ಒಬ್ಬ ಅದ್ಯಾಪಕ ಮೇದಾವಿ ಹೇಳುತ್ತಾರೆ : ''ನಾನು ಪ್ರಶಸ್ತಿಗೆ ದುಡಿಯಲಿಲ್ಲ. ನನ್ನ ಈ ಶ್ರಮಕ್ಕೆ, ದುಡಿಮೆಗೆ ಮೂಲ ಕಾರಣ ಅಂಬೇಡ್ಕರ್ ಅವರು ಹೇಳಿದ ಪ್ರಜ್ಞಾವಂತರಾಗಿ, ವಿದ್ಯಾವಂತರಾಗಿ ಅನ್ನು...ವ ಒಂದು ಮಹಾವಾಕ್ಯ ನನ್ನ ಇಷ್ಟು ಕೆಲಸ... ಮಾಡಲು ತೊಡಗಿಸಿತು. ಅದರಂತೆ ನಾನು... ನನ್ನ ಜನಕ್ಕೆ, ಎಲ್ಲಾ ವರ್ಗದ ಮಕ್ಕಳಿಗೂ... ವಿದ್ಯೆಯನ್ನು, ಜ್ಞಾನಾರ್ಜನೆಯನ್ನು... ಮಾಡಿಸುವುದರ ಮೂಲಕ ಪ್ರಜ್ಞಾವಂತ...ನ್ನಾಗಿ ಮಾಡಬಹುದು ಅನ್ನುವ ಸತ್ಯ ಅರಿ...ವಾಯ್ತು. ಹಾಗಾಗಿ ನಾನು ಒಬ್ಬ ಉಪಾ...ಧ್ಯಾಯನಾಗಿ ಮಾಡಬೇಕಾದ ಕೆಲಸವನ್ನು... ಅತ್ಯಂತ ನಿಷ್ಠೆಯಿಂದ ಮಾಡಿದ್ದೇನೆ.''

ಮಹಾದೇವಪ್ಪ
ತುಕಾರಾಂ

ಇವರಿಗೆ ರಾಜ್ಯ ಪ್ರಶಸ್ತಿ ಬಂದಾಗ ಸಂಪ...ದಾಯದಂತೆ ಕುಕ್ಕರಹಳ್ಳಿಯಲ್ಲಿರು... ''ಡಾ. ಬಿ. ಆರ್. ಅಂಬೇಡ್ಕರ್ ಯುವಕ ಸಂಘ''ದ ಆಶ್ರಯದಲ್ಲಿ ನಾವು ಸನ್ಮಾನಿಸಿದೆವು. ಜೊತೆಗೆ ಇವರನ್ನು ಎಲ್ಲಾ ಜನರಿಗೂ ಪರಿಚಯಿಸುವ ಅಗತ್ಯವಿದೆಯೆಂದು ಭಾವಿಸಿ ''ಪಂಚಮ''ಕ್ಕೆ ಸಂದರ್ಶಿದಾಗ ಅವರಾಡಿದ ಕೆಲವು ಮಾತಗಳು ಇಲ್ಲವೆ :

ಪ್ರಶ್ನೆ : ಇವತ್ತಿನ Education System ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉತ್ತರ : ಅಂದ್ರೆ ಪ್ರಾಥಮಿಕ ಹಂತದಲ್ಲಿ ಮುಖ್ಯವಾಗಿ ಬೇಕಾಗಿರುವಂತದ್ದು ಮಗುವಿನ ಕಲಿಕೆ. ಅಂದ್ರೆ ಮಗು ಕಾಗುಣಿತ, ಮಗ್ಗಿ ಅಕ್ಷರವನ್ನು ತಿಳಿದ್ಕೊಂಡು ಅದನ್ನ ಸ್ವಚ್ಛವಾಗಿ ಹೇಳುವಂತೆ ತರಪೇತುಮಾಡುವುದು. ಥ್ರೀಹಾರ್ಸ್ ಅಂತ (1) ಓದುವುದು (2) ಬರೆಯುವುದು (3) ಗಣಿತ ಮುಖ್ಯವಾಗಿ ಮಕ್ಕಳಿಗೆ ಕಲಿಸಬೇಕು. ಪ್ರಾಥಮಿಕ ಹಂತದಲ್ಲಿ ತಳಪಾಯ ಚೆನ್ನಾಗಿ ಹಾಕಿದ್ರೆ ಮುಂದೆ ಮಗು ಕಲಿಯುವುದಕ್ಕೆ ಸಹಾಯಕವಾಗುತ್ತೆ. ಪ್ರಾಥಮಿಕ ಹಂತದಲ್ಲಿ ಹಳ್ಳಿಗಳಲ್ಲಿ ದೀನ ದಲಿತರು ಇರುವ ಕಡೆಯಲ್ಲಿ ಸ್ವಲ್ಪ ಕಷ್ಟವಾಗುತ್ತೆ. ಯಾಕೆಂದ್ರೆ ತಂದೆ ತಾಯಿಗಳಲ್ಲಿ ಉತ್ಸಾಹ ಇರೊಲ್ಲ–ಅವರಿಗೆ ಏನೋ ಒಂದು ರೀತಿ ತಾತ್ಸಾರ ಭಾವನೆ ಇರುತ್ತೆ. ಆದರೆ ಈಗ ಸ್ವಲ್ಪ ಬದಲಾಯಿಸುತ್ತಿದೆ. ಸ್ವಲ್ಪ ಮಟ್ಟಿಗೆ ತಿಳ್ಕೊತ್ತಿದ್ದಾರೆ. ಕೆಲವು ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿ ಕೆಲಸ ಇತ್ಯಾದಿ ಹೊರೆಯಿಂದಾಗಿ ಬಳಲುತ್ತಿದ್ದಾರೆ. ಅಂತವರ್ಗೆಲ್ಲ ನಾವು ಚೆನ್ನಾಗಿ ಶ್ರಮ ತಕ್ಕೊಂಡು ಕಲ್ಸಬೇಕು. ಆದರೂ ನನ್ನ ಮಟ್ಟಿಗೆ ತೃಪ್ತಿ ಕಾಣ್ತಿಲ್ಲ.

ಪ್ರಶ್ನೆ : ಯಾಕೆ ?

ಉತ್ತರ : ಯಾಕೆಂದ್ರೆ ಉಪಾಧ್ಯಾಯರು ಅ...